ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ—೫

ನಮ್ಮ ಹಳ್ಳಿಗಳು

ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೨

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ—೫

ನಮ್ಮ ಹಳ್ಳಿಗಳು

ಹಿಂದೆ ಹೇಗೆ ಮುಂದೇನು

ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೨

ನಾಲ್ಕನೆಯ ಮುದ್ರಣ—೧೯೬೨

ಬೆಲೆ
ಸಾದಾ ಪ್ರತಿ : ೨೫ ನಯೆ ಪೈಸೆ
ಉತ್ತಮ ಪ್ರತಿ : ೩೭ ನಯೆ ಪೈಸೆ

ಮುದ್ರಕರು :
ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ
ವಿ. ವಿ. ಮೊಹಲ್ಲ, ಮೈಸೂರು—೨.

ಮುನ್ನುಡಿ

ಈ ಪ್ರಚಾರಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚು ವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದ ವನ್ನು ಸಾಮಾಜಿಕ ಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರ ಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟ ವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆ ಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ವಿಶ್ರಾಂತಿಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್.ಎಸ್. ಸುಬ್ಬರಾಯರು;

ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವುದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದು ಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು
೨೪—೪—೧೯೪೨

ಇ. ಜಿ. ಮೆಕಾಲ್ಪೈನ್
ವೈಸ್-ಛಾನ್ಸೆಲರ್

ಗ್ರಂಥಋಣ

1. ‘ *Planned Economy for India* ’
   by Sir M. Visvesvaraya.
2. ‘ *Indian Economics* ’
   by Jathar and Berri, Vol. I.
3. ‘ *Better Villages* ’
   by Brayne.
4. ‘ *Socrates in an Indian Village* ’
   by Brayne.
5. ‘ ನಮ್ಮ ಹಳ್ಳಿಗಳು ’
   by A. Seshaiyengar.

ವಿಷಯ ಸೂಚಿಕೆ

ನಮ್ಮ ಹಳ್ಳಿಗಳು

೧. ಹಿಂದಿನ ಅಚ್ಚುಕಟ್ಟು

ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಕೈಕೊಂಡಿರುವ ಉಪನ್ಯಾಸಮಾಲೆಯಲ್ಲಿ, ಕನ್ನಡ ಸಾಹಿತ್ಯದ ಚರಿತ್ರೆ, ಕುಮಾರವ್ಯಾಸನ ಭಾರತ, ಹಿಂದೂ ದರ್ಶನಗಳು, ಖಗೋಳ ಶಾಸ್ತ್ರ ಮುಂತಾದ ಉದಾತ್ತವಾದ ವಿಷಯಗಳ ಮಧ್ಯೆ, ನಮ್ಮ ಹಳ್ಳಿಗಳ ವಿಷಯವಾಗಿಯೂ ಉಪನ್ಯಾಸವೇರ್ಪಡಿಸಿರುವುದು ಆಶ್ಚರ್ಯಕ್ಕೆ ಕಾರಣವಾಗಿರಬಹುದು. ಹಳ್ಳಿಗಳಲ್ಲೇ ಹುಟ್ಟಿ, ಬೆಳೆದು ಜೀವನ ನಡೆಸುತ್ತಿರುವ ಜನಗಳಿಗೆ ಪಟ್ಟಣದಲ್ಲಿರುವವರು ಬಂದು ತಿಳಿವಳಿಕೆ ಹೇಳುವುದರ ಆನುಗುಣ್ಯವಾದರೂ ಏನು, ಎಂಬ ಸಂಶಯ ತಲೆದೋರಬಹುದು. ಆದರೆ "ಆಟದ ಸೊಬಗು ಆಟವಾಡುವವರಿಗಿಂತ ನೋಡುವವರಿಗೆ ಚೆನ್ನಾಗಿ ತಿಳಿಯುತ್ತದೆ" ಎಂಬಂತೆ ಹಳ್ಳಿಯ ಸೊಬಗು ಹಳ್ಳಿಯ ಜೀವನದ ಕುಂದುಕೊರತೆಗಳು ಹೊರಗಿನಿಂದ ನೋಡುವವರಿಗೆ ಎದ್ದು ಕಾಣುತ್ತವೆ. ಅಲ್ಲದೆ ನನಗೆ ಕೆಲವು ವರ್ಷಗಳ ಹಿಂದೆ ವಿಶ್ವವಿದ್ಯಾನಿಲಯದಾಶ್ರಯದಲ್ಲಿ ಹಳ್ಳಿಗಳ ಆರ್ಥಿಕ ಸ್ಥಿತಿಯ ವಿವರಗಳನ್ನು ಪರಿಶೀಲಿಸುವ ಸುಯೋಗವು ದೊರೆತಿತ್ತು ಮತ್ತು ಹೋದ ವರ್ಷ ಸರ್ಕಾರದವರ ಕೃಪೆಯಿಂದ ಬೆಂಗಳೂರು ಡಿಸ್ಟ್ರಿಕ್ಟಿನ ಗ್ರಾಮಾಂತರಗಳಲ್ಲಿ ಸಂಚಾರಮಾಡಿ ಉಪನ್ಯಾಸಗಳನ್ನು ಕೊಡುವ ಸುಸಂಧಿಯೂ ಒದಗಿತ್ತು.

ನಮ್ಮ ದೇಶ ಮುಖ್ಯವಾಗಿ ಹಳ್ಳಿಗಳ ದೇಶ. ಇದನ್ನು ನೇಗಿಲಯೋಗಿಗಳ ತೌರುಮನೆಯೆಂದು ಒಬ್ಬ ಕವಿ ವರ್ಣಿಸಿ

ದ್ದಾನೆ. ಏಕೆಂದರೆ, ಯಾವ ರೀತಿ ಯೋಗಿಯು ತನ್ನ ಯೋಗಾಭ್ಯಾಸವನ್ನು ಎಷ್ಟೇ ತೊಂದರೆ ಬಂದರೂ ಬಿಡದೆ ಸಾಧಿಸುವನೋ, ಅದೇ ರೀತಿಯಾಗಿ ನಮ್ಮ ರೈತನು ಎಷ್ಟೇ ಕಷ್ಟಗಳಾದರೂ ಹಿಂಜರಿಯದೆ ಬೇಸಾಯವನ್ನೇ ನಂಬಿ ತನ್ನ ಬಾಳಿನ ಸಾಧನೆ ಮಾಡುತ್ತಿದ್ದಾನೆ. ಈಚೆಗೆ ದೇಶದ ಎಲ್ಲಾ ಭಾಗಗಳಲ್ಲಿಯೂ, ನಾಗರಿಕರಿಂದಲೂ, ವಿದ್ಯಾವಂತರಿಂದಲೂ "ಹಳ್ಳಿಗಳಿಗೆ ಹಿಂತಿರುಗಿ" ಎಂಬ ಉಪದೇಶ ಕೇಳಿಬರುತ್ತಿದೆ. ನಮ್ಮ ದೇಶದಲ್ಲಿ ಶೇಕಡ ಲಂಕ್ಕಿಂತ ಜಾಸ್ತಿಯಾಗಿ ಈಗಲೂ ಜನಗಳು ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಬೇಸಾಯವನ್ನೇ ನಂಬಿಕೊಂಡಿದ್ದಾರೆ. ನಮ್ಮ ಮೈಸೂರು ಸೀಮೆಯನ್ನೇ ತೆಗೆದುಕೊಂಡರೆ ಅಷ್ಟೇ ಭಾಗ ಜನ ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ೧೯೩೧ನೇ ಖಾನೇಷುಮಾರಿ(Census)ಯ ವರದಿ ಪ್ರಕಾರ ನಮ್ಮ ಮೈಸೂರಿನಲ್ಲಿ ೧೬,೪೮೩ ಹಳ್ಳಿಗಳಿವೆ. ಸರಾಸರಿ ಹಳ್ಳಿ ಒಂದಕ್ಕೆ ೩೩೪ರಂತೆ ಜನಗಳಿದ್ದಾರೆ. ಆದ್ದರಿಂದ ನಮ್ಮ ದೇಶ ಅಭಿವೃದ್ಧಿಹೊಂದಬೇಕಾದರೆ ಹಳ್ಳಿಗಳ ಸ್ಥಿತಿ ಉತ್ತಮವಾಗಬೇಕು. ರೈತನೆಂದರೆ ದೇಶದ ಬೆನ್ನುಮೂಳೆಯಿದ್ದ ಹಾಗೆ. ನಮ್ಮ ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಾಗಿದ್ದ ಶ್ರೀಮಾನ್ ಎನ್. ಎಸ್. ಸುಬ್ಬರಾಯರು ಒಂದು ಸಾರಿ ನಮ್ಮ ದೇಶದ ರೈತನೆಂದರೆ ಆದಿಶೇಷನ ಹಾಗೆಂದು ವರ್ಣಿಸಿದರು. ಆದಿಶೇಷನು ಹೇಗೆ ಭೂಭಾರವನ್ನು ಹೊತ್ತು ಕೇವಲ ಗಾಳಿಯಿಂದಲೇ ಜೀವಿಸುತ್ತಾನೋ, ಹಾಗೆಯೇ ನಮ್ಮ ರೈತನೂ ಕೂಡ ಸಮಾಜಕ್ಕಾಗಿ ನಿರಂತರ ದುಡಿದು ತಾನು ಮಾತ್ರ ಸ್ವಲ್ಪ ಸೊಪ್ಪು, ರಾಗಿಹಿಟ್ಟಿನಿಂದ ಜೀವನಮಾಡುತ್ತಿದ್ದಾನೆ. ಆದ್ದರಿಂದ ಹಳ್ಳಿಗಳ ಪ್ರಾಮುಖ್ಯತೆಯನ್ನು ಹೆಚ್ಚು ಮಾತುಗಳಿಂದ ವರ್ಣಿಸಬೇಕಾಗಿಲ್ಲ.

ನಮ್ಮ ದೇಶದ ನಾಗರಿಕತೆಯ ಕೇಂದ್ರಗಳೆಂದರೆ ಹಳ್ಳಿಗಳೇ ಸರಿ. ಒಟ್ಟಿನಲ್ಲಿ ಹಳ್ಳಿಗಳ ಮಹತ್ವವನ್ನು ವಿದ್ಯಾವಂತನಾದ, ದೇಶಾಭಿಮಾನಿಯಾದ ಪ್ರತಿಯೊಬ್ಬನೂ ಮನಗಂಡಿದ್ದಾನೆ. ನಮ್ಮ ಮೈಸೂರಿನ ಸುಪ್ರಸಿದ್ಧ ದಿವಾನರಲ್ಲೊಬ್ಬರಾದ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ "Planned Economy for India" ಎಂಬ ಪುಸ್ತಕದಲ್ಲಿ ದೇಶದ ಏಳಿಗೆಯಾಗಬೇಕಾದರೆ ಹಳ್ಳಿಗಳ ಉದ್ಧಾರವಾಗಬೇಕೆಂದು ತಿಳಿಸಿದ್ದಾರೆ. ಹಿಂದಿನ ದಿವಾನರಾದ ಸರ್ ಮಿರ್ಜಾ ಇಸ್ಮೇಲರವರು ಗ್ರಾಮಗಳ ಉದ್ಧಾರಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಪ್ರಪಂಚದಲ್ಲೆಲ್ಲಾ ಮಹಾತ್ಮರೆಂದು ಹೆಸರು ಹೊಂದಿರುವ ಗಾಂಧೀಜಿಯವರು ಹಳ್ಳಿಗಳ ಮಹತ್ವವನ್ನು ಸಾರುವುದಕ್ಕಾಗಿ ಕಾಂಗ್ರೆಸ್ ಅಧಿವೇಶನಗಳು ಹಳ್ಳಿಗಳಲ್ಲೇ ನಡೆಯಬೇಕೆಂದು ಹರಿಪುರ, ತ್ರಿಪುರಿ ಮುಂತಾದ ಸ್ಥಳಗಳಲ್ಲಿ ಸಭೆಗಳನ್ನೇರ್ಪಡಿಸಿರುವುದು ಎಲ್ಲರಿಗೂ ತಿಳಿದಿದೆ. ಈ ಉದ್ದೇಶವನ್ನು ಇನ್ನೂ ವಿಶದವಾಗಿ ಬೋಧಿಸಲು ಅವರು "ಹಳ್ಳಿಗಳ ಕೈಗಾರಿಕೆಗಳ ಅಭಿವೃದ್ಧಿ ಸಂಘ" ಎಂಬುದನ್ನು ಸ್ಥಾಪಿಸಿ ತಾವು ಪಟ್ಟಣಗಳನ್ನು ಬಿಟ್ಟು, 'ಷೇಗಾಂವ್' ಎಂಬ ಹಳ್ಳಿಯಲ್ಲಿ ಮಹರ್ಷಿಗಳಂತೆ ವಾಸಿಸುತ್ತಿದ್ದಾರೆ.

ಗ್ರಾಮಗಳ ಅಭಿವೃದ್ಧಿಯ ವಿಷಯವನ್ನು ನಾವು ಚೆನ್ನಾಗಿ ಅರಿತುಕೊಳ್ಳಬೇಕಾದರೆ ಮೊದಲು ಹಿಂದಿನ ಕಾಲದ ಹಳ್ಳಿಗಳ ಅಚ್ಚುಕಟ್ಟನ್ನು ತಿಳಿಯಬೇಕಾದದ್ದು ಆವಶ್ಯಕ. ಏಕೆಂದರೆ, "ಹಿಂದಿನ ಇತಿಹಾಸವು ಮುಂದಿನ ಏಳಿಗೆಗೆ ತಳಹದಿ" ಎಂಬಂತೆ ಹಳ್ಳಿಗಳ ಹಿಂದಿನ ಸ್ಥಿತಿ ನಮಗೆ ಮಾರ್ಗದರ್ಶಕವಾಗುತ್ತದೆ. ನಮ್ಮ ಹಿಂದಿನ ಹಳ್ಳಿಗಳನ್ನು ಸರ್ ಚಾರ್ಲ್ಸ್ ಮೆಟ್‌ಕಾಫ್

ಎಂಬ ವಿದ್ವಾಂಸರೊಬ್ಬರು ಪ್ರತಿ ಹಳ್ಳಿಯೂ ಸ್ವಸಂಪೂರ್ಣತೆಯನ್ನು ಪಡೆದಿದ್ದ ಒಂದು ಪ್ರಜಾಪ್ರಭುತ್ವವೆಂದು ಸ್ತುತಿಸಿದ್ದಾರೆ. ನಮ್ಮ ದೇಶದಲ್ಲಿ ಅನೇಕ ರಾಜರು ಆಳಿದರು; ಅಳಿದರು. ಚಕ್ರಾಧಿಪತ್ಯಗಳು ಏರಿದುವು, ಉರುಳಿದುವು. ಪರದೇಶದವರು ದಾಳಿ ನಡೆಸಿ ದೋಚಿಕೊಂಡು ಹೋದರು. ಆದರೂ ನಮ್ಮ ಹಳ್ಳಿಗಳು ಬೆಳೆಯುತ್ತಲೇ ಇದ್ದುವು. "ರಾಯರಿಗೆ ರಾಜ್ಯವಾದರೆ ರಾಗಿ ಬೀಸುವುದು ತಪ್ಪೀತೆ" ಎಂಬ ನಾಣ್ನುಡಿಯಂತೆ ಆಳರಸರಿಗೆ ತಾವು ಕೊಡುವ ಕಂದಾಯ ತೆರಿಗೆಗಳನ್ನು ತೆತ್ತರಾಯ್ತು; ತಮಗೂ ಹೊರಗಿನ ಪ್ರಪಂಚಕ್ಕೂ ಯಾವ ಸಂಬಂಧವೂ ಇಲ್ಲವೆಂದು ಹಳ್ಳಿಯ ಜನಗಳು ಹಿಂದೆ ತಿಳಿದಿದ್ದರು. ಈ ಹಳ್ಳಿಗಳು ಗ್ರೀಕರ ಇತಿಹಾಸದಲ್ಲಿ ಕಂಡುಬರುವ "City States"—ನಗರ ಪ್ರಭುತ್ವಗಳಂತೆ ಇದ್ದುವು. ನಮ್ಮ ಹಳ್ಳಿಗಳ ಜೀವನಕ್ರಮದಲ್ಲಿ ಸಮರ್ಪಕವಾದೊಂದು ವ್ಯವಸ್ಥೆಯಿತ್ತು (Plan). ಹಳ್ಳಿಯವರು ಹೊರಗಿನವರ ಸಹಾಯವನ್ನು ಕೋರದೆ ತಮ್ಮ ಜೀವನಕ್ಕೆ ಬೇಕಾದ ಸಾಧನಸೌಕರ್ಯಗಳನ್ನೆಲ್ಲಾ ತಾವೇ ಕಲ್ಪಿಸಿಕೊಳ್ಳುತ್ತಿದ್ದರು. ಪ್ರತಿಯೊಬ್ಬ ರೈತನೂ ತನಗೆ ಬೇಕಾದ ಆಹಾರಪದಾರ್ಥಗಳೊಂದಿಗೆ, ಉಡಿಗೆಗೆ ಬೇಕಾದ ಹತ್ತಿ, ದೀಪಕ್ಕೆ ಬೇಕಾಗುವ ಎಣ್ಣೆಬೀಜಗಳು ಮತ್ತು ಹಲವು ಬಾಬುಗಳಿಗೆ ಬೇಕಾದ ಪದಾರ್ಥಗಳೆಲ್ಲವನ್ನೂ ಸ್ವಪ್ರಯತ್ನದಿಂದಲೇ ಹೊಂದಿಸಿಕೊಳ್ಳುತ್ತಿದ್ದನು. ಇದನ್ನು ಇಂಗ್ಲೀಷಿನಲ್ಲಿ "Subsistence Farming" ಎಂಬುದಾಗಿ ವರ್ಣಿಸುತ್ತಾರೆ.

ಇದರ ಜೊತೆಗೆ ನಮ್ಮ ಹಿಂದಿನ ರೈತರು ವ್ಯರ್ಥವಾಗಿ ಕಾಲ ಕಳೆಯದೆ ವಿರಾಮಕಾಲದಲ್ಲಿ, ಉಪಯೋಗವಾಗುವ ಅನೇಕ ಕೈ ಕಸಬುಗಳನ್ನು ಇಟ್ಟುಕೊಂಡು ಉದ್ಯೋಗಪರರಾಗಿದ್ದರು.

ಅಲ್ಲದೆ ಪ್ರತಿಯೊಂದು ಹಳ್ಳಿಯಲ್ಲಿಯೂ, ಹಳ್ಳಿಗೆ ಅಂಗವಾಗಿ ‘ಬಾರಾ ಬಲೂತಿ’ ಎನ್ನುವ ಕೆಲಸಗಾರರಿದ್ದರು. ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವುದು ದೊಡ್ಡ ಕರ್ತವ್ಯ : ಕಷ್ಟಪಟ್ಟು ದುಡಿಯುವುದು ಎಂದಿಗೂ ಅಪಮಾನವಲ್ಲ ಎಂಬುದನ್ನು ಚೆನ್ನಾಗಿ ಅರಿತಿದ್ದರು. “ತಾನು ಮಾಡುವುದು ಉತ್ತಮ, ಆಳು ಮಾಡುವುದು ಹಾಳು”, “ಕೈಕೆಸರಾದರೆ ಬಾಯಿ ಮೊಸರು” ಎನ್ನುವ ನಾಣ್ಣುಡಿಗಳು ಸಾರುವ ಅರ್ಥ ಇದೇ ಅಲ್ಲವೇ? ಯಾವ ಕೆಲಸ ನಡೆಯಬೇಕಾದರೂ ಊರಿನ ಜನಗಳೆಲ್ಲಾ ಕಲೆತು ಒಮ್ಮನಸ್ಸಿನಿಂದ ಉತ್ಸಾಹಶಾಲಿಗಳಾಗಿ, ತಮ್ಮ ಕೆಲಸವೆಂಬ ಒಂದು ವಿಶೇಷ ಅಭಿಮಾನದಿಂದ ಕೆಲಸಮಾಡುತ್ತಿದ್ದರು. ನಮ್ಮ ಸೀಮೆಯಲ್ಲಿ ಈಗಲೂ ಕಂಗೊಳಿಸುತ್ತಿರುವ ಕೆರೆ, ಕುಂಟೆ, ಬಾವಿ, ತೋಪು, ದೇವಾಲಯಗಳು ಇದಕ್ಕೆ ನಿದರ್ಶನವಾಗಿವೆ. ಗ್ರಾಮಗಳನ್ನು ಚೊಕ್ಕಟವಾಗಿ ಇಟ್ಟುಕೊಳ್ಳಬೇಕು. ಅವು ಸೌಂದರ್ಯದ ಬೀಡಾಗಿರಬೇಕು ಎಂಬುದು ನಮ್ಮವರ ಧ್ಯೇಯವಾಗಿತ್ತು. ದೇವರು ನಿರ್ಮಲನು, ಶಾಂತನು, ಸುಂದರನು ಎಂದು ತಿಳಿದು, ಆ ದೇವರನ್ನು ಧ್ಯಾನಮಾಡಬೇಕಾದರೆ ನಿರ್ಮಲವಾದ, ಸುಂದರವಾದ, ಶಾಂತವಾದ ವಾತಾವರಣವಿರಬೇಕೆಂದು ನದೀತೀರ, ರಮ್ಯವಾದ ವನಾಂತರ, ಚಿತ್ತಾಕರ್ಷವಾದ ಬೆಟ್ಟಗಳ ಮೇಲ್ಭಾಗದಲ್ಲಿ ದೇವಸ್ಥಾನಗಳನ್ನು ನಿರ್ಮಿಸಿರುವುದನ್ನು ಈಗಲೂ ನೋಡಬಹುದು. ಪ್ರಾಚೀನ ಕವಿಗಳು ನಮ್ಮ ದೇಶದ ಗ್ರಾಮಾಂತರಗಳ ವರ್ಣನೆಯನ್ನು ಸಾಕಾದಷ್ಟು ಮಾಡಿರುತ್ತಾರೆ. ಅವರು ವರ್ಣಿಸಿರುವ ಸಂಪಿಗೆ, ಮಲ್ಲಿಗೆ, ಜಾಜಿ ಮುಂತಾದ ಹೂಗಿಡಗಳು, ನಿಂಬೆ, ಮಾವು, ಹಲಸು ಮುಂತಾದ ಫಲವೃಕ್ಷಗಳು ಹಳ್ಳಿಗಳಲ್ಲಿ ತುಂಬಿದ್ದುವು.

ಈಗ ಅವುಗಳಿಗೆ ಬದಲಾಗಿ ಕೇವಲ ಎಕ್ಕ, ದತ್ತೂರಿಗಿಡಗಳೇ ನಮ್ಮ ಕಣ್ಣಿಗೆ ಬೀಳುತ್ತಿವೆ. ಹಿಂದೆ ಹಳ್ಳಿಯ ಜನಗಳು ಸಂಪ್ರದಾಯಬದ್ಧರಾಗಿದ್ದರು. ಈಗಿನಂತೆ ಗ್ರಾಂಥಿಕವಾದ ವಿಧಿ ಕಾನೂನುಗಳಿದ್ದರೂ ಹಳ್ಳಿಗಳಲ್ಲಿ ಒಂದು ಬಗೆಯ ನಿಯಮ ವಿತ್ತು. ಊರಿನ ವ್ಯಾಜ್ಯ ವ್ಯವಹಾರಗಳನ್ನು ಊರಿನ ಹಿರಿಯರು ಪಂಚಾಯಿತಿಯಿಂದ ತೀರ್ಮಾನಿಸುತ್ತಿದ್ದರು. ಈಗಿನಂತೆ ಕೋರ್ಟುಗಳಿರಲಿಲ್ಲ. ಹೀಗೆ ಹಳ್ಳಿಯ ಜೀವನದಲ್ಲಿ ಒಂದು ಕ್ರಮ, ಶಿಸ್ತು ಮತ್ತು ಸಂತೋಷವಿದ್ದಿತು. ಇದರಿಂದ ಜನ ರೆಲ್ಲರೂ ಕುಬೇರರಾಗಿದ್ದರೆಂದು ತಿಳಿಯಬಾರದು. ಜನಗಳಲ್ಲಿ ಸಮಾಧಾನ ತೃಪ್ತಿಗಳಿದ್ದುದರಿಂದ ಈಗಿನಂತೆ ನಿರುತ್ಸಾಹಕ್ಕೆ ಎಡೆಯಿರಲಿಲ್ಲ. ಇದಕ್ಕೆ ನಿದರ್ಶನ ಬೇಕಾದರೆ ಹಳ್ಳಿಗಳ ಗಾನ, ಲಾವಣಿ, ಸುಗ್ಗಿ ಕುಣಿತ, ಬಯಲಾಟಗಳು ಮುಂತಾದುವು ಗಳನ್ನು ಪರಿಶೀಲಿಸಬಹುದು. ಮುಖ್ಯವಾಗಿ ಇಲ್ಲದ, ಸಲ್ಲದ ಆಶಯಗಳ ಗೋಜಿಗೆ ಹೋಗದೆ ಜನಗಳು ತೃಪ್ತಿ, ಹರ್ಷ ಗಳಿಂದಿದ್ದರು.

ನಮ್ಮ ಹಳ್ಳಿಗಳ ಈಗಿನ ಸ್ಥಿತಿಯಾದರೋ ತುಂಬಾ ಚಿಂತಾ ಜನಕವಾಗಿದೆ. ಎಲ್ಲೆಲ್ಲಿಯೂ ಜನಗಳಲ್ಲಿ ಬಡತನ, ನಿರುತ್ಸಾಹ, ಅಸೂಯೆ, ನಿರುದ್ಯೋಗ—ಇವುಗಳೇ ಕಂಡುಬರುತ್ತಿವೆ. ಎಲ್ಲೆಲ್ಲಿಯೂ ಸರಿಯಾದ ಆಹಾರವಿಲ್ಲದೆ, ಉಡಲು ಬಟ್ಟೆ ಯಿಲ್ಲದೆ ಕಷ್ಟಪಡುತ್ತಿರುವ ದರಿದ್ರನಾರಾಯಣರ ನೋಟವೇ! ಈ ಬಡತನದ ಫಲವಾಗಿ 'ಶತಮಾನಂ ಭವತಿ' ಎಂಬ ಆಶೀರ್ವ ಚನವನ್ನು ಸಾರ್ಥಕಮಾಡುತ್ತಿದ್ದ ನಮ್ಮ ದೇಶದಲ್ಲಿ ಆಯುಃ ಪರಿಮಿತಿಯು ಕಡಮೆಯಾಗಿಬಿಟ್ಟಿದೆ. ಇಂಡಿಯಾ ದೇಶದ ಜನರ ಸರಾಸರಿ ಆಯುಃಪರಿಮಿತಿಯು ೨೨.೬ ವರ್ಷಗಳೆಂದು

ನಿಶ್ಚಯಿಸಲ್ಪಟ್ಟಿದೆ. ಇದರ ಜೊತೆಗೆ ನಮ್ಮ ಜನಗಳಲ್ಲಿ ತಮ್ಮ ಕಷ್ಟದ ಬಾಳು ಕರ್ಮಫಲ(ಹಣೆಯಬರಹ)ವೆಂಬ ಮೂಢ ನಂಬಿಕೆಯೊಂದು ಬೇರೂರಿದೆ. ಕರ್ಮದ ನಿಜವಾದ ಅರ್ಥ ಕೃಷಿ; ತಲೆಯಮೇಲೆ ಕೈಯಿಟ್ಟುಕೊಂಡು ಕುಳಿತುಕೊಳ್ಳು ವುದಲ್ಲ. "ಉದ್ಯೋಗಿನಂ ಪುರುಷಸಿಂಹಮುಪಯಿತಿ ಲಕ್ಷ್ಮೀ" ಎಂಬ ಸುಭಾಷಿತವನ್ನು ಮರೆಯಬಾರದು. ಆದರೆ ನಮ್ಮ ಜನಗಳು ಈಗ ವಿಶೇಷ ಸೋಮಾರಿಗಳಾಗಿ ವ್ಯರ್ಥ ಕಾಲಕ್ಷೇಪ ಮಾಡುತ್ತಿದ್ದಾರೆ. ಒಗ್ಗಟ್ಟಿನಿಂದ ಕೆಲಸಮಾಡುತ್ತಿದ್ದ ಜನಗಳು ಈಗ ದ್ವೇಷಾಸೂಯೆಗಳಿಗೆ ಬಲಿಯಾಗಿ, ವ್ಯಾಜ್ಯ ವ್ಯವಹಾರ ನಿರತರಾಗಿ ಕಷ್ಟಪಡುತ್ತಿದ್ದಾರೆ. ಹಿಂದೆ ಸಂಪ್ರದಾಯಬದ್ಧ ರಾಗಿದ್ದ ಜನಗಳಲ್ಲಿ ಕಾನೂನುಗಳು ಜಾಸ್ತಿಯಾದಂತೆಲ್ಲಾ ಸುಳ್ಳು, ಮೋಸಗಳು ಅಭಿವೃದ್ಧಿಹೊಂದಿ, ಹಿಂದಿನ ಶಿಸ್ತು ಮಾಯವಾಗಿ, ಅನಾಯಕತ್ವವೇರ್ಪಟ್ಟು ಈಗಿನ ಹಳ್ಳಿಗಳು ಕಟ್ಟುಹರಿದ ಪಂಜುಗಳಂತಾಗಿವೆ. ಊರಿನ ಏಳಿಗೆಯಲ್ಲಿಯೂ, ಸೊಬಗಿನಲ್ಲಿಯೂ ಅಭಿಮಾನವಿಟ್ಟಿದ್ದ ಜನಗಳು ಈಗ ತಮ್ಮ ಹಳ್ಳಿಗಳ ವಿಷಯದಲ್ಲಿ ಕೇವಲ ಉಪೇಕ್ಷೆಯನ್ನು ತೋರಿಸಿ "ಕೆಟ್ಟು ಪಟ್ಟಣ ಸೇರು" ಎಂಬ ತತ್ವವನ್ನು ಅನುಸರಿಸಿ ನಗರ ಗಳಿಗೆ ವಲಸೆ ಹೋಗುತ್ತಿದ್ದಾರೆ. ಹಿಂದಿನ ಸ್ವಸಂಪೂರ್ಣತೆಯು ಅದೃಶ್ಯವಾಗಿ ಜನಗಳು ತಮಗೆ ಬೇಕಾದ ಪ್ರತಿಯೊಂದು ಪದಾರ್ಥಕ್ಕೂ ಇತರರ ಕೈಕಾಯಬೇಕಾಗಿದೆ. ಹೊರಗಿನ ಸ್ಪರ್ಧೆಯಿಂದ ನಮ್ಮ ಗ್ರಾಮಗಳ ಕೈಗಾರಿಕೆಗಳೆಲ್ಲ ಹಾಳಾಗಿ ಜನಗಳಿಗೆ ಕೆಲಸವಿಲ್ಲದಂತಾದ ಉದಾಹರಣೆಗಳು ಹೇರಳ ವಾಗಿವೆ. ಅಕ್ಕಿಮಿಲ್ಲುಗಳು ಬಂದು ಬತ್ತಕುಟ್ಟುವ ಏತ, ಒನಕೆಗಳು ಮಾಯವಾದುವು. ಬೀಸುವ ಯಂತ್ರಗಳಿಂದ ರಾಗಿ

ಕಲ್ಲು ಹೋಯಿತು. ಎಣ್ಣೆ ಮಿಷನ್‌ಗಳಿಂದ ಗಾಣಗಳು ಹಿಂದೆ ಬಿದ್ದುವು. ಇತ್ತೀಚೆಗೆ ಗಾಡಿಗಳಿಗೆ ಉಪಯೋಗಿಸುತ್ತಿರುವ ರಬ್ಬರ್ ಟೈರುಗಳಿಂದ ನಮ್ಮ ಬಡಗಿ ಮತ್ತು ಕಮ್ಮಾರರಿಗೂ ಬಲವಂತದ ರಜ ದೊರಕುವುದೋ ಏನೋ! ಒಟ್ಟಿನಲ್ಲಿ ನಮ್ಮ ಹಳ್ಳಿಯ ಜನಗಳ ಸ್ಥಿತಿ ಶೋಚನೀಯವಾಗಿ ಅನೇಕರು ಬಡತನದಲ್ಲಿ ನರಳಿ "ಕಡ ಹುಟ್ಟ ಬಡವ ಕೆಟ್ಟ" ಎಂಬಂತೆ ಸಾಲದಲ್ಲಿ ಹುಟ್ಟಿ ಬೆಳೆದು ಸಾಯುತ್ತಿದ್ದಾರೆ.

ಹಳ್ಳಿಗಳ ದುಃಸ್ಥಿತಿಗೆ ಅನೇಕ ಕಾರಣಗಳುಂಟು. ಬ್ರಿಟಿಷರ ಆಳ್ವಿಕೆಯ ಕಾಲದಿಂದ ನಮ್ಮ ಹಳ್ಳಿಗಳ ಇಳಿಮೆ ಪ್ರಾರಂಭ ವಾಯಿತೆಂದು ಹೇಳಬಹುದು. ಬ್ರಿಟಿಷರು ನಗರಗಳನ್ನು ಅಭಿವೃದ್ಧಿಪಡಿಸಿದಂತೆಲ್ಲಾ, ನಮ್ಮವರು ಪಟ್ಟಣಗಳ ಮೋಹಕ್ಕೆ ಬಿದ್ದು ಹಳ್ಳಿಗಳನ್ನು ತ್ಯಜಿಸಲಾರಂಭಿಸಿದರು. ಅದರಲ್ಲೂ ಇಂಗ್ಲಿಷ್ ವಿದ್ಯಾಭ್ಯಾಸಮಾಡಿದ ಯುವಕರು ತಮ್ಮ ಹಿಂದಿನ ಸಂಸ್ಕೃತಿ, ಆಚಾರ ಪದ್ಧತಿಗಳನ್ನು ಉಪೇಕ್ಷೆಮಾಡಿ ಹಳ್ಳಿಗಳನ್ನು ಅಲಕ್ಷಿಸಿದರು. ಇದೇ ನಮ್ಮ ಹಳ್ಳಿಗಳ ಅವನತಿಗೆ ಪ್ರಬಲವಾದ ಕಾರಣ. ಅಲ್ಲದೆ ಬ್ರಿಟಿಷರ ಆಳ್ವಿಕೆಯ ಪದ್ಧತಿಯಿಂದ ಸರ್ಕಾರದ ಆಡಳಿತವೆಲ್ಲಾ ಕೇಂದ್ರೀಕೃತವಾಗಿ ಜನಗಳು ತಮ್ಮ ಕೆಲಸ ವನ್ನು ತಾವು ಮಾಡಿಕೊಳ್ಳಬೇಕೆಂಬುದನ್ನು ಮರೆತು ಎಲ್ಲವನ್ನೂ ಸರ್ಕಾರದವರೇ ಮಾಡಬೇಕೆನ್ನುವ ತಪ್ಪು ಭಾವನೆಯು ಜನಗಳ ಮನಸ್ಸಿನಲ್ಲಿ ಬೇರೂರಿತು. ಅಲ್ಲದೆ ಪಾಶ್ಚಾತ್ಯದೇಶಗಳಲ್ಲಿ ಕೈಗಾರಿಕೆಯ ಪದ್ಧತಿಯಲ್ಲಿ ಉಂಟಾದ ಯಂತ್ರಗಳ ಸ್ಪರ್ಧೆಯಿಂದ ನಮ್ಮ ಜನಗಳ ಕಸಬುಗಳಿಗೆಲ್ಲಾ ಧಕ್ಕೆ ತಗುಲಿತು. ನಗರಗಳ ಸಂಪರ್ಕದಿಂದ ನಮ್ಮ ಜನಗಳು ಹಿಂದೆ ಕಂಡರಿಯದ ದುಂದುವೆಚ್ಚದ ಹೊಸ ಅಭ್ಯಾಸಗಳನ್ನು ಕಲಿತರು. ಕೋಳಿ

ಕೂಗುವ ಪ್ರತಿಯೊಂದು ಹಳ್ಳಿಗಳಲ್ಲಿಯೂ ಕಾಫಿ, ಟೀಗಳ ಬಳಕೆಯನ್ನು ನೋಡಬಹುದು. ಹಿಂದೆ ಹತ್ತಾರು ಮೈಲಿಗಳನ್ನು ಲಕ್ಷ್ಯವಿಲ್ಲದೆ ನಡೆಯುತ್ತಿದ್ದ ನಮ್ಮ ಜನಗಳು "ಕುದುರೆ ಕಂಡರೆ ಕಾಲು ನೋವು" ಎಂಬಂತೆ, ಒಂದೆರಡು ಮೈಲಿಗಳ ಪ್ರಯಾಣಕ್ಕೂ ಬಸ್ಸು ಮೋಟಾರುಗಳಿಗೆ ಕಾದು ಹಣ ತೆರುವುದು ಸಾಮಾನ್ಯ ಅನುಭವ. ತಾವು ಉಪಯೋಗಿಸುವ ಬಟ್ಟೆ ಬರೆಗಳು, ಇತರ ಸಾಧನಸಾಮಗ್ರಿಗಳು ಕೂಡ ಹಣದ ಹೆಚ್ಚು ವೆಚ್ಚಕ್ಕೆ ಕಾರಣಗಳಾಗಿವೆ. ನಮ್ಮ ರೈತರ ಸಂಪಾದನೆಯಾದರೋ ಕಾಸಿನಷ್ಟು ಜಾಸ್ತಿಯಾಗಿಲ್ಲ. ಅವರು ಮಾಡುತ್ತಿರುವ ವ್ಯವಸಾಯ ಕ್ರಮವಂತೂ ತೀರ ಹಳೆಯದು. ಬೇರೆ ಕಸಬುಗಳಿಲ್ಲದೆ ವ್ಯರ್ಥವಾಗಿ ಕಾಲಕಳೆಯುತ್ತ, ಬೇರೆ ಸಂಪಾದನೆಗೆ ಮಾರ್ಗವಿಲ್ಲದೆ ಆಲಸ್ಯಪರರಾಗಿ ಬಡತನದಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಹೀಗಾಗಿ ರೈತರು ತಮ್ಮ ಸಾಧಾರಣ ಆಶಯಗಳನ್ನು ಪೂರ್ತಿಮಾಡಿಕೊಳ್ಳಬೇಕಾದರೂ ಸಾಲ ಮಾಡುವುದೊಂದೇ ದಾರಿಯಾಗಿದೆ. ಆದಾಯವಿಲ್ಲದೆ ಹೆಚ್ಚಾಗಿ ವೆಚ್ಚಮಾಡುವ ಜನಗಳಿಗೆ ಬಡತನವಲ್ಲದೇ ಮತ್ತೇನು?

ಈ ಬಡತನಕ್ಕೆ ಜನಗಳು ಸಾಧಾರಣವಾಗಿ ಇಬ್ಬರನ್ನು ದೂರುವುದು ವಾಡಿಕೆಯಾಗಿದೆ: (೧) ದೇವರು; (೨) ಸರ್ಕಾರ. ದೇವರ ವಿಷಯದಲ್ಲಿ ನಾವೇನೂ ಹೇಳಬೇಕಾಗಿಲ್ಲ. ಸರ್ಕಾರವು ಒಂದು ದೇಶದ ಎಲ್ಲ ಜನರ ಎಲ್ಲ ಅಪೇಕ್ಷೆಗಳನ್ನೂ ಈಡೇರಿಸಲು ಸಾಧ್ಯವಾಗುವುದಿಲ್ಲ. ಹಳ್ಳಿಯವರಲ್ಲಿ "ನಿಮ್ಮ ಬೀದಿಗಳನ್ನು ಗುಡಿಸಿ ಶುಚಿಯಾಗಿಟ್ಟುಕೊಳ್ಳಿರಿ" ಎಂದು ಹೇಳಿದರೆ, "ಸರ್ಕಾರದವರು ಕೂಲಿಗಳನ್ನಿಟ್ಟು ಗುಡಿಸಲಿ" ಎಂದು ಉತ್ತರ ಕೊಡುವ ಮನೋಭಾವವು ನೆಲೆಗೊಂಡಿದೆ. ಇದು

ತಪ್ಪಾದ ಮತ್ತು ಹಾನಿಕರವಾದ ಅಭಿಪ್ರಾಯ. ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಬೇಕೆಂಬ ತತ್ವವನ್ನು ಅರಿತ ಹೊರತೂ ಯಾರೂ ಏಳಿಗೆ ಹೊಂದಲಾರರು. ಕೇವಲ ದಾರಿ ತೋರಿಸಬಲ್ಲ ಸರ್ಕಾರದೊಡನೆ ಸಹಕರಿಸಿ ಉದ್ಯಮಗೈಯಬೇಕಾದುದು ಜನಗಳ ಕರ್ತವ್ಯ. ನಮ್ಮ ಸರ್ಕಾರದವರು ಕೈಗೊಂಡಿರುವ ಗ್ರಾಮಾಭಿವೃದ್ಧಿ ಕಾರ್ಯಗಳು ಪ್ರಶಂಸನೀಯವಾದುವುಗಳು. ಜನಗಳು ಈ ಕೆಲಸದಲ್ಲಿ ಸರ್ಕಾರಕ್ಕೆ ನೆರವಾಗುವುದರ ಬದಲು ಆಕ್ಷೇಪಣೆ ಮಾಡಿದರೆ ಉಪಯೋಗವಿಲ್ಲ. "ಸಾವಿರಸಾರಿ ಗೋವಿಂದ ಎನ್ನಬಹುದು; ಒಬ್ಬ ದಾಸಯ್ಯನಿಗೆ ಭಿಕ್ಷೆಹಾಕುವುದು ಕಷ್ಟ" ಎಂಬಂತೆ ಕಾರ್ಯಸಾಧನೆ ನಿಜವಾಗಿಯೂ ಕಷ್ಟ. ಆದ್ದರಿಂದ ಗ್ರಾಮಗಳ ಏಳಿಗೆಗೆ ಜನಗಳೂ, ಸರ್ಕಾರದವರೂ ಒಗ್ಗಟ್ಟಾಗಿ ಸೇರಿ ದುಡಿಯಬೇಕು.

೨. ವ್ಯವಸಾಯ, ಉಪಕಸಬು, ವ್ಯಾಪಾರ

ನಮ್ಮ ಹಳ್ಳಿಗಳು ಹೇಗೆ ಉತ್ತಮರೀತಿಯಲ್ಲಿದ್ದುವು, ಜನಗಳಲ್ಲಿ ಸಮಾಧಾನ, ಶಾಂತಿ ಇವುಗಳು ನೆಲೆಸಿದ್ದುವು ಎಂಬುದನ್ನು ತಿಳಿಸಿದ್ದಾಯಿತು. ಕ್ರಮೇಣ ನಮ್ಮ ಗ್ರಾಮಗಳು ಹೇಗೆ ಯಾವ ಕಾರಣಗಳಿಂದ ಹೀನಸ್ಥಿತಿಗೆ ಬಂದುವೆಂಬುದನ್ನೂ ವಿವರಿಸಿದ್ದಾಯಿತು. ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ನಮ್ಮ ಹಳ್ಳಿಗಳ ಸುಧಾರಣೆಯಾಗಬೇಕು. ಇಂದು ನಮ್ಮ ಹಳ್ಳಿಗಳಲ್ಲಿ ಕಂಡುಬರುವ ದುಡ್ಡಿನ ಬಡತನ, ಧೈರ್ಯದ ಬಡತನ, ದೇಶಭಕ್ತಿಯ ಬಡತನ, ನಿರುತ್ಸಾಹ, ನಿರುದ್ಯೋಗ—ಇವುಗಳನ್ನು ನಿವಾರಿಸಬೇಕಾದುದು ಅತ್ಯಾವಶ್ಯಕ. ನಮ್ಮ ಜನ

ಗಳ ಮುಖ್ಯ ಕಸಬು ಬೇಸಾಯ. ಹಿಂದೆ ಹೇಳಿದಂತೆ ನಮ್ಮ ಮೈಸೂರು ಸೀಮೆಯಲ್ಲಿರುವ ೧೬,೪೮೩ ಹಳ್ಳಿಗಳಲ್ಲಿ ಶೇಕಡ ೮೦ಕ್ಕಿಂತ ಜಾಸ್ತಿಯಾಗಿ ಜನಗಳು ಬೇಸಾಯವನ್ನೇ ನಂಬಿರುತ್ತಾರೆ. ಬಹಳ ಪುರಾತನ ಕಾಲದಿಂದಲೂ ಬೇಸಾಯವು ರೂಢಿಯಲ್ಲಿದೆ. ವ್ಯವಸಾಯವೇ ಮುಖ್ಯ ಕಸಬಾದರೂ ನಮ್ಮ ಬೇಸಾಯ ಪದ್ಧತಿಯು ತೀರಾ ಹಿಂದುಳಿದಿದೆ. ನಮ್ಮ ರೈತರ ಉತ್ಪತ್ತಿಯು ಇತರ ದೇಶಗಳ ಉತ್ಪತ್ತಿಗಿಂತ ಅತಿ ಕಡಿಮೆ. ಇಟಲಿಯಲ್ಲಿ ಎಕರೆ ಒಂದಕ್ಕೆ ೪,೬೦೧ ಪೌಂಡುಗಳಷ್ಟು ಬತ್ತವೂ, ೧,೨೪೧ ಪೌಂಡುಗಳಷ್ಟು ಗೋದಿಯೂ, ಜಪಾನ್ ದೇಶದಲ್ಲಿ ೨,೭೪೨ ಪೌಂಡುಗಳಷ್ಟು ಬತ್ತವೂ ಮತ್ತು ೧,೫೦೮ ಪೌಂಡು ಗೋದಿಯೂ ಬೆಳೆದರೆ ಇಂಡಿಯಾದೇಶದಲ್ಲಿ ೧,೩೫೭ ಪೌಂಡು ಬತ್ತವೂ, ೬೫೨ ಪೌಂಡುಗಳಷ್ಟು ಗೋದಿಯೂ ಮಾತ್ರ ಉತ್ಪತ್ತಿಯಾಗುತ್ತದೆ.[1] ಇದರಿಂದ ನಮ್ಮ ವ್ಯವಸಾಯ ಕ್ರಮ ಎಷ್ಟು ಹಿಂದುಳಿದಿದೆ ಎಂಬುದನ್ನು ಮನಗಾಣಬಹುದು.

ನಮ್ಮ ಬೇಸಾಯ ಪದ್ಧತಿಯು ಹಿಂದುಳಿದಿರುವುದಕ್ಕೆ ಅನೇಕ ಕಾರಣಗಳುಂಟು. ಇವುಗಳಲ್ಲಿ ಮೊದಲನೆಯದು ನಮ್ಮಲ್ಲಿ ಆಚರಣೆಯಲ್ಲಿರುವ ಜಮೀನು ಹಂಚಿಕೆ ಪದ್ಧತಿ. ಒಬ್ಬ ತಂದೆಗೆ ನಾಲ್ಕು ಮಕ್ಕಳಿದ್ದರೆ ತಂದೆಯ ಆಸ್ತಿಯಲ್ಲಿ ಎಲ್ಲರಿಗೂ ಸಮ ಭಾಗ ಬರಬೇಕಾಗುವುದು. ಅದಲ್ಲದೆ ಸಾಧಾರಣವಾಗಿ ಜಮೀನು ಯಾರಿಗೂ ಒಂದೇ ಕಡೆ ಇರುವುದಿಲ್ಲ. ಹೀಗೆ ಬೇರೆ ಬೇರೆ ತಾಕುಗಳಲ್ಲಿರುವ ಜಮೀನು ಹಂಚಿಕೆಯಾಗುವುದರಿಂದ ನಮ್ಮ ದೇಶದ ಜಮೀನು ಛಿದ್ರಛಿದ್ರವಾಗಿ ಉತ್ತಮ ಬೇಸಾಯಕ್ಕೆ ಅಡಚಣೆ

---

[1] "Planned Economy for India," by Sir M. Visvesvaraiya.

ಯಾಗಿದೆ. ಮೈಸೂರು ಸರ್ಕಾರದವರು ನೇಮಿಸಿದ್ದ ಕಮಿಟಿಯ ವರು ನಡೆಸಿದ ಪರಿಶೋಧನೆಗಳಿಂದ ಶೇಕಡಾ ೨೦ರಂತೆ ಒಂದೆಕರೆ ಗಿಂತಲೂ ಚಿಕ್ಕದಾದ ತಾಕುಗಳಿವೆಯೆಂತಲೂ, ಶೇಕಡ ೪೦ರಂತೆ ೫ ರಿಂದ ೧೦ ಎಕರೆಗಳೊಳಗೆ ಉಳ್ಳ ತಾಕುಗಳಿವೆಯೆಂತಲೂ ಕಂಡುಬರುತ್ತದೆ. ೫೦ ಎಕರೆಗಿಂತ ಜಾಸ್ತಿಯಾಗಿರುವ ಜಮೀನು ಗಳು ಶೇಕಡ ೧.೫ ಮಾತ್ರ. ಹೀಗೆ ಜಮೀನು ಛಿದ್ರವಾಗಿ ಭಿನ್ನವಾಗಿರುವುದರಿಂದ, ಯಾವ ಉತ್ತಮ ಬೇಸಾಯಕ್ಕೂ ಅವಕಾಶವಿರುವುದಿಲ್ಲ. ಎಲ್ಲರೂ ಒಂದೇ ಕಾಲದಲ್ಲಿ ಒಂದೇ ರೀತಿಯಾದ ಬೆಳೆಗಳನ್ನು ಬೆಳೆಯಬೇಕಾಗಿರುತ್ತದೆ. ಜಮೀನು ಗಳಿಗೆ ಬೇಲಿಗಳಿಲ್ಲದಿರುವುದರಿಂದ ಅನೇಕ ವೇಳೆ ಜಗಳಕ್ಕೆ ಮುಖ್ಯಕಾರಣವಾಗುತ್ತದೆ. ನಮ್ಮ ವ್ಯವಸಾಯಕ್ರಮ ಉತ್ತಮ ಗೊಳ್ಳಬೇಕಾದರೆ ಜಮೀನು ಹಂಚಿಕೆಯ ನ್ಯೂನತೆಯನ್ನು ಸರಿ ಪಡಿಸಬೇಕಾದ್ದು ಆವಶ್ಯಕ. ಇದಕ್ಕಾಗಿ ಪ್ರಯತ್ನಗಳು ಇಂಡಿಯಾದೇಶದ ಅನೇಕ ಭಾಗಗಳಲ್ಲಿ ನಡೆದಿವೆ. ಪಂಜಾಬಿ ನಲ್ಲಿ ಸಹಕಾರ ಪದ್ಧತಿಯಿಂದ ತಾಕುಗಳನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡಿದ್ದಾರೆ. ಬರೋಡಾ ಸರಕಾರದವರು ರೈತರಿಗೆ ಇಷ್ಟವಿದ್ದರೆ ಜಮೀನು ಒಟ್ಟುಗೂಡಿಸಲು ಅನುಕೂಲವಾಗು ವಂತೆ ಒಂದು ಕಾನೂನು ಮಾಡಿರುತ್ತಾರೆ. ಮಧ್ಯಪ್ರಾಂತ ದಲ್ಲಿಯೂ ಇದಕ್ಕಾಗಿ ಕಾನೂನನ್ನು ಮಾಡಿದ್ದಾರೆ. ಮೈಸೂರು ಸರ್ಕಾರದವರು ಈ ನ್ಯೂನತೆಯನ್ನು ಹೋಗಲಾಡಿಸಲು ಕೆಲವು ಪ್ರಯತ್ನಗಳನ್ನು ನಡೆಸಿರುತ್ತಾರೆ. ಆದರೆ ಅವುಗಳಿಂದ ಎಷ್ಟರ ಮಟ್ಟಿಗೆ ಉಪಯೋಗವಾಗಿದೆ ಎಂದು ನಿರ್ದಿಷ್ಟವಾಗಿ ಹೇಳು ವುದು ಕಷ್ಟ. ಅಂತೂ ಜಮೀನು ಛಿದ್ರವಾಗಿರುವುದರಿಂದ, ಬೇಸಾಯಕ್ರಮಕ್ಕೆ ತುಂಬಾ ಹಾನಿಯೆಂಬುದನ್ನು ನಮ್ಮ

ರೈತರು ತಿಳಿಯುವಂತಾಗಬೇಕು. ನಮ್ಮ ಬೇಸಾಯ ಪದ್ಧತಿಯ ಹೀನಸ್ಥಿತಿಗೆ ಮುಖ್ಯ ಕಾರಣ ನಮ್ಮ ರೈತರ ಅಜ್ಞಾನ. ವ್ಯವಸಾಯಕ್ಕೆ ಬಹು ಮುಖ್ಯವಾಗಿ ಬೇಕಾದ್ದು ಗೊಬ್ಬರ. ಗೊಬ್ಬರದ ಬೆಲೆ ನಮ್ಮ ರೈತರಿಗೆ ಚೆನ್ನಾಗಿ ಗೊತ್ತು. ಗೊಬ್ಬರವು ರೈತನ ಚಿನ್ನವೆಂದು ಅವರು ಅರಿತಿದ್ದಾರೆ. ಆದರೆ ಗೊಬ್ಬರವನ್ನು ಕಾಪಾಡುತ್ತಿರುವ ರೀತಿ ಅಸಮರ್ಪಕವಾಗಿದೆ. ಸಾಧಾರಣವಾಗಿ ಮನೆಯಲ್ಲಿ ಕಸ, ಕಡ್ಡಿ, ಸಗಣಿ ಮುಂತಾದುವುಗಳನ್ನು ತೆಗೆದುಕೊಂಡು ಹೋಗಿ ಗುಡ್ಡೆ ಹಾಕುವುದು ರೂಢಿಯಾಗಿದೆ. ಇದರಿಂದ ಗೊಬ್ಬರವು ಬಿಸಿಲಲ್ಲಿ ಒಣಗಿ ಅದರ ಸಾರವೆಲ್ಲಾ ಹೋಗುವುದಲ್ಲದೆ, ವಿಶೇಷ ಮಳೆ ಬಂದಾಗ ಅದರ ಸಾರವೆಲ್ಲಾ ಕೊಚ್ಚಿಹೋಗಿ ಹಳ್ಳಗಳಲ್ಲಿ ನೀರು ನಿಂತು, ಕೊಳೆತು ಊರಿನ ಆರೋಗ್ಯವನ್ನು ಕೆಡಿಸುತ್ತದೆ. ಸಾಧಾರಣವಾಗಿ ಯಾರೊಬ್ಬರು ಹಳ್ಳಿಗಳಿಗೆ ಹೋದರೂ ಈ ತರಹ ಗೊಬ್ಬರದ ಗುಡ್ಡೆಯನ್ನು ನೋಡಬಹುದು. ಬ್ರೈನ್ ಎಂಬ ದೊಡ್ಡ ವಿದ್ವಾಂಸರು ಹೇಳಿರುವಂತೆ ನಮ್ಮ ಹಳ್ಳಿಗಳಿಗೆ ಗುರ್ತು ಬೇಕಾದರೆ ಅವುಗಳಿಂದ ಬರತಕ್ಕ ದುರ್ವಾಸನೆ! ಆರೋಗ್ಯಕ್ಕೆ ತೌರುಮನೆಯಾಗಿದ್ದ ನಮ್ಮ ಹಳ್ಳಿಗಳು ಈಗ ದುರ್ಗಂಧದ ಕೂಪಗಳಾಗಿವೆ. ಈ ಪದ್ಧತಿಯಿಂದ ಹಳ್ಳಿಯವರಿಗೆ ಎರಡು ತರಹ ನಷ್ಟ: (೧) ಗೊಬ್ಬರದ ಸಾರ ಹೋಗುವುದು; (೨) ಊರಿನ ಆರೋಗ್ಯ ಕೆಡುವುದು.

ಹಳ್ಳಿಗಳಲ್ಲಿ ಈ ಗೊಬ್ಬರವನ್ನು ಪ್ರತ್ಯೇಕವಾದ ಗುಂಡಿಗಳಲ್ಲಿ ಹಾಕಿ ಮಣ್ಣುಮುಚ್ಚುವಂತೆ ರೈತರಲ್ಲಿ ಪ್ರಚಾರವಾಗಬೇಕು. ಅಲ್ಲದೆ ನಮ್ಮ ರೈತರು ಗಂಜಲವನ್ನು ವ್ಯರ್ಥಮಾಡುತ್ತಾರೆ. ಗಂಜಲವು ಶ್ರೇಷ್ಠವಾದ ಗೊಬ್ಬರ. ಇದನ್ನು ಕೂಡ ವ್ಯರ್ಥ

ವಾಗದಂತೆ ಹಿಡಿದು ಕಸದ ಜೊತೆಗೆ ಸೇರಿಸಬೇಕು. ಇದರಿಂದ ಗೊಬ್ಬರ ಕೊಳೆತು ಪಾಕಾಗಲು ಅವಕಾಶವಾಗುವುದು. ಸಾಧಾರಣವಾಗಿ ಹಳ್ಳಿಗಳಲ್ಲಿ ಸಗಣಿಯನ್ನು ಬೆರಣಿಯಾಗಿ ಮಾಡಿ ಉರಿಸುವ ಪದ್ಧತಿಯಾಗಿದೆ. ಇದರಿಂದ ನಮ್ಮ ಬೇಸಾಯಕ್ಕೆ ಅಪಾರವಾದ ನಷ್ಟ. ಸಾಧಾರಣವಾಗಿ ಬೆರಣಿಯನ್ನು ನಿಧಾನವಾಗಿ ಕಾಯಬೇಕಾಗಿರುವ ಹಾಲು, ತರಕಾರಿ ಮುಂತಾದುವುಗಳಿಗೆ ಉಪಯೋಗಿಸುವುದು ರೂಢಿ. ಇದಕ್ಕೆ ಬದಲಾಗಿ ನೆಲದಲ್ಲಿ ಒಂದು ಗುಂಡಿಯನ್ನು ತೋಡಿ, ಅದರಲ್ಲಿ ಬತ್ತದ ಹುಲ್ಲನ್ನು ತುಂಬಿ, ನಿಧಾನವಾಗಿ ಪಕ್ವವಾಗಬೇಕಾಗಿರುವ ಪದಾರ್ಥವನ್ನು ಮೊದಲೆ ಸೌದೆಯ ಒಲೆಯ ಮೇಲಿಟ್ಟು ಕುದಿಸಿ, ಆಮೇಲೆ ಆ ಪಾತ್ರೆಯನ್ನು ಬಾಯಿಮುಚ್ಚಿ, ತಳವನ್ನು ಒರಸಿ ಹುಲ್ಲಿನೊಳಗಿಟ್ಟು ಮುಚ್ಚುವುದರಿಂದ ಕೆಲವು ಗಂಟೆಗಳ ಕಾಲ ಶಾಖವು ಸ್ವಲ್ಪವೂ ಕಡಿಮೆಯಾಗದಂತೆ ನಿಲ್ಲುವುದು. ಇದರಿಂದ ಬೆರಣಿಯ ಉಪಯೋಗವಿಲ್ಲದೇ ಪದಾರ್ಥಗಳನ್ನು ಪಕ್ವಮಾಡಬಹುದು.[1] ಮತ್ತು ಈ ಸಗಣಿಯನ್ನು ಜಮೀನಿಗೆ ಉಪಯೋಗಿಸುವುದರಿಂದ ಉತ್ಪತ್ತಿಯೂ ಹೆಚ್ಚಲವಕಾಶವಾಗುವುದು. ಅಲ್ಲದೆ ಜನರು ದಾರಿಯಲ್ಲೆಲ್ಲಾ ಹೇಸಿಗೆಮಾಡಿ ಕೆರೆ, ಕೊಳಗಳಿದ್ದರೆ ಅವುಗಳ ತಡಿಯಲ್ಲಿ ಮಲವಿಸರ್ಜನೆ ಮಾಡುವ ಅಸಹ್ಯಕರವಾದ ಪದ್ಧತಿಯು ನಮ್ಮ ಹಳ್ಳಿಗಳಲ್ಲಿದೆ. ಇದರಿಂದ ಊರಿನ ಆರೋಗ್ಯವು ವಿಶೇಷವಾಗಿ ಕೆಡುವುದಲ್ಲದೆ ಉತ್ತಮವಾದ ಗೊಬ್ಬರವೂ ವ್ಯರ್ಥವಾಗುತ್ತಿದೆ. ಈ ಪದ್ಧತಿಯಿಂದ ನಮ್ಮ ರೈತರಿಗೆ ಸುಮಾರು ವರ್ಷಕ್ಕೆ ಎಂಟು ಕೋಟಿ ರೂಪಾಯಿಗಳು

---

[1] "Better Villages," by Brayne.

ನಷ್ಟವಾಗುತ್ತಿದೆಯೆಂದೂ ನಿರ್ಣಯಿಸಿದ್ದಾರೆ. ಇದಕ್ಕೆ ಬದಲಾಗಿ ಕಕ್ಕಸುಗಳ ಉಪಯೋಗವನ್ನು ಹಳ್ಳಿಗಳಲ್ಲಿ ಪ್ರಚಾರಮಾಡುವುದರಿಂದ ರೈತರ ಉತ್ಪತ್ತಿ ಹೆಚ್ಚಲು ಅವಕಾಶವಾಗಬಹುದು.

ಉತ್ತಮ ಬೆಳೆ ಬರಬೇಕಾದರೆ ಒಳ್ಳೆ ಬೀಜವು ಆವಶ್ಯಕವೆಂಬುದನ್ನು ರೈತರು ಬಲ್ಲರು. "ಬೀಜದಂತೆ ವೃಕ್ಷ" ಎಂಬುದು ಹಳ್ಳಿಯಲ್ಲಿ ಮನೆಮಾತು. ಆದರೆ ಬೀಜದ ವಿಷಯದಲ್ಲಿಯೂ ರೈತರಿಗೆ ನಿಗಾ ಕಡಿಮೆ. ವ್ಯವಸಾಯದ ಇಲಾಖೆಯವರು ಪರಿಶೋಧನೆ ನಡೆಸಿ, ಉತ್ತಮ ಬೀಜಗಳನ್ನೊದಗಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ನಮ್ಮ ರೈತರಿಗೆ ಅವುಗಳಲ್ಲಿ ಇನ್ನೂ ನಂಬಿಕೆ ಹುಟ್ಟಿಲ್ಲ. ಇದಕ್ಕೆ ರೈತರ ಜಮೀನಿನಲ್ಲಿಯೇ ಉತ್ತಮವಾದ ಬೀಜಗಳನ್ನು ಉಪಯೋಗಿಸಿ ಪ್ರಯೋಗಗಳನ್ನು ನಡೆಸುವುದರಿಂದ ಅವರಲ್ಲಿ ನಂಬಿಕೆ ಹುಟ್ಟಬಹುದು. ಅಂತೂ ಉತ್ತಮ ತರಹೆಯ ಬೀಜಗಳ ಪ್ರಚಾರ ನಮ್ಮ ದೇಶದಲ್ಲಿ ಹೆಚ್ಚಾಗಿ ನಡೆಯಬೇಕು. ನಮ್ಮ ರೈತನು ಉಪಯೋಗಿಸುವ ವ್ಯವಸಾಯದ ಮುಟ್ಟುಗಳು ತೀರ ಹಳೆಯವು. ಆದರೆ ಬೇರೆ ದೇಶಗಳ ಆಧುನಿಕ ಯಂತ್ರಗಳನ್ನು ನಮ್ಮ ರೈತರು ಉಪಯೋಗಿಸಲಾರರು. ಆದರೂ ನಮ್ಮ ಸ್ಥಿತಿಗನುಗುಣವಾಗಿ ಮೈಸೂರು ಸರ್ಕಾರದವರು ಪ್ರಚಾರಮಾಡುತ್ತಿರುವ ಕೋಲಾರ ಮಿಷನ್ ನೇಗಿಲು, ಯುರೇಕಾ ನೇಗಿಲು ಇವನ್ನಾದರೂ ರೈತರು ಉಪಯೋಗಿಸಬಹುದು. ಇದರಿಂದ ಜಮೀನನ್ನು ಆಳವಾಗಿ ಉಳಲು ಅವಕಾಶವಾಗುವುದು. ಪೈರುಗಳು ಹುಲುಸಾಗಿ ಬೆಳೆಯುವುವು. ನಮ್ಮ ವ್ಯವಸಾಯದ ಹೀನಸ್ಥಿತಿಗೆ ಮಳೆಯನ್ನೇ ನಂಬಿಕೊಂಡಿರುವುದು ಒಂದು ದೊಡ್ಡ ಕಾರಣ. ಸಕಾಲದಲ್ಲಿ ಎರಡು ದಿನ ಮಳೆ ಬಾರದೆಹೋದರೆ ರೈತರ ಹಾಹಾಕಾರವನ್ನು

ಹೇಳತೀರದು. ಈಗಲೂ ಊರಿನ ಜೋಯಿಸರನ್ನು ಮಳೆ ಯಾವಾಗ ಬರುತ್ತದೆಂದು ಕೇಳುವುದು ಸಾಧಾರಣ. ನಮ್ಮ ದೇಶದ ಬೇಸಾಯವನ್ನು "ಮಳೆಯೊಡನೆ ಜೂಜಾಡಿದಂತೆ" ಎಂದು ವರ್ಣಿಸಿದ್ದಾರೆ. ಇದು ಸಹಜ. ಈ ಕುಂದು ನಿವಾರಣೆ ಯಾಗಬೇಕಾದರೆ ನೀರಾವರಿ ಅನುಕೂಲ ಹೆಚ್ಚಬೇಕು. ಮೈಸೂರು ಸರ್ಕಾರದವರು ಸಾಧ್ಯವಾದ ಕಡೆಯಲ್ಲೆಲ್ಲಾ ನೀರಾವರಿಯ ಅನುಕೂಲಕ್ಕೆ ಗಮನಕೊಡುತ್ತಿರುವುದು ಎಲ್ಲ ರಿಗೂ ತಿಳಿದಿದೆ. ನಮ್ಮ ದೇಶದಲ್ಲಿ ಸುಮಾರು ಇಪ್ಪತ್ತು ನಾಲ್ಕು ಸಾವಿರ ಕೆರೆಗಳಿವೆ. ಇವುಗಳನ್ನು ಸಾಧಾರಣವಾಗಿ ರಿಪೇರಿ ಮಾಡಿಕೊಳ್ಳಬೇಕಾದರೂ ನಮ್ಮ ರೈತರು ಸರ್ಕಾರದ ಸಹಾಯ ವನ್ನೇ ನಿರೀಕ್ಷಿಸುತ್ತಿರುತ್ತಾರೆ. ಇದು ಸಮ್ಮಮ್ಮತವಲ್ಲ. ಊರಿನ ಜನರೆಲ್ಲರೂ ಒಟ್ಟಾಗಿ ಸೇರಿ ಪ್ರಯತ್ನಮಾಡಿದರೆ ಸುಲಭವಾಗಿ ಕೆಲಸಗಳನ್ನು ಮಾಡಿಕೊಳ್ಳಬಹುದು. ಉದಾಹರಣೆಗಾಗಿ ಪ್ರತಿ ವರ್ಷವೂ ಬರುತ್ತಿರುವ ಮೆಕ್ಕಲಿನಿಂದ ಕೆರೆಯ ಆಳವು ಕಡಿಮೆ ಯಾಗುತ್ತಿದ್ದರೆ, ಆ ಮಣ್ಣನ್ನು ಅಗೆದು ಹೊಲಗಳಿಗೆ ಗೊಬ್ಬರ ವಾಗಿ ಉಪಯೋಗಿಸಬಹುದು. ಇದರಿಂದ ಕೆರೆಗಳಲ್ಲಿ ಹೆಚ್ಚು ನೀರು ನಿಲ್ಲಲು ಅವಕಾಶವಾಗುವುದು. ರೈತನ ಬೇಸಾಯಕ್ಕೆ ಮುಖ್ಯವಾದ ಅಂಗ ದನಕರುಗಳು. ನಮ್ಮ ರೈತರಲ್ಲನೇಕರು ಒಂದು ಜೊತೆ ಎತ್ತು ಕೂಡ ಇಲ್ಲದೆ ಹಸುವನ್ನೋ ಮತ್ತು ಒಂದು ಕೋಣವನ್ನೋ ಇಟ್ಟುಕೊಂಡು "ಎತ್ತಿಲ್ಲದವನಿಗೆ ಕೋಣವೇ ಸಂಜೀವ" ಎಂಬಂತೆ ಆರಂಭಮಾಡುತ್ತಿರುವುದನ್ನು ನೋಡಬಹುದು. ನಮ್ಮ ದೇಶದ ದನಗಳು ಒಂದಾನೊಂದು ಕಾಲದಲ್ಲಿ ಪ್ರಸಿದ್ಧವಾಗಿದ್ದುವು. ಹಳ್ಳಿಕಾರ ದನ, ಅಮೃತ ಮಹಲ್ ದನ, ಬೆಟ್ಟದ ದನಗಳೆಂದು ನಮ್ಮ ರಾಸುಗಳು ಬಹಳ

ಹೆಸರು ಪಡೆದಿದ್ದುವು. ಮೈಸೂರಿನ ಮಕ್ಕಳೆಲ್ಲರೂ ಗೋವಿನ ಕಥೆಯಲ್ಲಿ ಓದಿರುವ ಕರ್ನಾಟಕದ ವರ್ಣನೆಯನ್ನು ಜ್ಞಾಪಿಸಿಕೊಂಡರೆ ಸಾಕು. ಆದರೆ ಇಂದು ನಮ್ಮ ಹಳ್ಳಿಯಲ್ಲಿ ದನಕರುಗಳ ಸ್ಥಿತಿ ತುಂಬಾ ಶೋಚನೀಯವಾಗಿದೆ. ಅವುಗಳಿಗೆ ಸರಿಯಾದ ಮೇವಿಲ್ಲದೆ ರೋಗಗಳಿಂದ ನರಳಿ ಅವುಗಳ ತಳಿಯೂ ಕೂಡ ಹೀನಸ್ಥಿತಿಗೆ ಬರುತ್ತಿದೆ. ಜನಗಳಿಗೇ ಹೊಟ್ಟೆಗಿಲ್ಲ. ದನಗಳ ಮಾತೇನು! ದನಗಳ ಹೀನಸ್ಥಿತಿಯಿಂದ ಹಾಲು, ಮೊಸರು, ಬೆಣ್ಣೆಗಳಿಗೆ ಆಗರವಾಗಿ ಕೃಷ್ಣನ ಲೀಲೆಗಳಿಂದ ಶೋಭಿಸುತ್ತಿದ್ದ ಹಳ್ಳಿಗಳಲ್ಲಿ ಇಂದು ಹಾಲಿಗೆ ಅಭಾವವಾಗಿದೆ. "ಕ್ಷೀರಸಾಗರ ಭಟ್ಟ ಎಂದು ಹೆಸರು. ಮನೆಯಲ್ಲಿ ಮಜ್ಜಿಗೆ ನೀರಿಗೆ ಅಭಾವ" ಎಂಬಂತೆ ಹಳ್ಳಿಗಳಲ್ಲಿ ಹಾಲು ಮೊಸರಿಗೆ ತುಂಬಾ ಕಷ್ಟ. ಇದನ್ನು ನಿವಾರಿಸಬೇಕಾದರೆ ದನಗಳಿಗೆ ಮೇವು ಸಮೃದ್ಧಿಯಾಗಿ ಒದಗುವಂತೆ ಹೊಸ ಬೆಳೆಗಳ ಪ್ರಚಾರವಾಗಬೇಕು. ಅಲ್ಲದೆ ನಮ್ಮ ರೈತರು ಬೆಳೆಯುವ ಜೋಳ, ಹಸಿಹುಲ್ಲು ಮುಂತಾದುವುಗಳನ್ನು ಕೆಡದಂತೆ ಕಾಪಾಡುವ ಸೈಲೋಗುಣಿ (Silopits) ಹೆಚ್ಚು ರೂಢಿಗೆ ಬರಬೇಕು. ದನಗಳ ತಳಿ ಉತ್ತಮವಾಗಬೇಕಾದರೆ ಒಳ್ಳೆಯ ಬೀಜದ ಹೋರಿಗಳನ್ನು ಹಳ್ಳಿಗಳಲ್ಲಿ ಉಪಯೋಗಿಸಬೇಕು. ಹಿಂದೆ ನಮ್ಮ ಹಳ್ಳಿಗಳಲ್ಲಿದ್ದ 'ಬಸವನ' ಪದ್ಧತಿ ಇದಕ್ಕೆ ನಿದರ್ಶನವಾಗಿದೆ. ಈ ಸಂದರ್ಭದಲ್ಲಿ ಮೈಸೂರು ಸರ್ಕಾರದವರು ವಿಶೇಷ ಪ್ರಯತ್ನ ನಡೆಸುತ್ತಿದ್ದಾರೆ. ರೈತರ ಉಪಯೋಗಕ್ಕಾಗಿ ಉತ್ತಮವಾದ ಬೀಜದ ಹೋರಿಗಳನ್ನು ಸುಲಭ ಬೆಲೆಗೆ ಸಿಕ್ಕುವಂತೆ ಏರ್ಪಾಟು ಮಾಡಿರುತ್ತಾರೆ. ಈ ಮೇಲೆ ಹೇಳಿದ ಕೆಲವು ಸಲಹೆಗಳನ್ನು ಅನುಸರಿಸುವುದರಿಂದ ವ್ಯವಸಾಯ ಪದ್ಧತಿಯನ್ನು ಉತ್ತಮಗೊಳಿಸಿ ರೈತರು ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲವಕಾಶವಾಗುವುದು.

ವ್ಯವಸಾಯದ ಜೊತೆಗೆ ನಮ್ಮ ರೈತರಿಗೆ ಮುಖ್ಯವಾಗಿ ಉಪ ಕಸಬುಗಳಿರಬೇಕು. ಹಿಂದಿನ ಹಳ್ಳಿಗಳಲ್ಲಿ ನಮ್ಮ ರೈತರು ಉಪ ಕಸಬುಗಳನ್ನಿಟ್ಟುಕೊಂಡಿದ್ದರು. ಈಗಲೂ ಮುಂದುವರಿದ ಅನೇಕ ದೇಶಗಳಲ್ಲಿ ರೈತರು ಸಣ್ಣ ಕಸಬುಗಳನ್ನಿಟ್ಟುಕೊಂಡೇ ಇರುತ್ತಾರೆ. ಸಾಧಾರಣವಾಗಿ ನಮ್ಮ ರೈತರಿಗೆ ವರ್ಷವೆಲ್ಲಾ ಕೆಲಸವಿರುವುದಿಲ್ಲ. ಸುಗ್ಗಿಯು ಕಳೆದಮೇಲೆ ಪುನಃ ಮಳೆ ಬೀಳುವವರೆಗೂ ಅವರು ವ್ಯರ್ಥವಾಗಿ ಕಾಲ ಕಳೆಯುತ್ತಿರುತ್ತಾರೆ. ಈ ವಿಷಯದಲ್ಲಿ ಪರಿಶೀಲನೆ ನಡೆಸಿರುವ ಅನೇಕ ವಿದ್ವಾಂಸರ ಅಭಿಪ್ರಾಯದಲ್ಲಿ ವರ್ಷಕ್ಕೆ ನಾಲ್ಕು ತಿಂಗಳಾದರೂ ನಮ್ಮ ರೈತರು ವ್ಯರ್ಥವಾಗಿ ಕಾಲ ಕಳೆಯುತ್ತಾರೆಂದು ತಿಳಿದು ಬರುತ್ತದೆ. ರೈತರು ವಿರಾಮಕಾಲದಲ್ಲಿ ಹೆಚ್ಚು ಬಂಡವಾಳವಿಲ್ಲದೆ ಮಾಡಬಹುದಾದ ಕಸಬುಗಳು ಅನೇಕವಾಗಿವೆ. ಹಳ್ಳಿಗಳ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಬೇಕೆನ್ನುವ ಉದ್ದೇಶದಿಂದಲೇ ಮಹಾತ್ಮಾ ಗಾಂಧಿಯವರು ಭಾರತೀಯ ಕೈಗಾರಿಕೆಗಳ ಅಭಿವೃದ್ಧಿ ಸಂಘವನ್ನು ಸ್ಥಾಪಿಸಿ ತಾವು ಷೇಗಾಂವ್ ಹಳ್ಳಿಯಲ್ಲಿ ನೆಲೆಸಿರುತ್ತಾರೆ. ನಮ್ಮ ರೈತರು ಮಾಡಬಹುದಾದ ಕೆಲಸಗಳಲ್ಲಿ ರಾಟೆ ಅಥವಾ ಚರಕದ ಕೆಲಸ ಸುಲಭಸಾಧ್ಯವಾದುದು. ಹಿಂದೆ ನಮ್ಮ ರೈತರು ತಮ್ಮ ಬಟ್ಟೆಗೆ ಬೇಕಾಗುವ ಹತ್ತಿಯನ್ನು ಬೆಳೆದು ನೂಲುತೆಗೆದು ಕೈಮಗ್ಗದಿಂದ ಬಟ್ಟೆಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಒಬ್ಬ ರೈತನಿಗೆ ಸುಮಾರು ೧೦-೧೪ ಗಜ ಬಟ್ಟೆಗಳಾದರೆ ಸಮೃದ್ಧಿ. ಒಂದು ಮಣ ಹತ್ತಿ ಬೆಳೆದರೆ, ೧೬ ಗಜ ಬಟ್ಟೆಯಾಗುವುದು. ಒಂದು ಮಣ ಹತ್ತಿಯನ್ನು ಐದು ಗುಂಟೆ ಜಮೀನಿನಲ್ಲಿ ಬೆಳೆಯಬಹುದು.[1] ಇದರಿಂದ ನಮ್ಮ ರೈತರು ಸುಲಭವಾಗಿ ಹತ್ತಿ

[1] 'ಗ್ರಾಮಾಭಿವೃದ್ಧಿ ಸಂಘ'ದ ಸಲಹೆ.

ಬೆಳೆದು, ರಾಟೆಯ ಸಹಾಯದಿಂದ ದಾರ ತೆಗೆಯಬಹುದು. ಆದುದರಿಂದಲೇ ಮಹಾತ್ಮಾ ಗಾಂಧಿಯವರು ರಾಟೆಯನ್ನು ಇಂಡಿಯಾ ದೇಶದ ಬಡತನವನ್ನು ನಿವಾರಿಸುವ ಸುದರ್ಶನ ಚಕ್ರವೆಂದು ಹೇಳಿದರು. ಮದ್ರಾಸಿನ ಮುಖ್ಯ ಮಂತ್ರಿಗಳಾದ ಶ್ರೀ|| ಸಿ. ರಾಜಗೋಪಾಲಾಚಾರ್ಯರು ರೈತನು ಚರಕದಲ್ಲಿ ದಿನ ಒಂದಕ್ಕೆ ಕನಿಷ್ಠ ಒಂದಾಣೆಯನ್ನಾದರೂ ಸಂಪಾದಿಸಬಹುದೆಂದು ತಿಳಿಸಿರುತ್ತಾರೆ. ನಮ್ಮ ರೈತನ ವರಮಾನ ವರ್ಷಕ್ಕೆ ಮೂವತ್ತು—ನಲವತ್ತು ರೂಪಾಯಿಗಳು. "ಬರಿಯ ಕೈಗೆ ಕಡೆಯೇ ಹಿತ್ತಾಳೆ ಕಡಗ!" ಚರಕದಿಂದ ಬರುವ ಉತ್ಪತ್ತಿಯಿಂದ ನಮ್ಮ ರೈತನಿಗೆ ಎಷ್ಟೋ ಉಪಯೋಗವಾಗುವುದು. ಕುರಿ ಕೋಳಿಗಳನ್ನು ಸಾಕುವುದು ನಮ್ಮ ರೈತರಲ್ಲಿ ಬಹಳ ಕಾಲದಿಂದಲೂ ರೂಢಿಯಲ್ಲಿದೆ. ಆದರೆ ಇವುಗಳನ್ನು ಸಾಕುವ ರೀತಿಯು ಚೆನ್ನಾಗಿಲ್ಲ. ಈಚೆಗೆ ಸರ್ಕಾರದವರು ವೈಟ್‌ಲೆಗ್ ಹಾರನ್, ರೋಡ್ ಐಲೆಂಡರ್ಸ್ ಮುಂತಾದ ಸೀಮೆಕೋಳಿಗಳನ್ನು ರೈತರಿಗೆ ಸುಲಭವಾಗಿ ಒದಗುವಂತೆ ಏರ್ಪಾಡು ಮಾಡಿರುತ್ತಾರೆ. ಸ್ವಲ್ಪ ಎಚ್ಚರಿಕೆಯಿಂದ ಇವನ್ನು ಕಾಪಾಡಿದರೆ ಒಂದು ಕೋಳಿ ವರ್ಷಕ್ಕೆ ಇನ್ನೂರು ಮೊಟ್ಟೆಗಳನ್ನು ಕೊಡುತ್ತದೆ. ಇದರಿಂದ ರೈತರ ವರಮಾನ ಹೆಚ್ಚುವುದೆಂದು ಬೇರೆ ಹೇಳಬೇಕಾಗಿಲ್ಲ. ಕುರಿಗಳ ತಳಿಯನ್ನು ಉತ್ತಮಗೊಳಿಸಿ ಉತ್ತಮವಾದ ಉಣ್ಣೆ ದೊರೆಯುವಂತೆ ಮಾಡಲು 'ಮೆರಿನೋ ಟಗರು' ಎಂಬ ಸೀಮೆಯ ಟಗರುಗಳನ್ನು ರೈತರಿಗೆ ಸುಲಭ ಬೆಲೆಗೆ ಒದಗಿಸುತ್ತಿದ್ದಾರೆ. ಇದರಿಂದಲೂ ರೈತರು ಉಪಯೋಗ ಹೊಂದಬಹುದು. ಅನುಕೂಲವಿರುವ ಕಡೆಗಳಲ್ಲಿ ಜೇನುಹುಳಗಳನ್ನು ಸಾಕುವ ಕೈಗಾರಿಕೆಗೂ ಪ್ರೋತ್ಸಾಹಕೊಡುತ್ತಿದ್ದಾರೆ.

ಗುಲ್ಕನ್ ಮಾಡುವುದು, ಅತ್ತರ್ ತಯಾರಿಕೆ, ಹಗ್ಗ, ಚಾಪೆಯ ಕೆಲಸ, ಬತ್ತ ಕುಟ್ಟುವುದು, ಎಣ್ಣೆಯ ಗಾಣ, ಕಾಗದ ಮಾಡುವುದು ಮುಂತಾದ ಕಸಬುಗಳನ್ನು ಹಳ್ಳಿಗಳಲ್ಲಿ ಬಳಕೆಗೆ ತರಬಹುದು. ಕಾಗದದ ಕೈಗಾರಿಕೆಯು ನಮ್ಮ ದೇಶದಲ್ಲಿ ಪ್ರಚಾರದಲ್ಲಿದ್ದ ಒಂದು ಉತ್ತಮವಾದ ಕಸಬೆಂದು ಈಚೆಗೆ ತಿಳಿದುಬಂದಿದೆ.[1] ಹಳ್ಳಿಯವರು ಅನುಕೂಲವಿದ್ದರೂ ಕಾಲ ವನ್ನು ವ್ಯರ್ಥವಾಗಿ ಕಳೆಯುವರೇ ವಿನಾ ಮನೆ ಹಿತ್ತಲಲ್ಲಿ ಸೊಪ್ಪು, ತರಕಾರಿಗಳನ್ನು ಕೂಡ ಬೆಳೆಯುವುದನ್ನು ಬಿಟ್ಟಿರು ತ್ತಾರೆ. ಹಳ್ಳಿಗಳಲ್ಲಿ ಏನಾದರೂ ವಿಶೇಷವಾದರೆ ಕಾಯಿಪಲ್ಯ ಗಳನ್ನು ಪಟ್ಟಣಗಳಿಂದ ತರಬೇಕಾದ ಶೋಚನೀಯ ಸ್ಥಿತಿ ಬಂದಿದೆ. ಇದಕ್ಕೆ ಹಳ್ಳಿಗಳ ಆಲಸ್ಯವೇ ಕಾರಣ. ನಾನಾ ವಿಧವಾದ ತರಕಾರಿಗಳು, ಸೊಪ್ಪು ಮತ್ತು ಹಣ್ಣು, ಹೂವಿನ ಗಿಡಗಳು—ಇವುಗಳನ್ನು ರೈತರು ಬೆಳೆದು ಲಾಭ ಸಂಪಾದಿಸ ಬಹುದು. ಹಳ್ಳಿಗಳಲ್ಲಿ ನೀರು ನಿಂತು ರೊಚ್ಚಾಗುವ ಸ್ಥಳಗಳಲ್ಲಿ ಮಲ್ಲಿಗೆ ಅಂಟನ್ನೋ, ಬಾಳೆಯ ಗಿಡವನ್ನೋ ಹಾಕುವುದರಿಂದ ರೊಚ್ಚು ಕಡಿಮೆಯಾಗುವುದು. ಇದಕ್ಕೊ ಸಹ ನಮ್ಮ ಸರ್ಕಾರ ದವರು ಹಳ್ಳಿಯವರಿಗೆ ತರಕಾರಿ ಬೀಜಗಳು, ಕೆಲವು ಹಣ್ಣಿನ ಗಿಡಗಳನ್ನು ರಿಯಾಯಿತಿ ಬೆಲೆಗೆ ಪಂಚಾಯಿತಿಗಳಿಗೆ ಒದಗಿಸುವ ಏರ್ಪಾಡು ಮಾಡಿರುತ್ತಾರೆ. ಅಂತು ನಮ್ಮ ರೈತರು ಏನಾದ ರೊಂದು ಕಸಬನ್ನು ಇಟ್ಟುಕೊಳ್ಳದೆ ಏಳಿಗೆ ಹೊಂದಲಾರರು.

ರೈತರ ಏಳಿಗೆಗೆ ಇನ್ನೊಂದು ಮುಖ್ಯ ಸಾಧನವೆಂದರೆ ವ್ಯಾಪಾರ. ನಮ್ಮ ದೇಶವು ಬಹಳ ಹಿಂದಿನ ಕಾಲದಿಂದಲೂ

---

[1] "Article in The Illustrated Weekly of India."

ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ಈಜಿಪ್ಟ್, ಗ್ರೀಸ್, ರೋಂ ಮುಂತಾದ ಪಾಶ್ಚಾತ್ಯ ದೇಶಗಳೊಡನೆ ರತ್ನಗಳು, ಮಸ್ಲಿನ್, ಮೆಣಸು ಮತ್ತು ಮಸಾಲೆ ಮುಂತಾದ ಬಹು ಬೆಲೆ ಬಾಳುವ ಪದಾರ್ಥಗಳಲ್ಲಿ ವ್ಯಾಪಾರ ಮಾಡುತ್ತಿದ್ದುದು ಇತಿಹಾಸ ಪ್ರಸಿದ್ಧವಾಗಿದೆ. ಈಗಲೂ ವಜ್ರಗಳ ತೂಕವನ್ನು ಕ್ಯಾರೆಟ್ ಗಳಿಂದ ನಿರ್ಣಯಿಸುವುದು ನಮ್ಮ ದೇಶದಲ್ಲಿ ವ್ಯಾಪಾರ ಮಾಡುತ್ತಿದ್ದ ಅರಬ್ಬರ ಕರೋಬಾಮಣಿಯಿಂದ ಎಂದರೆ ಯಾರಿಗಾದರೂ ಆಶ್ಚರ್ಯವಾಗುವುದು. ಹಿಂದಿನ ಕಾಲದಲ್ಲಿ ಪ್ರಯಾಣ ಸೌಕರ್ಯಗಳು ಇಲ್ಲದಿದ್ದುದರಿಂದ ಹಳ್ಳಿಯ ಜನಗಳು ತಮಗೆ ಬೇಕಾದ ಪದಾರ್ಥಗಳನ್ನು ಸ್ವಪ್ರಯತ್ನಗಳಿಂದಲೇ ಒದಗಿಸಿಕೊಳ್ಳುತ್ತಿದ್ದರು. ಹೊರಗಿನ ಪದಾರ್ಥಗಳು ಬೇಕಾದರೆ ಸಾಟಿ ವ್ಯಾಪಾರದಿಂದ ಕೊಳ್ಳುತ್ತಿದ್ದರು. ಈಚೆಗೆ ಪ್ರಯಾಣ ಸೌಕರ್ಯಗಳು ಹೆಚ್ಚಿದಂತೆಲ್ಲಾ ಈ ಸ್ವಸಂಪೂರ್ಣತೆಯು ಮಾಯವಾಗಿ ಹಳ್ಳಿಯವರು ತಮಗೆ ಬೇಕಾಗುವ ಎಲ್ಲಾ ಪದಾರ್ಥಗಳನ್ನೂ ಪೇಟೆಯಿಂದಲೇ ತರಲು ಪ್ರಾರಂಭಮಾಡಿದ್ದಾರೆ. ಹಿಂದಿನ ಸಾಟಿ ವ್ಯಾಪಾರಕ್ಕೆ ಬದಲಾಗಿ ಹಣಕಾಸಿನ ಬಳಕೆ ಜಾಸ್ತಿಯಾಗಿದೆ. ರೈತರ ಆಶಯಗಳು ಹೆಚ್ಚಾಗಿ ಅವುಗಳನ್ನು ತೃಪ್ತಿಪಡಿಸಲು ತಾವು ಬೆಳೆದ ಪದಾರ್ಥವನ್ನು ದೂರದ ಪೇಟೆಗಳಲ್ಲಿ ಮಾರಬೇಕೆನ್ನುವ ಕುತೂಹಲವು ಬೆಳೆಯುತ್ತಿದೆ. ಈ ವ್ಯಾಪಾರವು ಕೇವಲ ರಾಷ್ಟ್ರೀಯವಾಗಿರದೆ ಅಂತರರಾಷ್ಟ್ರೀಯವಾಗುತ್ತಿದೆ. ೧೯೩೩-೩೪ನೆಯ ಇಸವಿಯಲ್ಲಿ ಇಂಡಿಯಾ ದೇಶದಿಂದ ರಫ್ತಿನಲ್ಲಿ (Export) ಸುಮಾರು ಮುವತ್ತುನಾಲ್ಕು ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಕಚ್ಚಾಪದಾರ್ಥಗಳೇ ಇದ್ದವು. ಹೀಗೆ ವ್ಯಾಪಾರದಲ್ಲಿ ನಮ್ಮ ರೈತರ ಭಾಗವೇ ಜಾಸ್ತಿಯಾಗಿರು

ವುದರಿಂದ, ಅವರಿಗೆ ಹೆಚ್ಚಾದ ಲಾಭ ಬರುವಂತೆ ಮಾಡುವುದು ಸರ್ಕಾರದ ಕರ್ತವ್ಯ. ನಮ್ಮ ದೇಶದ ವ್ಯಾಪಾರಕ್ರಮದಲ್ಲಿ ರೈತರಿಗೆ ಅನೇಕ ಕೊರತೆಗಳಿವೆ. ರೈತರು ವ್ಯಾಪಾರದ ವಿಷಯ ದಲ್ಲಿ ಶಿಕ್ಷಿತರಲ್ಲ. ಇದರಿಂದ ಅವರು ದಳ್ಳಾಳಿಗಳ ಮೋಸಕ್ಕೆ ತುತ್ತಾಗುತ್ತಾರೆ. ರೈತರು ಕಷ್ಟಪಟ್ಟು ದುಡಿದರೂ ಅವರಿಗೆ ಬರಬೇಕಾದ ನ್ಯಾಯವಾದ ಲಾಭದ ಬಹು ಭಾಗವನ್ನು ಈ ದಳ್ಳಾಳಿಗಳೇ ಅಪಹರಿಸುತ್ತಾರೆ. ದಳ್ಳಾಳಿಗಳ ವರ್ತನೆಯನ್ನು ಸೂಚಿಸಲು ರಚಿಸಿದ್ದ ಒಂದು ಚಿತ್ರದಲ್ಲಿ ಹಸು ಸಾಕುವವನು ಮತ್ತು ಹಾಲು ಕೊಳ್ಳುವವನು ಸಣ್ಣಾಗಿದ್ದರೂ, ಹಾಲೊದಗಿಸುವ ದಳ್ಳಾಳಿಯು ಬೊಜ್ಜುಹೊಟ್ಟೆಯ ದಿಟ್ಟನಾಗಿದ್ದನು. ಅನೇಕ ಮಂದಿ ಸಾಹುಕಾರರು ರೈತರಿಗೆ ಮುಂಗಡವಾಗಿ ಸಾಲಕೊಟ್ಟು ದಿನಸಿಯನ್ನು ತಮ್ಮ ಮಂಡಿಗೇ ಹಾಕಬೇಕೆಂದು ನಿರ್ಬಂಧ ಪಡಿಸುವುದು ಸಾಮಾನ್ಯವಾಗಿದೆ. ಅಲ್ಲದೆ ರೈತನು ದಿನಸಿಯನ್ನು ಮಂಡಿಗೆ ತೆಗೆದುಕೊಂಡುಹೋದಾಗ ಸೋಡಿ, ರುಸುಂ, ದಳ್ಳಾಳಿ, ಪಡಿತರ, ಧರ್ಮ, ಮಜೂರಿ, ಕಮಿಷನ್ ಮುಂತಾದ ಸುಲಿಗೆಗಳಿಂದ ರೈತರನ್ನು ತೊಂದರೆಪಡಿಸುತ್ತಾರೆ. ಅಲ್ಲದೆ ಸಾಮಾನುಗಳನ್ನು ಅವುಗಳ ಯೋಗ್ಯತೆಗೆ ಅನುಸಾರವಾಗಿ ವಿಂಗಡಿಸದೆ ಎಲ್ಲಾ ಒಟ್ಟಿಗೆ ಸೇರಿಸಿ ಹರಾಜುಮಾಡುವ ಪದ್ಧ ತಿಯು ರೈತರ ನಷ್ಟಕೆ ಕಾರಣವಾಗಿದೆ. ಅಲ್ಲದೆ ತೂಕ ಮತ್ತು ಅಳತೆಯಲ್ಲಿಯೂ ಕೂಡ ಬಹು ಚಮತ್ಕಾರವಾದ ರೀತಿಯಲ್ಲಿ ಮೋಸಪಡಿಸುತ್ತಾರೆ. ಸಾಧಾರಣವಾಗಿ ಮಾರಲು ಚಿಕ್ಕ ಅಳತೆ, ಕೊಳ್ಳಲು ದೊಡ್ಡ ಅಳತೆಗಳನ್ನು "ಚಿನ್ನಕ್ಕ ಪೆದ್ದಕ್ಕ" ಎಂಬ ಸಂಕೇತಗಳಿಂದ ಉಪಯೋಗಿಸುವುದು ಸಾಧಾರಣ ವಾಗಿದೆ. ಅಂತೂ ನಾನಾ ರೀತಿಗಳಲ್ಲಿ ರೈತರು ಮೋಸಹೋಗು

ತ್ತಿದ್ದಾರೆ. ಇದನ್ನು ತಪ್ಪಿಸಲು ತೂಕ ಮತ್ತು ಅಳತೆಗಳ ಕಾನೂನು ಜಾರಿಮಾಡಿ, ಧಾರಣೆಗಳನ್ನು ನಿಶ್ಚಯಿಸಲು ಮಾರ್ಕೆಟಿಂಗ್ ಪಂಚಾಯಿತಿಗಳನ್ನು ನೇಮಿಸುವುದು ಆವಶ್ಯಕ. ನಮ್ಮ ದೇಶದಿಂದ ರಫ್ತಾಗುವ ಸಾಮಾನುಗಳ ವಿಷಯದಲ್ಲಿ ಜನರಿಗೆ ,ತಿಳಿವಳಿಕೆ ಕೊಡಲು ಮಾರ್ಕೆಟಿಂಗ್ ಆಫೀಸರು ಗಳನ್ನು ನೇಮಿಸುವುದು ಆವಶ್ಯಕ. ಮೈಸೂರು ಸರ್ಕಾರದವರು ನೇಮಿಸಿರುವ 'ಟ್ರೇಡ್ ಕಮಿಷನರ್' ಎಂಬ ಅಧಿಕಾರಿಗಳ ಸಹಾಯದಿಂದ ಮೈಸೂರಿನ ಪದಾರ್ಥಗಳಿಗೆ ಪರದೇಶಗಳಲ್ಲಿ ಗಿರಾಕಿ ಹೆಚ್ಚುವಂತೆ ಮಾಡಿರುವುದು ವಿಶೇಷ ಸಂಗತಿ. ಕೆಲವು ದಿನಗಳ ಹಿಂದೆ ನಡೆದ ಪ್ರದರ್ಶನಗಳಲ್ಲಿ ಎಲಿಜಬೆತ್ ರಾಣಿ ಯವರು ಮೈಸೂರಿನ ಸಾಮಾನುಗಳನ್ನು ಹೊಗಳಿ ಕೊಂಡು ಕೊಂಡರೆಂದು ಕೇಳಿದರೆ ಯಾರುತಾನೆ ಹೆಮ್ಮೆ ಪಡಲಾರರು? ರೈತರಿಗೆ ವ್ಯಾಪಾರದ ವಿಷಯದಲ್ಲಿ ಸಹಕಾರ ಸಂಘಗಳು ನೆರವಾಗಬಹುದು. ಜರ್ಮನಿ, ಇಟಲಿ, ಸ್ವಿಟ್ಸರ್ಲೆಂಡ್, ಐರ್ಲೆಂಡ್, ಡೆನ್ಮಾರ್ಕ್ ಮುಂತಾದ ದೇಶಗಳಲ್ಲಿ ಸಹಕಾರ ವ್ಯಾಪಾರ ಸಂಘಗಳು ರೈತರಿಗೆ ತುಂಬಾ ಉಪಕಾರಮಾಡಿವೆ. ಇವು ರೈತರಿಗೆ ಹೆಚ್ಚು ಲಾಭ ಬರುವಂತೆ ದಿನಸಿಯನ್ನು ಒಟ್ಟು ಗೂಡಿಸಲು ಸಹಾಯ ಮಾಡಬಹುದು. ಅಲ್ಲದೆ ಸಾಮಾನು ಗಳನ್ನು ಯೋಗ್ಯತೆಗೆ ತಕ್ಕಂತೆ ವಿಂಗಡಿಸಿ (Grading) ಮಾರ ಬಹುದು. ರೈತರಿಗೆ ಮುಂಗಡವಾಗಿ ಹಣ ಒದಗಿಸಿ ವರ್ತಕರ ಬಲೆಯಿಂದ ತಪ್ಪಿಸಿ ಹೆಚ್ಚು ಲಾಭಪಡೆಯುವಂತೆ ಮಾಡ ಬಹುದು. ಮೈಸೂರು ಸೀಮೆಯಲ್ಲಿಯೂ ಬೆಳೆಯುವ ಅಡಿಕೆ, ಕಾಫಿ, ಏಲಕ್ಕಿ, ರೇಷ್ಮೆ ಮುಂತಾದ ಪದಾರ್ಥಗಳನ್ನು ಈ ತರಹ ಸಂಘಗಳ ಮೂಲಕ ಮಾರಾಟಮಾಡಿ ಹೆಚ್ಚು ಲಾಭ

ಹೊಂದಲು ಅವಕಾಶವಿದೆ. ಅಂತೂ ರೈತರ ವ್ಯಾಪಾರ ಸೌಕರ್ಯಗಳು ರೈತನ ಏಳಿಗೆಗೆ ಮುಖ್ಯ ಸೋಪಾನವೆಂದು ಹೇಳಬಹುದು.

೩. ಬಡತನ, ಸಾಲ, ಪರಿಹಾರ

ಹಿಂದಿನ ಎರಡು ಅಧ್ಯಾಯಗಳಲ್ಲಿ ಹಳ್ಳಿಗಳ ಈಗಿನ ಹೀನ ಸ್ಥಿತಿಗೆ ಕಾರಣಗಳನ್ನೂ ಮತ್ತು ಹಳ್ಳಿಗಳ ಏಳಿಗೆಗೆ ಮುಖ್ಯವಾದ ವ್ಯವಸಾಯ, ಉಪಕಸುಬುಗಳು ಮತ್ತು ವ್ಯಾಪಾರ ಇವು ಗಳಲ್ಲಿ ಆಗಬೇಕಾದ ಸುಧಾರಣೆಗಳನ್ನೂ ವಿಮರ್ಶೆಮಾಡಿದೆವು. ಈಗ ಹಳ್ಳಿಗಳಲ್ಲಿ ವಿಶೇಷವಾಗಿ ಕಂಡುಬರುತ್ತಿರುವ ಬಡತನ ಮತ್ತು ಸಾಲಗಳ ವಿಷಯಗಳನ್ನು ಸ್ವಲ್ಪಮಟ್ಟಿಗೆ ತಿಳಿದು ಕೊಂಡು, ಅದಕ್ಕೆ ತಕ್ಕ ಪರಿಹಾರಮಾರ್ಗಗಳನ್ನೂ ಯೋಚಿಸ ಬೇಕಾಗಿದೆ. ನಮ್ಮ ಹಳ್ಳಿಗಳ ಬಡತನವು ಒಂದು ಭಯಂಕರ ವಾದ ಸಂಗತಿ. ಒಬ್ಬ ಕವಿಯು ವರ್ಣಿಸಿರುವಂತೆ ನಮ್ಮ ದೇಶದ ಜನಗಳು "ಬಡತನದ ಪಂಕದೊಳ್ ಪುಳುಗಳಂತುದಯಿಸು ವರು, ಸಾಯುವರು" ಪುರಾತನ ಗ್ರಂಥಗಳಲ್ಲಿಯೂ ಮತ್ತು ಇತಿಹಾಸಗಳಲ್ಲಿಯೂ ನಮ್ಮ ದೇಶವು ಭಗವಂತನ ಮೆಚ್ಚಿನ ನಾಡೆಂದೂ, ಸೃಷ್ಟಿಕರ್ತನು ಅನೇಕ ಅವತಾರಗಳನ್ನು ಮಾಡಿ ತನ್ನ ಲೀಲೆಗಳನ್ನು ತೋರಿಸಿರುವ ನಂದನವನವೆಂದೂ, ಚಿನ್ನದ ನಾಡೆಂದೂ, ರನ್ನದ ತೌರುಮನೆಯೆಂದೂ ವರ್ಣಿಸಿರು ವುದನ್ನು ಓದಬಹುದಾಗಿದೆ. ಸಾಮಾನ್ಯ ದೃಷ್ಟಿಯಿಂದಲೂ ನಮ್ಮ ದೇಶದ ಹುಲುಸೂ, ಜಲತೃಣಕಾಷ್ಠಗಳ ಸಮೃದ್ಧಿಯೂ, ಜನಬಾಹುಳ್ಯವೂ, ಬೇಸಾಯಗಾರರ ಕುಶಲತೆಯೂ ಹೇರಳ ವಾಗಿದ್ದು ಪ್ರಪಂಚದಲ್ಲೆಲ್ಲಾ ಉತ್ತಮವಾದ ದೇಶವೆಂದು

ಹೇಳಬೇಕಾಗುವುದು. ಆದರೆ ನಿಜಸ್ಥಿತಿಯು ಹಾಗಿಲ್ಲ. ನೆಮ್ಮದಿಯಿಂದ ಉಂಡು, ಉಟ್ಟು, ತೃಪ್ತರಾದ ಜನಗಳಿಗಿಂತ ಹೊಟ್ಟೆಗಿಲ್ಲದ ಭಿಕಾರಿಗಳೇ ವಿಶೇಷವಾಗಿ ಕಂಡುಬರುತ್ತಿದ್ದಾರೆ. ಬಡತನದ ಬೇಗೆಯಿಂದ ಬೆಂದು ಜನರು ನಿಸ್ತೇಜರಾಗಿದ್ದಾರೆ. ಎಲ್ಲೆಲ್ಲಿಯೂ ನಿರುದ್ಯೋಗವು ಜಾಸ್ತಿಯಾಗಿ ಕೇವಲ ಜೀವ ಧಾರಣೆಗೂ ಮಾರ್ಗವಿಲ್ಲದೆ, ಬಹು ತೊಂದರೆಪಡುತ್ತಿರುವವರ ಆರ್ತನಾದವೇ ಕೇಳಿಬರುತ್ತಿದೆ. ನಮ್ಮ ದೇಶದ ಬಡತನ "ಕೈಯೊಳಗಿನ ಹುಣ್ಣಿನಂತೆ" ಅದನ್ನು ತಿಳಿಯಲು ಬೇರೆ ಕನ್ನಡಿ ಬೇಕಾಗಿಲ್ಲ. ಸರ್ವಜ್ಞನು ಹೇಳಿರುವಂತೆ ನಮ್ಮ ರೈತರು ದುಡಿಯುವುದು ಕೇವಲ "ಚೋಟುದ್ದ ಹೊಟ್ಟೆಗೆ ಮತ್ತು ಗೇಣುದ್ದ ಬಟ್ಟೆಗೆ."

ಒಂದು ದೇಶದ ಐಶ್ವರ್ಯವನ್ನು ಆದೇ ದೇಶೀಯರ ಸರಾಸರಿ ವರಮಾನದಿಂದ ನಿರ್ಧರಿಸುವುದು ಸಾಮಾನ್ಯ ಪದ್ಧತಿಯಾಗಿದೆ. ಇದರಂತೆ ಪ್ರತಿಯೊಬ್ಬ ಭಾರತೀಯನ ವರಮಾನವನ್ನೂ ಇತರ ದೇಶೀಯರ ವರಮಾನದೊಂದಿಗೆ ಹೋಲಿಸಿ ನೋಡಿದರೆ ನಮ್ಮ ದೇಶದ ಆರ್ಥಿಕಸ್ಥಿತಿಯು ತಿಳಿಯುವುದು. ತಲೆಯೊಂದಕ್ಕೆ ಇಂಗ್ಲೆಂಡಿನಲ್ಲಿ ೧,೬೯೨, ಕೆನಡಾ ೧,೨೬೮, ಯು. ಎಸ್. ಎ. ೨,೦೫೩, ಫ್ರಾನ್ಸ್ ೬೩೬ ರೂಪಾಯಿಗಳ ಸರಾಸರಿ ವರಮಾನವಿರುವಾಗ ನಮ್ಮ ದೇಶದ ಸರಾಸರಿ ವರಮಾನವು ಕೇವಲ ೮೦ ರೂಪಾಯಿಗಳಿಗಿಂತ ಕಡಿಮೆಯೆಂದರೆ ನಮ್ಮ ದೇಶದ ಆರ್ಥಿಕ ಸ್ಥಿತಿಯು ಎಂತಹ ವಿಷಮಪರಿಸ್ಥಿತಿಯಲ್ಲಿರುವುದೆಂದು ತಿಳಿಯಬರುವುದು. ಈ ಬಡತನದ ಫಲವಾಗಿ ನಮ್ಮ ರೈತರ ಜೀವನದ ಅಂತಸ್ತು ಕೂಡ (Standard of Life) ಬಹಳ ಕೆಳಮಟ್ಟದಲ್ಲಿದೆ. ೧೯೩೧ ನೆಯ ಮೈಸೂರು ಸೆನ್ಸಸ್ ವರದಿಯ ಪ್ರಕಾರ ನಮ್ಮ

ರೈತರಲ್ಲಿ ಪ್ರತಿಯೊಬ್ಬನಿಗೂ ಕಡೆಯ ಪಕ್ಷ ತಿಂಗಳಿಗೆ ನಾಲ್ಕು ರೂಪಾಯಿಗಳಾದರೂ ಜೀವನಕ್ಕೆ ಆವಶ್ಯಕವೆಂತಲೂ, ಆದರೆ ಅವರ ವರಮಾನವು ವರ್ಷಕ್ಕೆ ಮೂವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಲ್ಲವೆಂತಲೂ ತಿಳಿದುಬರುತ್ತದೆ. ಮೈಸೂರು ದೇಶದ ಕೆಲವು ಹಳ್ಳಿಗಳಲ್ಲಿ ನಡೆಸಿದ ಪರಿಶೀಲನೆಯ ಪ್ರಕಾರ ತಲೆಯೊಂದಕ್ಕೆ ವರ್ಷಕ್ಕೆ ೬೯ ರೂಪಾಯಿಗಳು ಖರ್ಚಾಗುವುದೆಂದೂ, ಆದರೆ ಅದೇ ಜೈಲಿನಲ್ಲಿರುವ ಖೈದಿಗೆ ಸರ್ಕಾರದವರು ವರ್ಷಕ್ಕೆ ೧೩೦ ರೂಪಾಯಿಗಳನ್ನು ಖರ್ಚುಮಾಡುವರೆಂದೂ ಗೊತ್ತಾಗಿದೆ. ಇದರಿಂದ ನಮ್ಮ ರೈತನ ಜೀವನವು ಖೈದಿಯ ಜೀವನಕ್ಕಿಂತ ಹೀನಸ್ಥಿತಿಯಲ್ಲಿದೆ, ಎಂದಮೇಲೆ, ಇನ್ನು ಬಡತನವನ್ನು ಬೇರೆ ವರ್ಣಿಸಬೇಕಾಗಿಲ್ಲ. ಈ ಬಡತನಕ್ಕೆ ಹಲವು ಕಾರಣಗಳುಂಟು. ನಮ್ಮ ದೇಶದ ಜನಸಂಖ್ಯೆಯು ವಿಶೇಷವಾಗಿ ಏರುತ್ತಿದೆ. ೧೯೪೧ನೆಯ ಇಂಡಿಯಾ ಸೆನ್ಸಸ್ ವರದಿಯಿಂದ ನಮ್ಮ ದೇಶದ ಜನಸಂಖ್ಯೆಯು ೩,೮೮೮ ಲಕ್ಷ ಎಂದೂ ಕಳೆದ ಹತ್ತು ವರ್ಷಗಳಲ್ಲಿ (೧೯೩೧–೪೧ ರವರಿವಿಗೆ) ೩೮೦ ಲಕ್ಷ ಪ್ರಜೆ ಜಾಸ್ತಿಯಾಗಿರುತ್ತದೆಂದೂ ತಿಳಿದುಬರುತ್ತದೆ. ಇದರಿಂದ ಊಟಮಾಡುವವರು ಹೆಚ್ಚಾಗುತ್ತಿದ್ದರೂ ಸಂಪಾದನೆಯು ಮಾತ್ರ ಹೆಚ್ಚಾಗದೆ ಅನೇಕರು ಹೊಟ್ಟೆಗಿಲ್ಲದೆ ನರಳಬೇಕಾಗುವುದು. ಅಲ್ಲದೆ ಜನಗಳು ಒಂದೇ ಉದ್ಯೋಗವನ್ನು ನಂಬಿಕೊಂಡಿರುವುದರಿಂದ ಬೇರೆ ಸಂಪಾದನೆಗೆ ಮಾರ್ಗವಿಲ್ಲದೆ ತೊಂದರೆಪಡುತ್ತಿರುತ್ತಾರೆ. ನಮ್ಮ ದೇಶದಲ್ಲಿ ಶೇಕಡಾ ೮೦ಕ್ಕಿಂತ ಜಾಸ್ತಿಯಾಗಿ ವ್ಯವಸಾಯವನ್ನೇ ನಂಬಿರುತ್ತಾರೆ. ಅವರ ಸ್ಥಿತಿಯು ಹಿಂದೆಯೇ ವರ್ಣಿಸಿರುವಂತೆ ಸ್ವಲ್ಪವೂ ತೃಪ್ತಿಕರವಾಗಿಲ್ಲ. ಇದಲ್ಲದೆ ನಮ್ಮ ಸಮಾಜದಲ್ಲಿರುವ ಜಾತಿಪದ್ಧತಿಗಳೂ, ಅವಿಭಕ್ತ ಕುಟುಂಬ, ಬಾಲ್ಯ

ವಿವಾಹ, ಅಸ್ಪೃಶ್ಯತೆ–ಇವುಗಳೂ ಸಹ ನಮ್ಮ ಜನಗಳ ಬಡತನಕ್ಕೆ ಕಾರಣಗಳಾಗಿವೆ. ಅಲ್ಲದೇ ನಮ್ಮ ಜನಗಳಲ್ಲಿರುವ ಮೂಢನಂಬಿಕೆಯೂ ಅವರ ಬಡತನಕ್ಕೆ ಕಾರಣ. ಹಳ್ಳಿಯವರಲ್ಲಿ ಸಾಧಾರಣವಾಗಿ "ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ" ಎಂಬ ನಂಬಿಕೆಯೂ ಬೇರೂರಿ ನಿಂತಿದೆ. ಅಂತು, ಕಾರಣಗಳು ಏನೇ ಇರಲಿ, ಬಡತನವು ನಮ್ಮ ಜನಗಳ ಬೆನ್ನು ಹತ್ತಿ ಬಂದಿರುವ ಭೇತಾಳವೆಂದು ನಿಸ್ಸಂಶಯವಾಗಿ ಹೇಳಬಹುದು.

ಸಾಲ : ಹೀಗೆ ಬಡತನದಲ್ಲಿ ತೊಂದರೆಪಡುತ್ತಿರುವ ಜನರು ಯಾವ ಕೆಲಸಮಾಡಬೇಕಾದರೂ ಸಾಲವನ್ನು ಕೋರುವುದು ಬಹಳ ಸಹಜ. ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿಯೇ ಸಾಯುತ್ತಿರುವುದು ಸಾಧಾರಣವಾದ ವಿಷಯ. ನಮ್ಮ ದೇಶದಲ್ಲಿ ಸಾಲಕ್ಕೂ ಬಡತನಕ್ಕೂ ಒಂದು ವಿಶೇಷವಾದ ಸಂಬಂಧವಿದೆ. ಸಾಲದ ಕಾರಣ ಬಡತನ. ಬಡತನದ ಫಲ ಸಾಲ. "ಹುಚ್ಚು ಬಿಟ್ಟ ಹೊರತು ಮದುವೆಯಾಗದು. ಮದುವೆಯಾದ ಹೊರತು ಹುಚ್ಚು ಬಿಡದು" ಎಂಬಂತೆ ಅದೊಂದು ವಿಷಮಚಕ್ರ. ನಮ್ಮ ದೇಶದ ರೈತರ ಸಾಲವನ್ನು ಸ್ಥೂಲವಾಗಿ ನಿರ್ಧರಿಸುವುದಕ್ಕಾಗಿ ಪ್ರಯತ್ನಗಳು ಬಹುಕಾಲದಿಂದಲೂ ನಡೆದಿವೆ. ೧೮೭೫ರಲ್ಲಿ ಏರ್ಪಟ್ಟ ಡೆಕನ್ನಿನ ರೈತರ ಸಮಿತಿಯವರು ಜಮಿನಿರತಕ್ಕ ಹಿಡುವಳಿದಾರರಲ್ಲಿ ಸರಾಸರಿ ತಲೆಯೊಂದಕ್ಕೆ ೩೭೧ ರೂಪಾಯಿಗಳು ಸಾಲವಿದೆ ಎಂದು ನಿರ್ಧರಿಸಿದರು. ೧೮೮೦ ಮತ್ತು ೧೯೦೧ರಲ್ಲಿ ನೇಮಿಸಲ್ಪಟ್ಟ ಕ್ಷಾಮ ಸಮಿತಿಯವರು ರೈತರಲ್ಲಿ ಸುಮಾರು ಶೇಕಡಾ ೭೫ರಷ್ಟು ಮಂದಿ ಸಾಲದಲ್ಲಿ ಮುಳುಗಿರುತ್ತಾರೆಂದು ಅಭಿಪ್ರಾಯ

ಪಟ್ಟರು. ಫ್ರೆಡರಿಕ್ ನಿಕೋಲ್ಸನ್, ಎಡ್ವರ್ಡ್ ಮ್ಯಾಕ್ಲಗನ್ ಮತ್ತು ಡಾರ್ಲಿಂಗ್ ಮುಂತಾದ ವಿದ್ವಾಂಸರ ನಿರ್ಣಯಗಳ ಆಧಾರಗಳಿಂದ ಬ್ರಿಟಿಷ್ ಇಂಡಿಯಾದ ಸಾಲ ಸುಮಾರು ೬೦೦ ಕೋಟಿ ರೂಪಾಯಿಗಳೆಂದು ಗೊತ್ತಾಗಿತ್ತು. ೧೯೬೦ರಲ್ಲಿ ವಿಮರ್ಶೆ ನಡೆಸಿದ ಕೇಂದ್ರ ಬ್ಯಾಂಕಿಂಗ್ ಕಮಿಟಿಯುವರ ಆಧಾರದಿಂದ ನಮ್ಮ ದೇಶದ ರೈತರ ಸಾಲವು ೧,೦೦೦ ಕೋಟಿ ರೂಪಾಯಿಗಳೆಂದು ನಿರ್ಧರಿಸಲ್ಪಟ್ಟಿದೆ. ಅವರು ಈ ಸಾಲದ ಕೋಟಲೆಯು ಹಿಮಾಲಯದಿಂದ ಕನ್ಯಾಕುಮಾರಿಯವರೆವಿಗೂ ಆವರಿಸಿರುವುದೆಂದು ಸಾರಿದರು. ನಮ್ಮ ಮೈಸೂರಿನಲ್ಲಿಯೂ ನಡೆಸಿರುವ ನಿರ್ಣಯಗಳ ಆಧಾರದಿಂದ ರೈತರ ಸಾಲವು ೩೫ ಕೋಟಿ ರೂಪಾಯಿಗಳಿಗಿಂತ ಮಿಗಿಲಾಗಿರುವುದೆಂದು ಗೊತ್ತಾಗುತ್ತದೆ.

ನಮ್ಮ ರೈತರ ಈ ಸಾಲದ ಹೊರೆಗೆ ಅನೇಕ ಕಾರಣಗಳಿವೆ. ವ್ಯವಸಾಯದ ಹೀನಸ್ಥಿತಿ, ಉಪಕಸಬುಗಳಿಲ್ಲದಿರುವುದು, ಜನಗಳು ಹೊಟ್ಟೆಗಿಲ್ಲದೆ ಅನೇಕ ವ್ಯಾಧಿಗಳಿಂದ ನರಳುತ್ತಿರುವುದು, ಕಾಲಕ್ಕೆ ಸರಿಯಾಗಿ ಮಳೆಬೆಳೆಗಳಾಗದಿರುವುದು, ವ್ಯವಸಾಯಕ್ಕೆ ಮುಖ್ಯವಾದ ದನಕರುಗಳು ಸರಿಯಾದ ಮೇವಿಲ್ಲದೆ ರೋಗಗಳಿಗೆ ತುತ್ತಾಗುವುದು, ರೈತನು ತನಗೆ ಬೇಕಾದ ಸಲಕರಣೆಗಳನ್ನೊದಗಿಸಿಕೊಳ್ಳಲು ಮೂಲಧನದ ಅಭಾವ, ಇವುಗಳ ಜೊತೆಗೆ ಪ್ರಬಲವಾದ ಕೆಲವು ಕಾರಣಗಳು ನಮ್ಮ ರೈತರನ್ನು ಸಾಹುಕಾರರ ಗುಲಾಮರನ್ನಾಗಿ ಮಾಡುತ್ತಿವೆ. ನಮ್ಮ ರೈತರು ಸಾಲವಾಗಿ ಪಡೆದ ಹಣವನ್ನು ಆದಾಯಬರುವ ಉಪಯೋಗವಾದ ರೀತಿಯಲ್ಲಿ ವಿನಿಯೋಗಿಸದೆ ವ್ಯರ್ಥವಾಗಿ ದುಂದುಖರ್ಚುಮಾಡುವರು. ಸಾಧಾರಣವಾಗಿ ರೈತರು ತಮ್ಮ

ಸಂಸಾರಗಳಿಗೆ ಮಿತವಾಗಿ ಖರ್ಚುಮಾಡುತ್ತಿದ್ದರೂ, ಮದುವೆ, ಹಬ್ಬ ಮುಂತಾದ ಉತ್ಸವ ಸಮಯಗಳಲ್ಲಿಯೂ ಮತ್ತು ಸಾವು ಮುಂತಾದ ವಿಶೇಷ ಸಂದರ್ಭಗಳಲ್ಲಿಯೂ "ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂಬ" ನಿಯಮವನ್ನು ಮರೆತು ಯೋಗ್ಯತೆ ಮೀರಿ ಖರ್ಚುಮಾಡಲು ಯತ್ನಿಸುತ್ತಾರೆ. ಇವಕ್ಕೆ ನಮ್ಮ ಸಮಾಜದಲ್ಲಿ ಈ ವಿಶೇಷ ಸಂದರ್ಭಗಳಲ್ಲಿ ಹಣ ಖರ್ಚು ಮಾಡಿದಷ್ಟು ತಮಗೆ ಗೌರವ ದೊರೆಯುವುದೆಂಬ ತಪ್ಪು ಭಾವನೆಯೇ ಕಾರಣ. ಸಮಾರಾಧನೆಯಲ್ಲಿ ಲಾಡು ಮಂಡಿಗೆ ಗಳನ್ನು ತಿಂದು ತೇಗುವ ನೆಂಟರಾರೂ ಸಾಲಗಾರನು ಹಣಕ್ಕೆ ತಗಾದೆ ಮಾಡುವಾಗ ನೆರವಾಗುವುದಿಲ್ಲ. ಈ ದುಂದುಗಾರಿಕೆಯ ಜೊತೆಗೆ ಮುಂದಾಲೋಚನೆಯ ಅಭಾವವು ರೈತರ ಹೀನಸ್ಥಿತಿಗೆ ಕಾರಣವಾಗಿದೆ. "ನಾಳೆ ಯಾರೋ ನಾವಾರೋ" ಎಂಬ ಭಾವನೆಯು ಅವರಲ್ಲಿ ಬೇರೂರಿ ಮುಂದಾಲೋಚನೆಯಿಲ್ಲದೆ ಹಣ ವ್ಯಯಮಾಡಿ ಸಾಲ ತೀರಿಸಲು ಮಾರ್ಗವಿಲ್ಲದೆ ತೊಂದರೆಪಡುತ್ತಿರುವರು. ಇದರ ಜೊತೆಗೆ ಕೋರ್ಟು ಕಚೇರಿ ವ್ಯವಹಾರ ಮಾಡುವುದರಲ್ಲಿ ರೈತರಿಗಿರುವ ವಿಶೇಷವಾದ ಮಮತೆಯು ಅವರ ಹೀನಸ್ಥಿತಿಗೆ ಕಾರಣವಾಗಿದೆ. ಯಾವುದೋ ಅಲ್ಪವಿಷಯಕ್ಕಾಗಿ ನೂರಾರು ರೂಪಾಯಿಗಳನ್ನು ವ್ಯರ್ಥವಾಗಿ ಖರ್ಚುಮಾಡುವರು. ರೈತರು ತಾವು ಹೊಟ್ಟೆಗೆ ತಿನ್ನದೆ, ಬಟ್ಟೆ ಉಡದೆ, ಹೆಂಡತಿ ಮಕ್ಕಳಿಗೆ ವಂಚನೆಮಾಡಿ ಕೂಡಿಟ್ಟ ತಮ್ಮ ದುಡಿಮೆಯನ್ನು ದೇವರಿಗರ್ಪಿಸುವ ಮುಡುಪಿನಂತೆ ವ್ಯವಹಾರಕ್ಕಾಗಿ ಒಪ್ಪಿಸುತ್ತಿರುವುದು ಬಹಳ ಶೋಚನೀಯವಾದ ವಿಷಯ. ಅವರು ರನ್ನನ ಗದಾಯುದ್ಧದಲ್ಲಿ "ನೆಲಕಿರಿವೆನೆಂದು ಬಗೆದಿರೇಂ ಛಲಕಿರಿವೆಂ" ಎಂದು ದುರ್ಯೋಧನನು

ಹೇಳಿರುವಂತೆ ವ್ಯಾಜ್ಯ ಮಾಡುವುದು ಪ್ರಯೋಜನಕ್ಕಲ್ಲ; ಛಲಕ್ಕಾಗಿ. ಈ ಕೆಟ್ಟಚಾಳಿಯು ನಮ್ಮ ರೈತರಿಂದ ತೊಲಗಿದ ಹೊರತು ಅವರಿಗೆ ಏಳಿಗೆಯಿಲ್ಲ. ನಮ್ಮ ರೈತರ ಸಾಲಕ್ಕೆ ಪಿತ್ರಾರ್ಜಿತವಾದ ಸಾಲವು ಮುಖ್ಯವಾದ ಕಾರಣಗಳಲ್ಲೊಂದು. ಸಾಲವು ವಂಶಪಾರಂಪರ್ಯವಾಗಿ ಬರುವ ಆಸ್ತಿ. ತಂದೆಯ ಋಣವನ್ನು ತೀರಿಸುವುದು ಮಗನ ಪವಿತ್ರ ಕರ್ತವ್ಯವೆಂಬ ಭಾವನೆಯಿಂದ ತಮಗೆ ಸಂಬಂಧವಿಲ್ಲದ ಸಾಲದ ಸಂಕೋಲೆಗೆ ಸಿಕ್ಕಿ ನರಳುತ್ತಿರುತ್ತಾರೆ. ಇದರಿಂದ ಸಾಹುಕಾರರು ಕುರಿಮರಿಯನ್ನು ಹೆದರಿಸಿದ ತೋಳನಂತೆ ರೈತರನ್ನು ಕೋಟಲೆಗೊಳಿಸುತ್ತಿರುವರು. ಬ್ರಿಟಿಷರ ಆಳ್ವಿಕೆಯಿಂದ, ನಮ್ಮ ದೇಶದಲ್ಲಿ ನೆಲಸಿರುವ ಶಾಂತಿಯಿಂದ, ದೊಡ್ಡ ಪಟ್ಟಣಗಳು, ರೈಲು, ಮೋಟಾರು ಮುಂತಾದ ಸೌಲಭ್ಯಗಳು ಅಭಿವೃದ್ಧಿಯಾಗಿ ಜಮೀನಿನ ಬೆಲೆಯು ಏರಿದ್ದುದರಿಂದ ರೈತರಿಗೆ ಕಷ್ಟವಿಲ್ಲದೆ ಸಾಲ ಸಿಕ್ಕಲು ಅವಕಾಶವಾಯಿತು. ಇದರಿಂದ ದುಂದುಗಾರಿಕೆ ಹೆಚ್ಚಾಗಿ ರೈತರ ಜೀವನಕ್ರಮದಲ್ಲಿ ಅನೇಕ ಬದಲಾವಣೆಗಳು ಬಂದು ಹೆಚ್ಚುತ್ತಿರುವ ಖರ್ಚಿಗೆ ತಕ್ಕ ವರಮಾನವಿಲ್ಲದೆ ಸಾಲಗಾರರ ಬಲೆಗೆ ಬೀಳುತ್ತಿದ್ದಾರೆ.

ಲೇವಾದೇವಿಯು ಬಹು ಕಾಲದಿಂದ ನಮ್ಮ ದೇಶದಲ್ಲಿದ್ದರೂ ಸಾಹುಕಾರರು ಕೆಲವು ನಿರ್ಬಂಧಗಳನ್ನು ಅನುಸರಿಸಬೇಕಾಗಿತ್ತು. ದುಬಾರಿಬಡ್ಡಿ ಹಾಕುವುದು ಧರ್ಮವಿರುದ್ಧವೆಂದು ಭಾವಿಸಲ್ಪಟ್ಟು ಗ್ರಾಮಗಳಲ್ಲಿದ್ದ ಹಿರಿಯರು (ಪಂಚಾಯಿತರು) ವ್ಯವಹಾರಗಳನ್ನು ತೀರ್ಮಾನಮಾಡುತ್ತಿದ್ದುದರಿಂದ, ಸಾಹುಕಾರರ ಸ್ವೇಚ್ಛಾಪ್ರವರ್ತನೆಗೆ ಅವಕಾಶವಿರುತ್ತಿರಲಿಲ್ಲ. ಬ್ರಿಟಿಷರ ಆಳ್ವಿಕೆ ಬಂದ ಮೇಲೆ ಹಳ್ಳಿಗಳ ಅಚ್ಚುಕಟ್ಟು ಸಡಲಿ

ನ್ಯಾಯತೀರ್ಮಾನಕ್ಕೆ ಸಿವಿಲ್ ಕೋರ್ಟುಗಳು ಜಾಸ್ತಿಯಾದವು. ಅನೇಕ ಕಾನೂನುಗಳು ಬಳಕೆಗೆ ಬಂದುವು. ಹಳ್ಳಿಗಳ ವಿದ್ಯಮಾನಗಳನ್ನು ಅರಿಯದ ಅಧಿಕಾರಿಗಳು ಬರೀ ಕಾನೂನನ್ನೇ ಅನುಸರಿಸಿ ವ್ಯವಹಾರಗಳನ್ನು ತೀರ್ಮಾನ ಮಾಡುತ್ತಾ ಬಂದುದರಿಂದ ಸಾಹುಕಾರನಿಗೆ ನಿರಾತಂಕವಾಯಿತು. ಇದರಿಂದ ಸಾಹುಕಾರರು ರೈತರಿಂದ ಚಕ್ರಬಡ್ಡಿಯನ್ನು ವಸೂಲ್ಮಾಡಲು ಹಿಂದೆಗೆಯದೆ ಅನೇಕ ಸಂದರ್ಭಗಳಲ್ಲಿ ಅವರ ಆಸ್ತಿಪಾಸ್ತಿಗಳನ್ನು ತಮ್ಮ ಬಾಕಿಗೆ ಈಡಾಗಿ ತೆಗೆದುಕೊಳ್ಳುವುದು ಬಹು ಸಾಧಾರಣವಾಗಿ ಹೋಯಿತು. ಸ್ವಾಭಾವಿಕವಾಗಿ ಜನರಲ್ಲಿರಬೇಕಾದ ದಯೆ ದಾಕ್ಷಿಣ್ಯಗಳು ಮಾಯವಾಗಿ ಹಣವೇ ಪ್ರಧಾನವೆಂಬ ಭಾವನೆಯು ಜನರಲ್ಲಿ ಮನೆಮಾಡಿಕೊಂಡಿದೆ. ಹೀಗಾದರೂ ಈಗಲೂ ರೈತರಿಗೆ ಸಾಹುಕಾರರೇ ಗತಿ. ಅವರೇ ರೈತರ ಕಾಮಧೇನು. ಕಷ್ಟಕಾಲದಲ್ಲಿ ಹಣಕೊಡುವುದಲ್ಲದೆ ಕ್ಷಾಮ ಕಾಲಗಳಲ್ಲಿ ಜೀವಧಾರಣೆಗಾದರೂ ದಿನಸಿಯನ್ನು ಕೊಟ್ಟು ಅವರನ್ನು ಕಾಪಾಡುತ್ತಾರೆ. ರೈತರ ಅವಿವೇಕವೆಂಬ ಮರುಭೂಮಿಯಲ್ಲಿ ಸಾಹುಕಾರನು ಒಂದು ಜಲಾಶಯವೆಂದು ಹೇಳಬಹುದು. ಪ್ರಪಂಚವನ್ನೇ ಆವರಿಸಿದ್ದ ಆರ್ಥಿಕ ಮುಗ್ಗಟ್ಟಿನಿಂದ ರೈತರು ಬೆಳೆಯುವ ಪದಾರ್ಥಗಳ ಬೆಲೆ ಇಳಿದು ಹೋಗಿ ಸಾಲತೀರಿಸುವುದು ಬಹು ಕಷ್ಟವಾಗಿ ಕಂಗೆಟ್ಟಿದ್ದರು. ಆದರೆ ಎರಡನೇ ಘೋರ ಸಂಗ್ರಾಮದ ಪರಿಣಾಮವಾಗಿ ಪದಾರ್ಥಗಳ ಬೆಲೆಗಳು ವಿಶೇಷ ಏರಿರುವುದರಿಂದ ಅನೇಕ ರೈತರಿಗೆ ಹೆಚ್ಚು ಹಣ ದೊರೆಯುವಂತಾಗಿದೆ. ಆದರೂ ವ್ಯವಸಾಯದ ಖರ್ಚು ವಿಪರೀತವಾಗಿ ಹೆಚ್ಚಿರುವುದರಿಂದಲೂ ಜೀವನ ನಿರ್ವಹಣವೆಚ್ಚವು ಏರಿರುವುದರಿಂದಲೂ

ಸಾಲಗಳನ್ನು ತೀರಿಸುವುದು ಅನೇಕರಿಗೆ ಸಾಧ್ಯವಾಗಿಲ್ಲ. ಮೇಲೆ ಹೇಳಿದ ಕಾರಣಗಳಿಂದ ರೈತರು ಸಾಲದ ಹೊರೆಯಲ್ಲಿ ಸಿಕ್ಕಿ ನರಳುತ್ತಿದ್ದಾರೆ. "ಸಾಲವೋ ಶೂಲವೋ" ಎಂಬಂತೆ ಸಾಲದ ಮಹಿಮೆಯನ್ನು ಸಾಲಮಾಡಿರುವವರೆಲ್ಲರೂ ಬಲ್ಲರು. ಸರ್ವಜ್ಞನು ಹೇಳಿರುವಂತೆ "ಸಾಲವನು ಕೊಂಬಾಗ ಮೇಲೋಗರುಂಡಂತೆ ಸಾಲಿಗರು ಬಂದು ಸೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ" ಎಂಬ ಮಾತೇ ಸಾಕು.

ಹೀಗೆ ಪ್ರತಿ ದಿನವೂ ಹೆಚ್ಚುತ್ತಿರುವ ಸಾಲದ ಕೋಟಲೆಯಿಂದ ರೈತರನ್ನು ಕಾಪಾಡಬೇಕೆಂಬ ಉದ್ದೇಶದಿಂದ ಸರ್ಕಾರದವರು ಅನೇಕ ಪ್ರಯತ್ನಗಳನ್ನು ನಡೆಸಿರುವರು. ಅವುಗಳನ್ನು ವಿಮರ್ಶೆಮಾಡುವುದಕ್ಕೆ ಮೊದಲು ಒಂದು ಮುಖ್ಯವಾದ ವಿಷಯವನ್ನು ಗಮನಿಸಬೇಕಾಗುವುದು. ಸಾಲಮಾಡಿ ಯಾವುದಾದರೂ ಆದಾಯ ಬರತಕ್ಕ ರೀತಿಯಲ್ಲಿ ವೆಚ್ಚಮಾಡಿದ್ದರೆ ಆ ಸಾಲವನ್ನು ತೀರಿಸುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ಅನಾವಶ್ಯಕವಾದ ದುಂದುಗಾರಿಕೆ ಮಾಡಿದ ಸಾಲವು ಜನರನ್ನು ಬೆಂಕಿಯಂತೆ ಸುಡುವುದು. ನಮ್ಮ ದೇಶದ ಸಾಲದಲ್ಲಿ ಹೆಚ್ಚು ಭಾಗವು ನಿರರ್ಥಕವಾದ ಸಾಲವಾಗಿರುವುದರಿಂದ ಬಹಳ ಆತಂಕಕ್ಕೆ ಕಾರಣವಾಗಿದೆ. ಜನರಲ್ಲಿ ಸಾಲಮಾಡುವ ಚಾಳಿಯು ತಪ್ಪಬೇಕಾದರೆ ಜ್ಞಾನಪ್ರಚಾರವಾಗಬೇಕು. ಈ ಉದ್ದೇಶದಿಂದ ಸರ್ಕಾರದವರು ಪ್ರೈಮರಿ ವಿದ್ಯಾಭ್ಯಾಸ ಹರಡಬೇಕೆಂದು ವಿಶೇಷ ಪ್ರಯತ್ನಮಾಡುತ್ತಿದ್ದರೂ ಅದು ಫಲಕಾರಿಯಾಗಿಲ್ಲ. ವಿದ್ಯಾಪ್ರಚಾರ ಪ್ರಯತ್ನಗಳು ಹೆಚ್ಚಾಗಿ ನಡೆಯಬೇಕು. ಇವರ ಜೊತೆಗೆ ಜನರಲ್ಲಿ ಮಿತವ್ಯಯಬುದ್ಧಿಯನ್ನು ಹೆಚ್ಚಿಸಿ ಕಷ್ಟಕಾಲಕ್ಕೆ ಸಹಾಯವಾಗುವಂತೆ ಸ್ವಲ್ಪ

ಹಣವನ್ನು ಶೇಖರಿಸಲು ಸೇವಿಂಗ್ಸ್ ಬ್ಯಾಂಕುಗಳನ್ನು ಏರ್ಪ ಡಿಸಬೇಕು. ನಮ್ಮ ದೇಶದಲ್ಲಿ ಅನೇಕ ಖಾಸಗೀ ಸರ್ಕಾರೀ ಮತ್ತು ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕುಗಳಿದ್ದರೂ ಅವು ತೀರಾ ಕಡಿಮೆ. ಈ ಬ್ಯಾಂಕುಗಳಲ್ಲಿ ಕೂಡಿಸಿದ ಹಣವನ್ನು ಆದಾಯ ಬರುವ ಕೈಗಾರಿಕೆ ಮುಂತಾದ ಉದ್ಯಮಗಳಲ್ಲಿ ಉಪ ಯೋಗಿಸಬೇಕು. ಈಗ ಜಾರಿಯಲ್ಲಿರುವ ಸಿವಿಲ್ ಕಾನೂನು ಗಳಿಂದ ಅನೇಕ ತೊಂದರೆಗಳಿವೆ. ರೈತನಿಗೆ ಅನ್ಯಾಯವಾಗಿ ಬಡ್ಡಿಹಾಕಿ ಆತನಿಂದ ಆಸ್ತಿಪಾಸ್ತಿಗಳನ್ನು ಕಸಿದುಕೊಳ್ಳಲು ಇರತಕ್ಕ ಅವಕಾಶವನ್ನು ತಪ್ಪಿಸಬೇಕು. ಈ ಉದ್ದೇಶದಿಂದ ಬ್ರಿಟಿಷ್ ಸರ್ಕಾರದವರು ೧೮೭೯ರಲ್ಲಿ "ಡೆಕನ್ ಅಗ್ರಿಕಲ್ಚ ರಿಸ್ಟ್ ರಿಲೀಫ್ ಆಕ್ಟು" ಎಂಬ ಕಾನೂನನ್ನೂ ೧೯೧೮ರಲ್ಲಿ "Usurious Loans Act" ಎಂಬ ಕಾನೂನನ್ನೂ ಜಾರಿಗೆ ತಂದರು. ಆದರೆ "ರಾಯಲ್ ಕಮಿಷನ್ ಆಫ್ ಅಗ್ರಿ ಕಲ್ಚರ್" ಎಂಬ ಸಮಿತಿಯುವರು ತಿಳಿಸಿರುವಂತೆ ಅವುಗಳಿಂದ ಏನೂ ಉಪಯೋಗವಾಗಿಲ್ಲ. ಪಂಜಾಬ್ ಸರ್ಕಾರದವರು ಜಾರಿಮಾಡಿರುವ ಪಂಜಾಬ್ 'ಅಕೌಂಟ್ಸ್ ಬಿಲ್' ಎಂಬ ಮಸೂದೆಯ ಪ್ರಕಾರ ಎಲ್ಲಾ ಸಾಹುಕಾರರೂ ತಮ್ಮ ಲೆಕ್ಕಗಳನ್ನು ಸರಿಯಾದ ಪುಸ್ತಕಗಳಲ್ಲಿ ಬರೆಯಬೇಕೆಂದೂ, ಆರು ತಿಂಗಳಿಗೆ ಒಂದುಸಾರಿಯಾದರೂ ಸಾಲಗಾರರಿಗೆ ಅವರ ವರ ಸಾಲದ ಲೆಕ್ಕಚಾರವನ್ನು ತೋರಿಸುವ ರಸೀತಿಯನ್ನು ಕೊಡುವಂತೆ ಏರ್ಪಡಿಸಬೇಕೆಂದೂ ಮತ್ತು ಸಾಹುಕಾರರು ಲೈಸೆನ್ಸ್ ಪಡೆಯಬೇಕೆಂದೂ ವಿಧಾಯಕ ಮಾಡಿದ್ದಾರೆ. ಇಂಡಿಯಾ ಸರಕ್ಕಾರದ (Central Banking) ಸಮಿತಿಯು ವರು ಅಭಿಪ್ರಾಯಪಟ್ಟಿರುವಂತೆ ನಮ್ಮಲ್ಲಿ ಬೇರೂರಿರುವ ಸಾಲ

ವೆಂಬ ವಿಷವೃಕ್ಷವನ್ನು ನಿರ್ಮೂಲಮಾಡುವುದು ಆವಶ್ಯಕ ವಾಗಿದೆ. ಇದಕ್ಕಾಗಿ ಸಾಹುಕಾರರಿಗೂ ಸಾಲಗಾರರಿಗೂ ರಾಜೀ ಮಾಡಿಸಿ (Debt Conciliation) ಋಣವನ್ನು ಬಗೆಹರಿಸಲು ಅಧಿಕಾರಿಗಳು ಪ್ರಯತ್ನಪಡುವುದರಿಂದ ವಿಶೇಷ ಪ್ರಯೋಜನ ವುಂಟೆಂದು ಸೂಚಿಸಿರುತ್ತಾರೆ. ರೈತರ ವಿಷಮಸ್ಥಿತಿಯನ್ನು ಸಾಹುಕಾರರಿಗೆ ತಿಳಿಸಿ, ಅವರ ದಯಾದಾಕ್ಷಿಣ್ಯಗಳನ್ನು ಸವಿ ಮಾತುಗಳಿಂದ ಜಾಗೃತಗೊಳಿಸಿ, ಸಾಲಗಾರರಿಗೆ ಸಹಾಯ ಮಾಡಬಹುದು. ಇದಕ್ಕಾಗಿ ಪ್ರತಿಯೊಂದು ಸರ್ಕಾರದವರೂ ಯೋಗ್ಯರೂ ಸುಶಿಕ್ಷಿತರೂ ವಾಕ್ಪಟುಗಳೂ ಆದ ಅಧಿಕಾರಿ ಗಳನ್ನು ಜನಗಳಲ್ಲಿ ಜ್ಞಾನಪ್ರಚಾರ ಕಾರ್ಯಕ್ಕೆ ನೇಮಿಸಬೇಕು. ಸಾಲದ ಮೊಬಲಗನ್ನು ನಿರ್ಧರಿಸಿ ಅದನ್ನು ಕಂತುಗಳಲ್ಲಿ ತೀರಿ ಸಲು ಅನುಕೂಲವಾಗುವಂತೆ ಮಾಡಬೇಕು. ಸಹಕಾರಸಂಸ್ಥೆ ಗಳು ರೈತರಿಗೆ ಬೇಕಾಗುವ ಹಣವನ್ನು ಸುಲಭರೀತಿಯಲ್ಲಿ ಒದಗಿಸಲು ಅವಕಾಶ ಮಾಡಿಕೊಡಬೇಕು. ಸಾಲ ರಿಯಾಯಿತಿ ಮಾಡಿಸುವ ಮಸೂದೆಗಳು ಮಧ್ಯಪ್ರಾಂತಗಳಲ್ಲಿಯೂ ಮತ್ತು ಮದ್ರಾಸ್‌ನಲ್ಲಿಯೂ ಜಾರಿಯಲ್ಲಿವೆ. ಮದ್ರಾಸ್ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀಯುತ ಸಿ. ರಾಜಗೋಪಾಲಾ ಚಾರ್ಯರು ಜಾರಿಗೆ ತಂದಿರುವ ಡೆಟ್ ರಿಲೀಫ್ ಬಿಲ್ ಎಂಬ ಮಸೂದೆಯು ಸ್ತೋತ್ರಾರ್ಹವಾಗಿದೆ. ಇದನ್ನನುಸರಿಸಿ ಇತರ ಕಾಂಗ್ರೆಸ್ ಸರ್ಕಾರಗಳೂ ಈ ತರಹ ಪ್ರಯತ್ನಗಳನ್ನು ಮಾಡು ತ್ತಿರುವುದು ಸಂತೋಷದ ಸುದ್ದಿ. ಮೈಸೂರು ಸರ್ಕಾರದವರು ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ ಎಂಬ ಕಾನೂನನ್ನು ಜಾರಿ ಮಾಡಿರುವುದೂ "Debt Conciliation Boards" ಎಂಬ ಸಾಲದ ರಿಯಾಯಿತಿ ಸಮಿತಿಗಳನ್ನು ಏರ್ಪಡಿಸಿರುವುದೂ

ಒಂದು ಹೆಮ್ಮೆಯ ವಿಷಯ. ಕೆಲವು ವರ್ಷಗಳಿಂದೀಚೆಗೆ ನಮ್ಮ ದೇಶದಲ್ಲಿ ಜಮೀನು ರೈತರಿಂದ ಸಾಹುಕಾರರ ಕೈಗೆ ಸೇರುತ್ತಿರುವುದು ಬಹಳ ವಿಷಾದಕರವಾದ ಸಂಗತಿ. ರೈತರು ಸಾಲದಲ್ಲಿ ಮುಳುಗಿ ತಮ್ಮ ಸರ್ವಸ್ವವನ್ನೂ ಸಾಹುಕಾರರ ಪಾಲುಮಾಡಿ ತಬ್ಬಲಿಗಳಾಗಿರುವುದರಿಂದ ದೇಶದ ಆರ್ಥಿಕ ನೆಮ್ಮದಿಗೆ ಭಂಗವಾಗುತ್ತದೆ. ರೈತರು ದೇಶವೆಂಬ ಮನೆಗೆ ಕಂಬಗಳಿದ್ದಂತೆ. ಅವರ ಕಷ್ಟವನ್ನು ತಪ್ಪಿಸಬೇಕೆಂದು ಪಂಜಾಬು ಸರ್ಕಾರದವರು "Land Alienation Act" ಎಂಬ ಮಸೂದೆಯ ಪ್ರಕಾರ ಸಾಹುಕಾರರು ಜಮೀನನ್ನು ರೈತರಿಂದ ಕೊಳ್ಳುವುದಕ್ಕಾಗಲೀ ಅಥವಾ ೩೦ ವರ್ಷಗಳಿಗೆ ಜಾಸ್ತಿ ಭೋಗ್ಯಮಾಡಿಕೊಳ್ಳುವುದಾಗಲೀ ಅವಕಾಶವಿರುವುದಿಲ್ಲ. ಇದರಿಂದ ರೈತರನ್ನು ಸಾಹುಕಾರರ ಹಿಡಿತದಿಂದ ತಪ್ಪಿಸಿದರೂ ಸಾಹುಕಾರರಿಗೆ ಬದಲಾಗಿ ಅನುಕೂಲಸ್ಥರಾದ ರೈತರೇ ಬಡರೈತರನ್ನು "ದೊಡ್ಡ ಮೀನು ಸಣ್ಣ ಮೀನುಗಳನ್ನು ನುಂಗುವಂತೆ" ತೊಂದರೆಪಡಿಸಲು ಅವಕಾಶವಾಗುವುದು. ಇವುಗಳ ಜೊತೆಗೆ ಬಹುಕಾಲದಿಂದ ಸರ್ಕಾರದವರು ತಕಾವಿ ಸಾಲವನ್ನು ಕೊಡುವ ಏರ್ಪಾಡುಮಾಡಿರುತ್ತಾರೆ. ಇದರಿಂದ ರೈತರಿಗೆ ಉಪಯೋಗವಾಗಿದ್ದರೂ ಜನಸಾಮಾನ್ಯದಲ್ಲಿ ತಕಾವಿ ಸಾಲವೆಂದರೆ ಬೇಜಾರು ಕಂಡುಬರುತ್ತಿರುವುದು. ಇದಕ್ಕೆ ಸರ್ಕಾರದಲ್ಲಿ ಜನಗಳಿಗಿರುವ ಅನುಮಾನ, ಸಾಲ ವಸೂಲು ಮಾಡುವುದರಲ್ಲಿ ಅಧಿಕಾರಿಗಳ ಕಾಠಿಣ್ಯ, ಸಾಲ ಮಂಜೂರು ಮಾಡುವುದರಲ್ಲಿ ಅನಾವಶ್ಯಕವಾದ ಕಾಲವಿಳಂಬ, ಸಣ್ಣ ಅಧಿಕಾರಿಗಳ ಕಿರುಕುಳ ಮತ್ತು ಲಂಚಕೋರುತನ— ಇವುಗಳು ಮುಖ್ಯ ಕಾರಣಗಳೆಂದು ಹೇಳಬಹುದು. ಅಲ್ಲದೆ

ಸರ್ಕಾರದವರೊಬ್ಬರೇ ಎಷ್ಟೇ ಪ್ರಯತ್ನಪಟ್ಟರೂ ರೈತರಿಗೆ ಬೇಕಾಗುವ ಅನುಕೂಲಗಳನ್ನು ಒದಗಿಸುವುದೂ ಅಸಾಧ್ಯ. ತಕಾವಿ ಸಾಲವು "ಹೊಳೆಯಲ್ಲಿ ಹುಣಿಸೆಹಣ್ಣು ಕದಡಿದಂತೆ" ಬಹುಮಟ್ಟಿಗೆ ಫಲಕಾರಿಯಾಗಲಿಲ್ಲ.

ರೈತರಿಗೆ ನಿಜವಾಗಿಯೂ ಸಹಾಯಮಾಡಿ ಅವರನ್ನು ಸಾಲದ ಹೊರೆಯಿಂದ ತಪ್ಪಿಸಬೇಕಾದರೆ ಸಹಕಾರ ಸಂಘಗಳು ಬಹುಮಟ್ಟಿಗೆ ನೆರವಾಗುವುದೆಂದು ಧಾರಾಳವಾಗಿ ಹೇಳಬಹುದು. "ಹೆಸರಿಲ್ಲದ ರೋಗಕ್ಕೆ ಹೀರಿಮದ್ದು" ಎಂಬಂತೆ ಪರಸ್ಪರ ಸಹಾಯ ಸಂಘಗಳು ರೈತರ ಕಷ್ಟಕ್ಕೆ ಸಂಜೀವಿನಿ ಎಂದು ಹೇಳಬಹುದು. ಸಹಕಾರ ತತ್ವವು ಅಮೋಘವಾದದ್ದು. ಅಲ್ಪ ಚೈನತ್ಯವುಳ್ಳ ರೈತರು ತಮ್ಮಲ್ಲಿರುವ ಸ್ವಲ್ಪ ಹಣವನ್ನು ಕೊಟ್ಟು ಸದಸ್ಯರಾಗಿ ಒಂದು ಸಂಘವನ್ನೇರ್ಪಡಿಸಿಕೊಂಡರೆ, 'ಸಂಘವೇ ಶಕ್ತಿ' ಎಂಬಂತೆ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅನುಕೂಲವಾಗುವುದು. "ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ಬತ್ತ" ಎಂಬಂತೆ ರೈತರಿಂದ ಕೂಡಿಸಲ್ಪಟ್ಟ ಹಣದಿಂದ ಉಪಯೋಗವಾದ ಬಾಬುಗಳಿಗೆ ಸಾಲವನ್ನು ಸುಲಭರೀತಿಯಲ್ಲಿ ಕೊಟ್ಟು ರೈತರನ್ನು ಸಾಹುಕಾರರ ಬಲೆಗೆ ಬೀಳದಂತೆ ಮಾಡಬಹುದು. ಅಲ್ಲದೆ ರೈತರ ವ್ಯಾಪಾರವನ್ನು ಉತ್ತಮಪಡಿಸಿ ಹೆಚ್ಚು ಲಾಭ ಬರುವಂತೆ ಮಾಡುವುದಕ್ಕೂ, ಜಮೀನು ಹಂಚಿಕೆಯನ್ನು ತಪ್ಪಿಸಿ ಒಟುಗೂಡಿಸುವುದಕ್ಕೂ, ಗ್ರಾಮಗಳಿಗೆ ಬೇಕಾಗುವ ವೈದ್ಯಸಹಾಯವನ್ನೊದಗಿಸುವುದಕ್ಕೂ, ಮಿತವ್ಯಯ ಬುದ್ಧಿಯನ್ನು ಹೆಚ್ಚಿಸಿ ಹಳ್ಳಿಗರ ಜೀವನದ ಅಂತಸ್ತನ್ನು ಉತ್ತಮಗೊಳಿಸುವುದಕ್ಕೂ ಮತ್ತು ವ್ಯಾಜ್ಯ ವ್ಯವಹಾರಗಳನ್ನು ಬಗೆಹರಿಸಿ ಶಾಂತಿಯನ್ನು ನೆಲೆಗೊಳಿಸುವುದಕ್ಕೂ ಸಹಕಾರ

ಸಂಘಗಳು ಸಹಕಾರಿಯಾಗಬಹುದು. ಹೀಗಿದ್ದರೂ ನಮ್ಮ ದೇಶದಲ್ಲಿ ಸಹಕಾರ ಸಂಘಗಳು ತೃಪ್ತಿಕರವಾಗಿ ಕೆಲಸಮಾಡಿಲ್ಲ. ಮೈಸೂರು ದೇಶದಲ್ಲಿ ೧೯೩೪–೩೫ರಲ್ಲಿ ಸುಮಾರು ೧,೯೯೯ ಸಂಘಗಳಿದ್ದವು. ಇವುಗಳಲ್ಲಿ ೧,೩೬,೩೭೭ ಸದಸ್ಯರಿದ್ದರು. ಇದನ್ನು ನಮ್ಮ ದೇಶದ ಜನಸಂಖ್ಯೆಗೆ ಹೋಲಿಸಿದರೆ ಸಹಕಾರದ ವಿಚಾರದಲ್ಲಿ ನಮ್ಮ ನಾಡು ಎಷ್ಟು ಹಿಂದುಳಿದಿದೆ ಎಂದು ಗೊತ್ತಾಗುವುದು. ಇನ್ನೊಂದು ವಿಷಯ. ನಮ್ಮ ರೈತರ ಮೇಲಿರುವ ಸಾಲದ ಹೊರೆಯನ್ನು ಸಾಮಾನ್ಯ ಪರಸ್ಪರ ಸಹಾಯ ಸಂಘಗಳು ಇಳಿಸಲಾರವು. ಅಲ್ಲದೆ ಸೊಸೈಟಿಗಳು ರೈತರಿಗೆ ಬೇಕಾಗುವ ದೀರ್ಘಾವಧಿ ಸಾಲಗಳನ್ನು ಒದಗಿಸಲಾರವು. ಆದುದರಿಂದಲೇ ಜಮೀನು ಅಡಮಾನದ ಬ್ಯಾಂಕುಗಳನ್ನು ಸ್ಥಾಪಿಸುವ ಆವಶ್ಯಕತೆಯು ಹೆಚ್ಚುತ್ತಿದೆ. ರೈತರ ಸಾಲದ ಹೊರೆಯನ್ನು ಇಳಿಸುವುದು, ಜಮೀನಿನ ಆಬಾದಿಗೆ ಬೇಕಾಗುವ ಸಾಲವನ್ನೊದಗಿಸುವುದು–ಈ ಬ್ಯಾಂಕುಗಳ ಉದ್ದೇಶ. ಈ ರೀತಿಯ ಬ್ಯಾಂಕುಗಳು ನಮ್ಮ ದೇಶದಲ್ಲಿ ಹೆಚ್ಚುತ್ತಿರುವುದು ಸಂತೋಷದ ವಿಷಯ. ನಮ್ಮ ಮೈಸೂರಿನಲ್ಲಿಯೂ ಒಂದು ಕೇಂದ್ರ ಅಡಮಾನದ ಬ್ಯಾಂಕನ್ನು ಸ್ಥಾಪಿಸಿ, ಅನೇಕ ತಾಲ್ಲೂಕುಗಳಲ್ಲಿ ಅದರ ಶಾಖೆಗಳನ್ನು ಏರ್ಪಡಿಸಿ ರೈತರಿಗೆ ಸಹಾಯಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಈ ಪ್ರಯತ್ನ ಇನ್ನೂ ಹೆಚ್ಚಾಗಿ ನಡೆಯಬೇಕು. ಇದರ ಜೊತೆಗೆ ರೈತರಲ್ಲಿ ಜೀವವಿಮಾಪದ್ಧತಿ (Life Insurance)ಯನ್ನು ಬಳಕೆಗೆ ತರುವುದು ಉತ್ತಮ.

ಆದರೆ ಪಾಲಿಸಿಯ ಕಂತುಗಳು ಸ್ವಲ್ಪವಾಗಿರಬೇಕು. ಸಹಕಾರ ಸಂಘಗಳು ಅಭಿವೃದ್ಧಿಯಾಗಬೇಕಾದರೆ ಮತ್ತು ರೈತರಿಗೆ

ಅವುಗಳಿಂದ ನಿಜವಾಗಿಯೂ ಉಪಯೋಗವಾಗಬೇಕಾದರೆ, ಜನಗಳಲ್ಲಿ ತಿಳಿವಳಿಕೆ ಹೆಚ್ಚಾಗಬೇಕು. ಅನೇಕ ಹಳ್ಳಿಗಳಲ್ಲಿ ಪರಸ್ಪರ ಸಹಾಯ ಸಂಘಗಳ ಲೆಕ್ಕಪತ್ರಗಳನ್ನು ಇಡಬಲ್ಲ ವಿದ್ಯಾವಂತರು ವಿರಳ ಇದ್ದರೂ ನಿಸ್ಪೃಹತೆಯಿಂದ ಕೆಲಸ ಮಾಡುವವರು ಕಡಿಮೆ. ಸಂಘದ ಹಣವನ್ನು ಸ್ವಾರ್ಥಕ್ಕಾಗಿ ಉಪಯೋಗಿಸುವವರೇ ಹೆಚ್ಚು. ಅಲ್ಲದೆ ರೈತರು ತಾವು ಪಡೆದ ಹಣವನ್ನು ಸಕಾಲಕ್ಕೆ ಪಾವತಿಮಾಡಿದರೆ ತಮಗೇ ಒಳ್ಳೆಯ ದೆಂಬುದನ್ನು ಅರಿಯರು. ಇದನ್ನೆಲ್ಲಾ ನಿವಾರಿಸಲು ವಿದ್ಯಾ ಪ್ರಚಾರವೇ ರಾಜಮಾರ್ಗ. ಸಾಲ ಮಾಡುವುದರಿಂದ ತಮ್ಮ ಏಳಿಗೆಗೆ ಭಂಗಬರುವುದೆಂದು ಒಂದು ವೇಳೆ ಸಾಲಮಾಡಿದರೂ ಹಣವನ್ನು ದುಂದುವೆಚ್ಚಮಾಡದೆ ಉಪಯೋಗವಾದ ರೀತಿ ಯಲ್ಲಿ ಖರ್ಚುಮಾಡುವುದರಿಂದ ಸಾಲವನ್ನು ಸುಲಭವಾಗಿ ತೀರಿಸಬಹುದೆಂದು ಮನದಟ್ಟಾಗಬೇಕು. ಒಟ್ಟಿನಲ್ಲಿ ತಮ್ಮ ಬಾಳಿನ ಉನ್ನತಿ ಅಥವಾ ಅವನತಿಯು ತಮ್ಮ ಕೈಯಲ್ಲೇ ಇರುವುದೆಂಬ ದೃಢವಾದ ನಂಬಿಕೆಯು ಅವರಲ್ಲಿ ಮೂಡಬೇಕು. ಇದೇ ಅವರ ಬಡತನದ ನಿವಾರಣೆಗೆ ಸರಿಯಾದ ಚಿಕಿತ್ಸೆ.

೪. ವೈದ್ಯಸಹಾಯ, ವಿದ್ಯಾಭ್ಯಾಸ, ಜನಜಾಗೃತಿ

ಇದುವರೆಗೂ ಗ್ರಾಮಾಂತರಗಳ ಹೀನಸ್ಥಿತಿಯನ್ನೂ ಅವು ಗಳ ಏಳಿಗೆಗೆ ಬೇಕಾದ ಮಾರ್ಗಗಳನ್ನೂ ಕುರಿತು ಸ್ವಲ್ಪಮಟ್ಟಿಗೆ ವಿಮರ್ಶಿಸಿದೆವು. ಅಲ್ಲದೆ ರೈತರ ತಲೆಯಮೇಲೆ ದೊಡ್ಡ ಬೆಟ್ಟ ದಂತಿರುವ ಸಾಲದ ಹೊರೆಯನ್ನೂ, ಅದರ ಕಾರಣಗಳನ್ನೂ

ಮತ್ತು ಅದನ್ನಿಳಿಸಲು ನೆರವಾಗಬಹುದಾದ ಕೆಲವು ಪರಿಹಾರಗಳನ್ನೂ ಯೋಚಿಸಿದೆವು. ಎಲ್ಲಕ್ಕಿಂತಲೂ ಮಿಗಿಲಾಗಿ ನಮ್ಮ ರೈತನ ಜೀವನಯಾತ್ರೆ ಸುಗಮವಾಗಿ ನಡೆಯಬೇಕಾದರೆ ಅವನ ಶರೀರದಲ್ಲಿ ಸರಿಯಾದ ಬಲವಿರಬೇಕು. ಒಂದು ಜನಾಂಗದ ಶಕ್ತಿಗೆ ಅವರ ಕಾಯಶಕ್ತಿಯೇ ತಳಹದಿಯಾಗಿರುತ್ತದೆ. ನಮ್ಮ ದೇಶದ ಜನಗಳ ಬಡತನವು ಎಂತಹ ಭೀಕರ ದೃಶ್ಯವೆಂಬುದನ್ನು ಹಿಂದೆಯೇ ನೋಡಿದೆವು. ಈ ಬಡತನಕ್ಕೆ ಪ್ರಬಲವಾದ ಕಾರಣ ಅನೇಕ ಜನಗಳು ಒಂದು ಹೊತ್ತು ಊಟಕ್ಕೆ ಕೂಡ ಮಾರ್ಗವಿಲ್ಲದೆ ನರಳುತ್ತಿರುವರೆಂದು ಧಾರಾಳವಾಗಿ ಹೇಳಬಹುದು. "ಆರೋಗ್ಯವೇ ಭಾಗ್ಯ" ಎಂಬುದು ಬಹು ದೊಡ್ಡ ಮಾತು, ಐಶ್ವರ್ಯಕ್ಕಿಂತಲೂ ದೇಹಾರೋಗ್ಯವು ಉತ್ತಮವಾದ ಸಂಪತ್ತು. ಎಷ್ಟೇ ಐಶ್ವರ್ಯವಿದ್ದರೂ ಶರೀರದಲ್ಲಿ ನೆಮ್ಮದಿಯಿಲ್ಲದ ಜನಗಳಿಗೆ ಸುಖವಿಲ್ಲ. ವಿಶೇಷವಾಗಿ ನಮ್ಮ ಜನಗಳು ಬಡತನದಿಂದ ಹೊಟ್ಟೆಗಿಲ್ಲದೆ ಅನೇಕ ರೋಗರುಜಿನಗಳಿಂದ ನರಳುತ್ತಿರುತ್ತಾರೆ.

ಇಂಡಿಯಾ ದೇಶದ ವ್ಯವಸಾಯ ಸಮಿತಿಯವರು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೂ ಜನಗಳ ಆರೋಗ್ಯಕ್ಕೂ ಬಹು ಸಮೀಪವಾದ ಸಂಬಂಧವಿರುವುದೆಂದು ಒತ್ತಿ ಹೇಳಿರುವರು. ಬಹುಕಾಲದಿಂದಲೂ ನಮ್ಮ ಜನಗಳು ಲೋಕದ ಸುಖಕ್ಕೆ ಗಮನಕೊಡುತ್ತಿರಲಿಲ್ಲವೆಂತಲೂ, ಯಾವಾಗಲೂ ಪರಲೋಕ ಸಂಬಂಧವಾದ ವಿಷಯಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರೆಂದೂ ಹೇಳುವುದು ರೂಢಿಯಾಗಿದೆ. ಈ ಪ್ರಪಂಚವು ನಶ್ವರವೆಂದೂ ಎಲ್ಲವೂ ಮಾಯೆಯೆಂದೂ ಹೇಳುವ ಮಾತುಗಳನ್ನು ಈಗಲೂ ಕೇಳಬಹುದಾಗಿದೆ. ಆದರೆ ನಮ್ಮ ಇತಿಹಾಸವನ್ನೂ

ವೇದಶಾಸ್ತ್ರಗಳನ್ನೂ ವಿಮರ್ಶಿಸಿ ನೋಡಿದರೆ ನಮ್ಮ ಹಿಂದಿನವರು ತಮ್ಮ ದೇಹಾರೋಗ್ಯಕ್ಕೂ ಶಕ್ತಿಸಾಮರ್ಥ್ಯಗಳಿಗೂ ವಿಶೇಷ ಗಮನಕೊಡುತ್ತಿದ್ದರೆಂದೂ, ಅವರು ಈ ವಿಷಯದಲ್ಲಿ ಪುರಾತನರಾದ ಗ್ರೀಕ್ ಮತ್ತು ರೋಮನ್ ಜನಗಳಿಗೆ ಕಡೆಯಾಗಿರಲಿಲ್ಲವೆಂದೂ ಸ್ಪಷ್ಟವಾಗುವುದು. ಇದಕ್ಕೆ ನಮ್ಮಲ್ಲಿರುವ ಮಂತ್ರಗಳೇ ನಿದರ್ಶನಗಳಾಗಿವೆ. ಅಭಿಮನ್ಯು, ಲವಕುಶ ಮುಂತಾದ ವೀರಯೋಧರು ನಮ್ಮ ದೇಶದಲ್ಲಿದ್ದರು. ಇದರಿಂದ ನಮ್ಮ ಪುರಾತನರು ಎಷ್ಟರ ಮಟ್ಟಿಗೆ ದೃಢಕಾಯರಾಗಿ, ಆಶಾವಾದಿಗಳಾಗಿ (Optimistic) ಮೃತ್ಯುವನ್ನೂ ಎದುರಿಸಲು ಹಿಂಜರಿಯುತ್ತಿರಲಿಲ್ಲವೆಂಬುದೂ ಸ್ಪಷ್ಟವಾಗುವುದು; ಅಲ್ಲದೆ ಮನುಷ್ಯನಿಗೆ ಬರಬಹುದಾದ ಅನೇಕ ವ್ಯಾಧಿಗಳನ್ನು ವಾಸಿಮಾಡುವ ವೈದ್ಯಶಾಸ್ತ್ರದಲ್ಲಿಯೂ ನಮ್ಮವರು ಇತರ ದೇಶದವರಿಗಿಂತ ನಿಪುಣರಾಗಿದ್ದರು. ಪ್ರಸಿದ್ಧರಾದ ಧನ್ವಂತರಿ, ಚರಕ, ಸುಶ್ರುತ ಮುಂತಾದ ಮಹನೀಯರು ತಮ್ಮ ಅಮೋಘವಾದ ಆಯುರ್ವೇದ ವಿದ್ಯೆಯಿಂದ ಪ್ರಪಂಚವನ್ನೇ ಬೆರಗುಗೊಳಿಸಿದರು. ಆದರೆ ಇಂದಿನ ನಮ್ಮ ದೇಶದ ಜನಗಳ ಆರೋಗ್ಯಸ್ಥಿತಿಯೂ, ಆಯುಃಪರಿಮಿತಿಯೂ ತುಂಬಾ ಚಿಂತೆಗೆ ಕಾರಣವಾಗಿದೆ. ನಮ್ಮ ದೇಶದಲ್ಲಿ ಸರಾಸರಿ ಆಯುಃಪ್ರಮಾಣವು ೨೩ ವರ್ಷಗಳೆಂದರೆ ಯಾರ ಮನಸ್ಸಾದರೂ ವ್ಯಥೆಯಿಂದ ಕುಗ್ಗುವುದು. ನಮ್ಮ ದೇಶದ ಹುಟ್ಟು ಸಾವುಗಳನ್ನು ಕೆಲವು ಇತರ ದೇಶಗಳೊಂದಿಗೆ ಹೋಲಿಸಿದರೆ ನಮ್ಮ ವಿಷಾದಕರವಾದ ಸ್ಥಿತಿಯು ಗೋಚರವಾಗುವುದು. ಪ್ರತಿ ಒಂದು ಸಾವಿರ ಜನಕ್ಕೆ ಒಂದು ವರ್ಷದಲ್ಲಿ ಇಂಡಿಯಾ ದೇಶದಲ್ಲಿ ೨೪.೩, ಜಪಾನ್ ೧೯.೩, ಫ್ರಾನ್ಸ್ ೧೬.೮, ಇಂಗ್ಲೆಂಡ್ ೧೨.೩, ಜರ್ಮನಿ

೧೧.೮, ಆಸ್ಟ್ರೇಲಿಯಾ ೯.೩, ಜನಗಳು ಸಾಯುವರು. ಅದೇ ರೀತಿ ಪ್ರತಿ ಒಂದು ಸಾವಿರಕ್ಕೆ ಇಂಡಿಯಾ ೩೩.೩, ಆಸ್ಟ್ರೇಲಿಯಾ ೨೧.೦, ಜರ್ಮನಿ ೧೮.೪, ಫ್ರಾನ್ಸ್ ೧೮.೨, ಇಂಗ್ಲೆಂಡ್ ೧೭.೨, ಜನಗಳು ಹುಟ್ಟುವರು. ಇದರಿಂದ ಜನನ ಮರಣಗಳೆರಡರಲ್ಲಿಯೂ ನಮ್ಮ ದೇಶಕ್ಕೆ ಅಗ್ರಸ್ಥಾನವು ದೊರೆತಿರುವುದೆಂದರೆ ಅತಿಶಯೋಕ್ತಿಯಲ್ಲ.

ಹೀಗೆ ಹುಟ್ಟು ಸಾವುಗಳಲ್ಲಿ ಹಿರಿಮೆಯನ್ನು ಪಡೆದಿದ್ದರೂ ೧೯೩೧ರಿಂದ ೧೯೪೧ರ ಒಳಗೆ (೧೦ ವರ್ಷಗಳಲ್ಲಿ) ನಮ್ಮ ದೇಶದಲ್ಲಿ ೫೦೦ ಲಕ್ಷ ಪ್ರಜೆಗಳು ಹೆಚ್ಚಾಗಿದ್ದರೆಂದು ತಿಳಿದರೆ, ಮುಂದೆ ನಮ್ಮ ದೇಶದ ಆರ್ಥಿಕ ಭವಿಷ್ಯದ ವಿಚಾರದಲ್ಲಿ ಭಯವು ತಲೆದೋರುವುದು. "ಜಾತಸ್ಯ ಮರಣಂ ಧ್ರುವಂ" ಎಂಬಂತೆ ಹುಟ್ಟಿದಮೇಲೆ ಸಾವೂ ನಿಶ್ಚಯ. ಸ್ವಾಭಾವಿಕ ಕಾರಣದಿಂದಾಗುವ ಸಾವನ್ನು ಯಾರೂ ತಪ್ಪಿಸಲಾರರು. ಆದರೆ ಕೆಟ್ಟ ಪದ್ಧತಿಗಳಿಂದಲೂ ಮತ್ತು ನಿವಾರಣೀಯವಾದ ರೋಗಗಳಿಂದಲೂ ಜನಗಳು ಹೆಚ್ಚಾಗಿ ಸಾಯುವುದರಿಂದ ದೇಶಕ್ಕೆ ತುಂಬಾ ಹಾನಿಯುಂಟು. ೧೯೨೨ರಲ್ಲಿ ಇಂಡಿಯಾ ದೇಶದಲ್ಲಿ ೧೫,೨೭,೪೩೨ ಮಕ್ಕಳು ಒಂದು ವರ್ಷದೊಳಗಾಗಿ ಮೃತಪಟ್ಟರೆಂದರೆ ಯಾರಿಗಾದರೂ ಸಂಕಟವಾಗುವುದು. ಒಟ್ಟಿನಲ್ಲಿ ೧೯೨೨ರಲ್ಲಿ ಮರಣ ಹೊಂದಿದವರಲ್ಲಿ ಶೇಕಡಾ ೪೮ರಷ್ಟು ಕೇವಲ ಹತ್ತು ವರ್ಷ ವಯಸ್ಸಿನೊಳಗಿನವರು. ಇದಕ್ಕೆ ಅನೇಕ ಕಾರಣಗಳುಂಟು. ಬಡತನದ ಫಲವಾಗಿ ಜನಗಳು ಸಂಕಟಕ್ಕೆ ಗುರಿಯಾಗಿ ಹೊಟ್ಟೆಗಿಲ್ಲದೆ ದರಿದ್ರನಾರಾಯಣರಂತೆ ತೊಳಲುತ್ತಿರುವರು. ಮಕ್ಕಳ ಪೋಷಣೆಯಲ್ಲಿ ಜನಗಳಿಗಿರುವ ಅಜ್ಞಾನ, ಗಾಳಿ, ಬೆಳಕು— ಇವುಗಳಿಗೆ ಅವಕಾಶವಿಲ್ಲದ ಹೊಲಸಾದ ವಾಸಸ್ಥಳ, ಅಲ್ಲದೆ

ನಮ್ಮ ಸಮಾಜದಲ್ಲಿರುವ ಬಾಲ್ಯವಿವಾಹ ಮುಂತಾದ ಪದ್ಧತಿಗಳು ಮಕ್ಕಳ ಮರಣದಷ್ಟೇ ಘೋರವಾದ ಇನ್ನೊಂದು ವಿಷಯು ಹೆರಿಗೆಯಿಂದ ಆಗುವ ತಾಯಂದಿರ ಮರಣ. ನಮ್ಮ ದೇಶದಲ್ಲಿ ಬಾಲ್ಯವಿವಾಹದಿಂದ ಕೇವಲ ಎಳೆಯ ವಯಸ್ಸಿನಲ್ಲಿಯೇ ಮಕ್ಕಳನ್ನು ಹೆರುವುದು, ಬಾಣಂತಿಯರ ಪೋಷಣೆಗೆ ಸರಿಯಾದ ಗಮನಕೊಡದಿರುವುದು, ಅಲ್ಲದೆ ಹೆರಿಗೆಯ ಕಾಲದಲ್ಲಿ ಆವಶ್ಯಕವಾದ ವೈದ್ಯಸಹಾಯ ದೊರೆಯದೆ, ತಿಳಿವಳಿಕೆಯಿಲ್ಲದ ಸೂಲಗಿತ್ತಿಯರಿಗೆ ಈ ಕೆಲಸವನ್ನು ವಹಿಸಿರುವುದು— ಈ ಮುಂತಾದ ಕಾರಣಗಳಿಂದ ಸರ್ ಜಾನ್ ಮಾಗ ಎಂಬ ವಿದ್ವಾಂಸರು ಹೇಳಿರುವಂತೆ ನಮ್ಮ ದೇಶದಲ್ಲಿ ಸರಾಸರಿ ಚಿಕ್ಕ ವಯಸ್ಸಿನ ತಾಯಂದಿರಲ್ಲಿ ೧,೦೦೦ಕ್ಕೆ ೧೦೦ ಜನ ಹೆರಿಗೆಯಲ್ಲೇ ಸಾಯುವರು. ಅಲ್ಲದೆ ನಮ್ಮ ದೇಶದಲ್ಲಿ ಒಟ್ಟು ಸುಮಾರು, ಎರಡು ಲಕ್ಷ ತಾಯಂದಿರು ವರ್ಷ ವರ್ಷವೂ ಸಾಯುತ್ತಿರುವರು. ಇವುಗಳ ಜೊತೆಗೆ ಅನೇಕ ರೋಗಗಳಿಂದ ನಮ್ಮ ಜನಗಳು ವಿಶೇಷವಾಗಿ ಸಾಯುತ್ತಿರುವರು. ಈ ರೋಗ ರುಜಿನಗಳಿಂದ ದೇಶಕ್ಕೆ ಅಪಾರವಾದ ನಷ್ಟವಾಗುವುದು. ಜನಗಳು ಸಾಯುವುದು ದೊಡ್ಡ ನಷ್ಟ. ಇದಕ್ಕಿಂತ ಹೆಚ್ಚಾಗಿ ರೋಗದಿಂದ ನರಳುತ್ತಿರುವ ಜನಗಳು ಎಂದಿಗೂ ಉತ್ಸಾಹಶಾಲಿಗಳಾಗಿರಲು ಸಾಧ್ಯವಿಲ್ಲ. ನಮ್ಮ ಜನಗಳು ಮಲೇರಿಯಾ, ಕೊಕ್ಕೆ ಹುಳದ ರೋಗ ಮುಂತಾದ ರೋಗಗಳಿಂದ ನರಳುತ್ತಾ ಕೇವಲ ಜೀವಚ್ಛವಗಳಂತೆ ದಿನಗಳನ್ನು ಕಳೆಯುತ್ತಿರುವರು. ಈ ರೋಗಗಳಿಗೆ ಹಲವು ಕಾರಣಗಳಿವೆ. ಮೊದಲನೆಯದು ವಾಯುಗುಣ. ನಮ್ಮ ದೇಶವು ಉಷ್ಣವಲಯದಲ್ಲಿರುವುದರಿಂದ ಸ್ವಾಭಾವಿಕವಾಗಿ ಜನಗಳ ಬಲವನ್ನು ಬಹುಮಟ್ಟಿಗೆ

ಕುಗ್ಗಿಸುವುದು. ಇದರಿಂದ ಶೀತದೇಶಗಳಲ್ಲಿರುವ ಜನಗಳಂತೆ ನಮ್ಮವರು ಕಷ್ಟಪಟ್ಟು ದುಡಿಯಲಾರರು. ಅಲ್ಲದೆ ನಮ್ಮ ರೈತರಲ್ಲಿ ಬಹು ಮಂದಿಗೆ ದೇಹದ ಪೋಷಣೆಗೂ, ಶಕ್ತಿಗೂ ಆವಶ್ಯಕವಾಗಿ ಬೇಕಾಗುವಷ್ಟು ಆಹಾರವು ದೊರೆಯುತ್ತಿಲ್ಲ. ಜನರ ಆರೋಗ್ಯಕ್ಕೂ ಅವರು ತೆಗೆದುಕೊಳ್ಳುತ್ತಿರುವ ಆಹಾರಕ್ಕೂ ನಿಕಟವಾದಸಂಬಧವಿದೆಯೆಂದು ವೈಜ್ಞಾನಿಕರು ಅನೇಕ ಪ್ರಯೋಗಗಳಿಂದ ನಿರ್ಧರಿಸಿರುತ್ತಾರೆ. "ಲೀಗ್ ಆಫ್ ನೇಷನ್ಸ್" ಆರೋಗ್ಯ ಶಾಖೆಯವರು ಈ ವಿಷಯದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿರುತ್ತಾರೆ. ಅಲ್ಲದೆ ನಮ್ಮ ದೇಶದಲ್ಲಿಯೇ ಸರ್ ರಾಬರ್ಟ್ ಮೆಕ್ಯಾರಿಸನ್ ಮತ್ತು ಡಾಕ್ಟರ್ ಆಕ್ರಾಯಿಡ್ ಮುಂತಾದ ಮಹನೀಯರು ಅನೇಕ ಪ್ರಯೋಗಗಳನ್ನು ನಡೆಸಿ ಜನಗಳ ರೋಗರುಜಿನಗಳಿಗೆ ಸರಿಯಾದ ಆಹಾರದ ಅಭಾವವೇ ಕಾರಣವೆಂದು ಸಾರಿ ಹೇಳಿರುತ್ತಾರೆ. ಮೊದಲನೆಯದಾಗಿ, ನಮ್ಮ ದೇಶದಲ್ಲಿ ಜನಸಂಖ್ಯೆಯು ವಿಶೇಷವಾಗಿ ಹೆಚ್ಚಿ, ಸಂಪಾದನೆಯು ಹೆಚ್ಚದಿರುವುದರಿಂದ ಅನೇಕರು ಉಪವಾಸಮಾಡಬೇಕಾಗುವುದು. ಇದರ ಜೊತೆಗೆ ಜನಗಳು ತೆಗೆದುಕೊಳ್ಳುತ್ತಿರುವ ಆಹಾರದಲ್ಲಿಯೂ ದೇಹಪೋಷಣೆಗೆ ಆವಶ್ಯಕವಾದ ಪದಾರ್ಥಗಳು ಸರಿಯಾಗಿ ಸಿಕ್ಕುತ್ತಿಲ್ಲ. ಹಾಲು, ಮೊಸರು, ಬೆಣ್ಣೆ, ತರಕಾರಿ, ಹಣ್ಣುಗಳು, ಮಾಂಸ, ಮೊಟ್ಟೆ—ಇವುಗಳು ದೇಹದ ಬೆಳವಣಿಗೆಗೆ ಆವಶ್ಯಕವಾದ ಪದಾರ್ಥಗಳನ್ನು ಹೊಂದಿವೆ. ಆದರೆ ನಮ್ಮ ದೇಶದಲ್ಲಿ ಅನೇಕ ಜನಗಳಿಗೆ ಇವುಗಳು ದೊರೆಯುತ್ತಿಲ್ಲವೆಂಬುದನ್ನು ಎಲ್ಲರೂ ಬಲ್ಲರು. "ಹೊಟ್ಟೆ ತುಂಬಾ ಹಿಟ್ಟು, ಬಾಯಿ ತುಂಬಾ ಅನ್ನ" ಎನ್ನುವಂತೆ ಬರಿಹಿಟ್ಟು ಮತ್ತು ಸ್ವಲ್ಪ ಖಾರ ಇಷ್ಟು ಮಾತ್ರ ನಮ್ಮ ದೇಶದ (ಮೈಸೂರಿನ) ಜನಗಳ

ಆಹಾರವಾಗಿರುತ್ತದೆ. ಅನೇಕ ಗ್ರಾಮಗಳಲ್ಲಿ ಸಮಯದಲ್ಲಿ ಸ್ವಲ್ಪ ಹಾಲು ಕೂಡ ದೊರೆಯುವುದು ಕಷ್ಟವಾಗುತ್ತದೆ. ಜೊತೆಗೆ ಸೊಪ್ಪು, ಕಾಯಿಪಲ್ಯಗಳ ವಿಷಯವಂತೂ ಹೇಳಬೇಕಾಗಿಲ್ಲ. ಜನಗಳು ಸೋಮಾರಿಗಳಾಗಿ ಅನುಕೂಲವಿದ್ದರೂ ಕೂಡ ಕಾಯಿ ಪಲ್ಯಗಳನ್ನು ಬೆಳೆಯದೆ ಸಮಯಬಿದ್ದಾಗ ಪೇಟೆಯಿಂದಲೇ ಅವುಗಳನ್ನು ತರುತ್ತಿರುವುದು ಶೋಚನೀಯವಾದ ಸಂಗತಿ. ಹಾಲು, ಮೊಸರು, ತರಕಾರಿಗಳ ಅಭಾವದಿಂದ ದೇಹಪೋಷ ಣೆಗೆ ಆವಶ್ಯಕವಾದ ಸತ್ವ (Vitamins) ದೊರೆಯದೆ ಜನಗಳು ನಿರ್ಬಲರಾಗಿ ರೋಗಗಳಿಗೆ ತುತ್ತಾಗುತ್ತಿರುವರು. ಅಲ್ಲದೆ ಪರ್ದಾ ಪದ್ಧತಿ, ಅಸ್ಪೃಶ್ಯತೆ—ಇವುಗಳಿಂದಲೂ ಅನೇಕ ಜನಗಳಿಗೆ ಸರಿಯಾದ ನೀರು, ಗಾಳಿ, ಬೆಳಕುಗಳು ದೊರೆಯದೆ ನಿರ್ಬಲರೂ ವ್ಯಾಧಿಗ್ರಸ್ತರೂ ಆಗಿ ಸಂಕಟಪಡುತ್ತಿರುತ್ತಾರೆ. ಅಲ್ಲದೆ ಆರೋಗ್ಯಕ್ಕೆ ತೌರುಮನೆಗಳಾಗಿದ್ದ ನಮ್ಮ ಹಳ್ಳಿಗಳು ಇಂದು ಮಲಿನಕೂಪಗಳಾಗಿವೆ. ೧೯೧೮ರಲ್ಲಿ ನಮ್ಮ ದೇಶ ದಲ್ಲೆಲ್ಲಾ ಹಾವಳಿ ನಡೆಸಿದ ಇನ್‌ಫ್ಲೂಯೆಂಜಾ ಖಾಯಿಲೆ ಯಿಂದ ಸತ್ತವರಲ್ಲಿ ಶೇಕಡಾ ೫೦ಕ್ಕಿಂತ ಹೆಚ್ಚಾಗಿ ನಮ್ಮ ರೈತರು. ಹಳ್ಳಿಗಳಲ್ಲಿ ಎಲ್ಲೆಲ್ಲಿಯೂ ತಿಪ್ಪೆಗುಂಡಿಗಳು, ನಾರು ತ್ತಿರುವ ಚರಂಡಿಗಳು, ಬಚ್ಚಲುಗಳು, ಕಸದ ಗುಡ್ಡೆಗಳು ಮತ್ತು ಹೇಸಿಗೆಯ ದುರ್ಗಂಧದಿಂದ ನಮ್ಮ ಗ್ರಾಮಗಳು ನರಕ ಗಳಾಗಿವೆ. ಇದರಿಂದ ನಮ್ಮ ಜನಗಳು ಅನೇಕ ಪ್ರಬಲವಾದ ರೋಗಗಳಿಗೆ ತುತ್ತಾಗುತ್ತಿರುವರು. ಇವುಗಳಲ್ಲಿ ಮುಖ್ಯ ವಾದುದು ಕೊಕ್ಕೆಹುಳದ ರೋಗ. ಈ ರೋಗದ ಕ್ರಿಮಿಗಳು ರೋಗಗ್ರಸ್ತರ ಹೇಸಿಗೆಯಲ್ಲಿ ಮೊಟ್ಟೆಹಾಕಿ ಕಾಯುತ್ತಿರುವುವು. ನಮ್ಮ ಜನಗಳಲ್ಲಿ ಅನೇಕರು ಬರಿಯ ಕಾಲಿನಲ್ಲಿ ತಿರುಗುತ್ತಿರು

ವರು. ಇದರಿಂದ ಅಂಗಾಲುಗಳ ಮೂಲಕ ಈ ಕ್ರಿಮಿಗಳು ಜನಗಳ ಶರೀರವನ್ನು ಹೊಕ್ಕು ಅವರನ್ನು ವ್ಯಾಧಿಗ್ರಸ್ತರನ್ನಾಗಿ ಮಾಡುವುವು. ಇದರ ಜೊತೆಗೆ ಕಾಲರಾ ಜಾಡ್ಯವು ನಮ್ಮ ದೇಶದಲ್ಲಿ ವಿಶೇಷವಾದ ಹಾವಳಿಮಾಡುತ್ತಿರುವುದು. ಇದಕ್ಕೆ ಪ್ರಬಲವಾದ ಕಾರಣ ಕೊಳಕು ನೀರು. ನಮ್ಮ ಗ್ರಾಮಗಳಲ್ಲಿ ಕೆರೆಯೋ, ಕಟ್ಟೆಯೋ, ತೊರೆಯೋ ಇದ್ದರೆ ಅದರ ನೀರನ್ನೇ ಎಲ್ಲಾ ಕೆಲಸಗಳಿಗೂ ಉಪಯೋಗಿಸುವರು. ದನಗಳನ್ನು ತೊಳೆಯುವುದು, ಬಟ್ಟೆಗಳನ್ನೊಗೆಯುವುದು, ಸ್ನಾನಮಾಡುವುದು, ಮಲವಿಸರ್ಜನೆ ಮಾಡುವುದು, ಮಡಿನೀರು ತೆಗೆದುಕೊಂಡು ಹೋಗುವುದು–ಎಲ್ಲಾ ಒಂದೇ ಕಡೆ ನಡೆಯುಬೇಕಾಗಿರುವುದು. ಅದೇ ನೀರನ್ನೇ ಕುಡಿಯಲೂ ಉಪಯೋಗಿಸುವರು. ಮಲೇರಿಯಾ ವ್ಯಾಧಿಯು ನಮ್ಮ ದೇಶದಲ್ಲಿರುವ ಒಂದು ಭಯಂಕರವಾದ ರೋಗ. ಈ ವ್ಯಾಧಿಯು ಹರಡುವಿಕೆಗೆ ಹಳ್ಳಿಗಳ ಕೊಳಕೇ ಮುಖ್ಯ ಕಾರಣ. ಹಳ್ಳಿಗಳಲ್ಲಿ ಬೀದಿಗಳೆಲ್ಲಾ ಚರಂಡಿಗಳೇ. ಇದರಿಂದ ಅಲ್ಲಲ್ಲೇ ಕೊಳಕುನೀರು ನಿಂತು ಸೊಳ್ಳೆಗಳು ಜಾಸ್ತಿಯಾಗಿ, ಈ ವ್ಯಾಧಿಯು ವಿಶೇಷವಾಗಿ ಹರಡುತ್ತಿರುವುದು. ಇವುಗಳಲ್ಲದೆ ಅನೇಕ ವಿಧವಾದ ಶ್ವಾಸಕೋಶಕ್ಕೆ ಸಂಬಂಧಪಟ್ಟ ರೋಗಗಳೂ ನಮ್ಮ ರೈತರನ್ನು ಕೋಟಲೆಗೊಳಿಸುತ್ತಿವೆ. ಇವುಗಳಲ್ಲಿ ಬಹು ಮುಖ್ಯವಾದುವು ಇನ್‌ಫ್ಲೂಯೆಂಜಾ ಮತ್ತು ಕ್ಷಯ. ವರ್ಷವರ್ಷವೂ ಅನೇಕ ಹಳ್ಳಿಗಳಲ್ಲಿ ತಪ್ಪದೆ ಪ್ಲೇಗ್ ವ್ಯಾಧಿಯು ಬರುತ್ತಿರುವುದು ಸಾಮಾನ್ಯವಾದ ವಿಷಯ. ಈ ರೋಗಗಳಿಗೆಲ್ಲಾ ಮುಖ್ಯವಾದ ಕಾರಣ ಹಳ್ಳಿಗಳಲ್ಲಿರುವ ಹೊಲಸೇ ಎಂದು ಧಾರಾಳವಾಗಿ ಹೇಳಬಹುದು. ನಮ್ಮ ಜನಗಳು ಈ ರೋಗಗಳಿಂದ ನರಳುತ್ತಿದ್ದರೂ ಅಜ್ಞಾನದಿಂದ

ಅವುಗಳ ಕಾರಣವನ್ನು ತಿಳಿಯದೆ ಇದೆಲ್ಲಾ ದೇವರ ಲೀಲೆಯೆಂದೂ, ತಮ್ಮ ಹಣೆಯಬರಹವೆಂದೂ ಮೂಢನಂಬಿಕೆಯನ್ನಿಟ್ಟುಕೊಂಡು ತೊಂದರೆಪಡುತ್ತಿರುತ್ತಾರೆ. ನಮ್ಮ ಹಳ್ಳಿಗಳನ್ನು ಅಭಿವೃದ್ಧಿಪಡಿಸಬೇಕಾದರೆ ಮೊದಲು ಜ್ಞಾನವು ಹರಡಬೇಕು. ಹಳ್ಳಿಗಳಲ್ಲಿ ಅಲ್ಲಲ್ಲಿ ನೀರು ನಿಂತು ಕೊಳಕಾಗದಂತೆ ಜಲ್ಲಿ ಚರಂಡಿಗಳನ್ನೋ ಅಥವಾ ನೀರು ಇಂಗುವ (Soakpits) ಗುಣಿಗಳನ್ನೋ ತಯಾರಿಸಬೇಕು. ಅಲ್ಲಲ್ಲೇ ನೀರು ನಿಲ್ಲುವ ಸ್ಥಳಗಳಲ್ಲಿ ಹೂವಿನ ಅಥವಾ ಹಣ್ಣಿನ ಗಿಡಗಳನ್ನು ಹಾಕುವುದರಿಂದ ಊರಿನ ಆರೋಗ್ಯವನ್ನೂ, ಸೊಬಗನ್ನೂ ಉತ್ತಮಪಡಿಸಬಹುದು. ಅಲ್ಲದೆ ಗೊಬ್ಬರವನ್ನು ಬಯಲಿನಲ್ಲಿ ಹಾಕುವುದನ್ನು ತಪ್ಪಿಸಿ ಹಿಂದೆ ತಿಳಿಸಿರುವಂತೆ ಗೊಬ್ಬರದ ಗುಂಡಿಗಳಲ್ಲಿ ಹಾಕಿ ಮಣ್ಣು ಮುಚ್ಚುವಂತೆ ಜನಗಳಲ್ಲಿ ತಿಳವಳಿಕೆ ಹರಡಬೇಕು. ಊರಿನ ಬೀದಿಗಳಲ್ಲೆಲ್ಲಾ ಹೇಸಿಗೆ ಮಾಡುವುದನ್ನು ತಪ್ಪಿಸಿ ಕಕ್ಕಸದ ಉಪಯೋಗವನ್ನು ಜನಗಳಲ್ಲಿ ಪ್ರಚಾರಗೊಳಿಸಬೇಕು. ಜನಗಳನ್ನು ಕೋಟಲೆಗೊಳಿಸುತ್ತಿರುವ ಅನೇಕ ವ್ಯಾಧಿಗಳಿಗೆ ವೈಜ್ಞಾನಿಕರು ಕಂಡುಹಿಡಿದಿರುವ 'ಇನಾಕ್ಯುಲೇಷನ್' ಮತ್ತು 'ವ್ಯಾಕ್ಸಿನೇಷನ್' ಮುಂತಾದ ಪ್ರತಿಬಂಧಕ ಕ್ರಮಗಳು ಜನಗಳಲ್ಲಿ ಪ್ರಚುರವಾಗಬೇಕು. ಮಲೇರಿಯಾ ನಿವಾರಣೆಗಾಗಿ ಹಳ್ಳಿಗಳಲ್ಲಿ 'ಕ್ವಿನೀನ್' ಉಪಯೋಗವು ಹೆಚ್ಚಾಗುವಂತೆ ಮಾಡಬೇಕು. ಜನಗಳು ಆಹಾರದ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ದೇಹಪೋಷಣೆಗೆ ಆವಶ್ಯಕವಾದ ಹಾಲು, ಮೊಸರು, ಸೊಪ್ಪು, ಮೊಟ್ಟೆ, ಮುಂತಾದುವುಗಳನ್ನು ಹೆಚ್ಚಾಗಿ ಉಪಯೋಗಿಸುವಂತೆ ಪ್ರಚಾರಕಾರ್ಯ ನಡೆಯಬೇಕು. ಇವುಗಳ ಜೊತೆಗೆ ವೈದ್ಯಸಹಾಯವು ಕೂಡ ಹಳ್ಳಿಯವರಿಗೆ

ಒದಗುವಂತಾಗಬೇಕು. ಸರ್ಕಾರದವರು ಈ ವಿಷಯದಲ್ಲಿ ವಿಶೇಷ ಪ್ರಯತ್ನಗಳನ್ನು ನಡೆಸುತ್ತಿರುವರು. ನಮ್ಮ ಮೈಸೂರಿನಲ್ಲಿ ಸರ್ಕಾರದವರು ಅನೇಕ ಮಾದರಿ ಗ್ರಾಮಗಳನ್ನು ಆರಿಸಿ ಅಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿರುವುದು ಎಲ್ಲರಿಗೂ ತಿಳಿದಿದೆ. ಜನಗಳ ಆರೋಗ್ಯಕ್ಕೆ ಮುಖ್ಯವಾದ ನೀರು ದೊರೆಯುವಂತೆ ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೆಗೆಯಿಸಲು ಐದು ವರ್ಷಗಳಲ್ಲಿ ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚುಮಾಡುವಂತೆ ತಯಾರಿಸಿರುವ ಯೋಜನೆಯು (Plan) ಉತ್ತಮವಾದುದೆಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೆ ದನಕರುಗಳ ಸ್ಥಿತಿಯನ್ನು ಉತ್ತಮಪಡಿಸಲು ವಿಶೇಷ ಪ್ರಯತ್ನಗಳನ್ನು ಕೈಕೊಂಡಿರುತ್ತಾರೆ. ಅವುಗಳಿಗೆ ಬರುವ ರೋಗಗಳನ್ನು ನಿವಾರಿಸಲು ಪಶುವೈದ್ಯ ಇಲಾಖೆಯಿಂದ ಆಧುನಿಕ ರೀತಿಯ ವೈದ್ಯಸಹಾಯವನ್ನು ಒದಗಿಸಲು ಏರ್ಪಡಿಸಿರುತ್ತಾರೆ. ದನಗಳಿಗೆ ಪ್ರಬಲ ಶತ್ರುವಾದ ದೊಡ್ಡರೋಗಕ್ಕೆ 'ಗೋಟ್ ಸೀರಂ' ಎಂಬ ಹಾಲಿನ ಉಪಯೋಗದಿಂದ ಚಿಕಿತ್ಸೆಮಾಡುತ್ತಿರುವುದು ಪ್ರಶಂಸನೀಯವಾದುದು.

ಹಳ್ಳಿಗಳಲ್ಲಿ ಹಣ್ಣಿನ, ಹೂವಿನ ಮತ್ತು ತರಕಾರಿ ಗಿಡಗಳನ್ನು ಬೆಳೆಯಲು ಉತ್ತೇಜನಕೊಡುವುದಕ್ಕೆ ಮನೆಗಳ ಹಿತ್ತಲಲ್ಲಿ (Kitchen Gardens) ಕೈದೋಟಗಳನ್ನು ಬೆಳೆಯಿಸಬೇಕೆಂದೂ, ಇದಕ್ಕಾಗಿ ತರಕಾರಿ ಬೀಜಗಳನ್ನೂ, ಹಣ್ಣಿನ ಗಿಡಗಳನ್ನೂ ರಿಯಾಯಿತಿ ಬೆಲೆಗೆ ಕೊಡುವುದಕ್ಕೂ ಏರ್ಪಾಡು ಮಾಡಿರುತ್ತಾರೆ. ಅಲ್ಲದೆ ಗ್ರಾಮಾಂತರಗಳಲ್ಲಿ ವೈದ್ಯಸಹಾಯವನ್ನೊದಗಿಸುವುದಕ್ಕೂ ವಿಶೇಷ ಪ್ರಯತ್ನಗಳು ನಡೆದಿವೆ. ಅನೇಕ ಗ್ರಾಮಗಳಲ್ಲಿ 'ಲೋಕಲ್ ಫಂಡ್' ಆಸ್ಪತ್ರೆಗಳನ್ನೂ

ಇವುಗಳ ಜೊತೆಗೆ ಆಯುರ್ವೇದ ವೈದ್ಯಶಾಲೆಗಳನ್ನೂ ಏರ್ಪಡಿಸಿರುತ್ತಾರೆ. ಅಲ್ಲದೆ ಸುಶಿಕ್ಷಿತರಾದ ವೈದ್ಯರುಗಳು ಹಳ್ಳಿಗಳಲ್ಲಿ ನೆಲಸಿ ಜನಗಳಿಗೆ ವೈದ್ಯಸಹಾಯ ನೀಡುವಂತೆ ಏರ್ಪಾಡುಗಳನ್ನು ಮಾಡಿರುತ್ತಾರೆ. ಈಗ ಮೈಸೂರು ದೇಶದಲ್ಲಿ ಪ್ರತಿ ಇಪ್ಪತ್ತು ಸಾವಿರ ಜನಕ್ಕೆ ಒಂದು ಆಸ್ಪತ್ರೆಯಂತೆ ಇದೆ ಎಂದೂ ಮತ್ತು ಇಂಡಿಯಾ ದೇಶದ ಇತರ ಎಲ್ಲಾ ಭಾಗಗಳಿಗಿಂತಲೂ ವೈದ್ಯಸಹಾಯದಲ್ಲಿ ನಮ್ಮ ದೇಶವು ಮುಂದುವರಿದಿದೆಯೆಂದೂ ಹೇಳಬಹುದು. ಅಲ್ಲದೆ ಇತ್ತೀಚೆಗೆ ನಮ್ಮ ಸಂಸ್ಥಾನದಲ್ಲಿ ಅನೇಕ ಉದಾರಿಗಳು ವೈದ್ಯಸಹಾಯಕ್ಕಾಗಿ ಧನಸಹಾಯ ಮಾಡುತ್ತಿರುವುದು ಹೆಮ್ಮೆಯ ವಿಷಯ. ಇದರ ಫಲವಾಗಿ ಅನೇಕ ಊರುಗಳಲ್ಲಿ ಹೆರಿಗೆ ಆಸ್ಪತ್ರೆಗಳೂ, ಶಿಶುಸಂರಕ್ಷಣಾ ಕೇಂದ್ರಗಳೂ ಏರ್ಪಾಡಾಗಿ ಮಕ್ಕಳಿಗೂ ಮತ್ತು ತಾಯಂದಿರಿಗೂ ತುಂಬಾ ಸಹಾಯವಾಗಿದೆ. ಅಲ್ಲದೆ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ "ಬೇಬಿ ವೀಕ್"ಗಳನ್ನು ನಡೆಸಿ ಉತ್ತಮವಾದ ಮಕ್ಕಳಿಗೆ ಬಹುಮಾನ ಹಂಚುತ್ತಿರುವುದು ಬಹಳ ಒಳ್ಳೆಯ ಪದ್ಧತಿ. 'ರೆಡ್ ಕ್ರಾಸ್' ಸಂಸ್ಥೆಯವರು ಅನೇಕ ಪ್ರಬಲವಾದ ರೋಗಗಳ ನಿವಾರಣೆಗಾಗಿ ಅಮೋಘವಾದ ಸೇವೆ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಅಲ್ಲದೆ ಹಳ್ಳಿಗಳ ಆರೋಗ್ಯವನ್ನು ಉತ್ತಮಗೊಳಿಸುವುದರಲ್ಲಿ ಒಂದು ವಿಶೇಷವಾದ ಪ್ರಯತ್ನವನ್ನು ಸರ್ಕಾರದವರೇ ಕೈಕೊಂಡಿರುತ್ತಾರೆ. ಕೆಲವು ಸ್ಥಳಗಳಲ್ಲಿ ಆರೋಗ್ಯಕೇಂದ್ರ (Health Centres) ಗಳನ್ನು ಸ್ಥಾಪಿಸಿ, ಹಳ್ಳಿಗಳಲ್ಲಿ ದೇವಿ ಹಾಕುವುದು, ಹೆರಿಗೆ ಕಾಲದಲ್ಲಿ ಸೂಲಗಿತ್ತಿಯರ ಸಹಾಯ ಒದಗಿಸುವುದು, ಬಾವಿಗಳನ್ನು ಶುಚಿಯಾಗಿಡುವುದು, ಆರೋಗ್ಯವಿಚಾರದಲ್ಲಿ ಸಲಹೆಗಳನ್ನು

ಕೊಡುವುದು, ಮುಂತಾದ ಕೆಲಸಗಳಿಂದ ಗ್ರಾಮಗಳ ಏಳಿಗೆಗೆ ವಿಶೇಷ ಸಹಾಯ ಮಾಡುತ್ತಿರುತ್ತಾರೆ. ಈ ಸಂದರ್ಭದಲ್ಲಿ ನಮ್ಮ ಹಳ್ಳಿಗಳಲ್ಲಿ ಇನ್ನೂ ವಿಶೇಷವಾದ ಕೆಲಸ ನಡೆಯಬೇಕಾಗಿರುತ್ತದೆ.

ಇವಕ್ಕೆ ಜನಗಳಲ್ಲಿ ಮೂಢನಂಬಿಕೆಯು ತೊಲಗಿ, ತಿಳುವಳಿಕೆಯು ಹೆಚ್ಚಾಗಿ ಅವರು ಸರ್ಕಾರದವರು ನಡೆಸುತ್ತಿರುವ ಪ್ರಯತ್ನದಲ್ಲಿ ನೆರವಾಗುವಂತಾಗಬೇಕು. ಇದಕ್ಕೆ ಮುಖ್ಯವಾಗಿ ಹಳ್ಳಿಗಳಲ್ಲಿ ವಿದ್ಯಾಪ್ರಚಾರವಾಗಬೇಕು. ನಮ್ಮ ದೇಶದ ಹಳ್ಳಿಗಳಲ್ಲಿ ಶೇಕಡಾ ೧೧ರಷ್ಟು ಮಾತ್ರ ಓದುಬರಹ ಬಲ್ಲವರಾಗಿರುತ್ತಾರೆ. ಉಳಿದ ಜನರು ನಿರಕ್ಷರಕುಕ್ಷಿಗಳಾಗಿ ಅಜ್ಞಾನದ ಕತ್ತಲಲ್ಲಿ ಮುಳುಗಿರುತ್ತಾರೆ. ಜನಗಳಲ್ಲಿ ಜ್ಞಾನಪ್ರಚಾರ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರು ವಿಶೇಷ ಪ್ರಯತ್ನ ನಡೆಸುತ್ತಿದ್ದಾರೆ. ಆದರೂ ಅವುಗಳಿಂದ ಹೆಚ್ಚು ಪ್ರಯೋಜನವಾಗಿಲ್ಲ. ಹಿಂದೆ ಗ್ರಾಮಗಳಲ್ಲಿ ತಿಳುವಳಿಕೆಯನ್ನು ಹರಡಲು ಅನೇಕ ಸಾಧನಗಳನ್ನು ಜನರು ಇಟ್ಟುಕೊಂಡಿದ್ದರು. ಹರಿಕಥೆ, ಪುರಾಣ, ಕೀರ್ತನೆಗಳು, ಲಾವಣಿಗಳು, ವಚನಗಳು ಮತ್ತು ಯಕ್ಷಗಾನ ಮುಂತಾದುವುಗಳು ಓದುಬರಹ ಬಾರದ ಸಾಮಾನ್ಯಜನರಲ್ಲಿಯೂ ತಿಳುವಳಿಕೆಯನ್ನು ಹರಡುವ ಸಾಧನಗಳಾಗಿದ್ದುವು. ಅಲ್ಲದೆ ಗ್ರಾಮಾಂತರಗಳಲ್ಲಿ ಕೂಲಿಮಠಗಳೆಂಬ ಪಾಠಶಾಲೆಗಳಲ್ಲಿ ವ್ಯವಹಾರಕ್ಕೆ ಬೇಕಾದ ಲೆಕ್ಕ ಮತ್ತು ಮಕ್ಕಳಿಗೆ ಜ್ಞಾನಬೋಧಕವಾಗಿರುವ ಜೈಮಿನಿ ಭಾರತ, ಅಮರಕೋಶ ಮುಂತಾದ ಗ್ರಂಥಗಳ ಪರಿಚಯವನ್ನು ಮಾಡಿಕೊಡುತ್ತಿದ್ದರು. ಈಗ ಆ ಸಾಧನಗಳೆಲ್ಲಾ ವಿಶೇಷವಾಗಿ ಕಡಿಮೆಯಾಗುತ್ತಿವೆ. ಆಧುನಿಕ ಕಾಲದಲ್ಲಿ ಜ್ಞಾನಪ್ರಚಾರ

ಮಾಡಲು ಅನೇಕ ಸಾಧನಗಳಿವೆ. ರೇಡಿಯೋ, ಸಿನಿಮಾ, ಮ್ಯಾಜಿಕ್ ಲ್ಯಾಂಟರ್ನ್ (Magic Lantern) ಮುಂತಾದು ವುಗಳ ಸಹಾಯದಿಂದ ಹೊಸ ವಿಷಯಗಳನ್ನು ತಿಳಿಸುವುದು ಸುಲಭ. ಆದರೆ ಹಳ್ಳಿಗಳಲ್ಲಿ ಇವು ಇನ್ನೂ ಪ್ರಚಾರಕ್ಕೆ ಬಂದಿಲ್ಲ.

ಜನಗಳಲ್ಲಿ ಅಕ್ಷರಾಭ್ಯಾಸವನ್ನು ಪ್ರಚುರಪಡಿಸಿ ವಿದ್ಯೆಯನ್ನು ಹರಡಲು ಸರ್ಕಾರದವರು ಪಾಠಶಾಲೆಗಳಿಗಾಗಿ ವಿಶೇಷ ಹಣವನ್ನು ಖರ್ಚುಮಾಡುತ್ತಿರುವರು. ಮೈಸೂರು ಸರ್ಕಾರದವರು ೧೮೬೫ರಲ್ಲಿ ೧,೧೩,೦೦೦ ರೂಪಾಯಿಗಳನ್ನೂ, ೧೮೮೧ರಲ್ಲಿ ೩,೯೧,೦೨೪ ರೂಪಾಯಿಗಳನ್ನೂ ಖರ್ಚುಮಾಡಿದರು. ೧೯೩೩ ರಲ್ಲಿ ೬೭,೧೭,೯೫೧ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿದರು. ೧೯೪೯ರಲ್ಲಿ ಪ್ರಜಾ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಸುಮಾರು ೩.೫ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುತ್ತಾರೆ. ಇದರಿಂದ ಈಚಿನ ವರ್ಷಗಳಲ್ಲಿ ಸರ್ಕಾರದವರು ವಿಶೇಷ ಹಣವನ್ನು ಈ ಬಾಬಿಗೆ ವ್ಯಯ ಮಾಡುತ್ತಿರುವರೆಂದು ಗೊತ್ತಾಗುವುದು. ಆದರೂ ಇದರಿಂದ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚಾಗಿಲ್ಲ. ಈಗಲೂ ನಮ್ಮ ದೇಶದಲ್ಲಿ ವಿದ್ಯಾವಂತರು ಶೇಕಡಾ ೧೧ಕ್ಕಿಂತ ಹೆಚ್ಚಾಗಿಲ್ಲ. ಇಂಗ್ಲೆಂಡ್ ದೇಶದಲ್ಲಿ ಶೇಕಡಾ ೭೬, ಅಮೇರಿಕಾದ ಸಂಯುಕ್ತಸಂಸ್ಥಾನ(U.S.A.)ದಲ್ಲಿ ಶೇಕಡಾ ೭೪, ಜಪಾನ್ ದೇಶದಲ್ಲಿ ಶೇಕಡಾ ೭೧ ವಿದ್ಯಾವಂತರಿರುವಾಗ, ನಮ್ಮ ದೇಶದಲ್ಲಿ ಅಜ್ಞಾನವು ಎಷ್ಟು ಹೆಚ್ಚಾಗಿರುವುದೆಂದು ಗೊತ್ತಾಗುವುದು. ಹಳ್ಳಿಗಳ ವಿದ್ಯಾಭ್ಯಾಸವೆಂದರೆ ಪ್ರಾಥಮಿಕ ವಿದ್ಯಾಭ್ಯಾಸ. ಈ ವಿದ್ಯಾಭ್ಯಾಸಕ್ಕೆ ತಗಲುವ ಹಣಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಇದಕ್ಕೆ ಕಾರಣಗಳು ಬಡತನ, ಸುಶಿಕ್ಷಿತ

ರಲ್ಲಿಪ ಬಹು ಕಡಿಮೆ ಸಂಬಳದ ಉಪಾಧ್ಯಾಯರು, ವಿದ್ಯಾಭ್ಯಾಸಕ್ರಮದಲ್ಲಿರುವ ನ್ಯೂನತೆ. ವಿದ್ಯಾಭ್ಯಾಸಕ್ರಮವನ್ನು ವಿಮರ್ಶಿಸಲು ಇಂಡಿಯಾ ಸರ್ಕಾರದಿಂದ ನೇಮಕವಾದ 'ಹಾರ್ಟ್ಯಾಗ್' ಸಮಿತಿಯವರು ವಿದ್ಯಾರ್ಥಿಗಳು ಸ್ವಲ್ಪಮಟ್ಟಿಗಾದರೂ ವಿದ್ಯಾವಂತರಾಗಲು ಕನಿಷ್ಠಪಕ್ಷ ನಾಲ್ಕು ವರ್ಷಗಳಾದರೂ ಪಾಠಶಾಲೆಗೆ ತಪ್ಪದೆ ಹೋಗುವುದು ಆವಶ್ಯಕವೆಂದು ತಿಳಿಸಿರುತ್ತಾರೆ. ೧೯೩೨–೧೯೩೩ರಲ್ಲಿ ಒಂದನೆಯ ತರಗತಿಗೆ ಸೇರಿದ ೧೦೦ ಮಂದಿ ವಿದ್ಯಾರ್ಥಿಗಳಲ್ಲಿ ೧೯೩೫–೩೬ರಲ್ಲಿ ನಾಲ್ಕನೆಯ ತರಗತಿಗೆ ಸೇರಿದವರು ೧೯ ಜನ ಮಾತ್ರ. ೧೯೩೬–೩೭ರಲ್ಲಿ ಐದನೆಯ ತರಗತಿಗೆ ಸೇರಿದವರು ೧೧ ಜನ ಮಾತ್ರ. ಅಂದರೆ ಶೇಕಡಾ ೮೦ಕ್ಕಿಂತ ಜಾಸ್ತಿಯಾಗಿ ಹುಡುಗರು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟುಬಿಡುವರು. ಅಲ್ಲದೆ ಪಾಠಶಾಲೆಯನ್ನು ಬಿಟ್ಟಮೇಲೆ ಓದುವುದನ್ನಾದರೂ ರೂಢಿಯಲ್ಲಿಡಲು ತಕ್ಕ ಸಾಮಗ್ರಿಗಳು ನಮ್ಮಲ್ಲಿಲ್ಲ. ಅನೇಕ ಗ್ರಾಮಗಳಲ್ಲಿ ಒಂದು ವರ್ತಮಾನ ಪತ್ರಿಕೆಯು ಸಿಕ್ಕುವುದು ಕಷ್ಟ. ಅಲ್ಲದೆ ವಿದ್ಯಾಭ್ಯಾಸಕ್ರಮವೂ ಕೂಡ ನಮ್ಮ ಹಳ್ಳಿಯ ಹುಡುಗರಿಗೆ ಅಷ್ಟು ಪ್ರಯೋಜನವಾಗುವುದಿಲ್ಲ. ಇದರಿಂದ ಅನೇಕ ರೈತರು ತಮ್ಮ ಮಕ್ಕಳನ್ನು ಪಾಠಶಾಲೆಗೆ ಕಳುಹಿಸದೆ ತಮ್ಮ ಬೇಸಾಯದ ಕೆಲಸಕ್ಕೆ ಉಪಯೋಗಿಸಿಕೊಳ್ಳುವರು. ಇದರಿಂದ ಪಾಠಶಾಲೆಗಳಲ್ಲಿರುವ ರಿಜಿಸ್ಟರಿನ ಸಂಖ್ಯೆಯು ಹೆಚ್ಚಾಗಿದ್ದರೂ ಹಾಜರಿ ಸಂಖ್ಯೆ ಬಹಳ ಕಡಿಮೆ. ಹಳ್ಳಿಗಳಲ್ಲಿ ನಿಜವಾಗಿಯೂ ಜ್ಞಾನಪ್ರಚಾರವಾಗಬೇಕಾದರೆ ವಿದ್ಯಾಭ್ಯಾಸಕ್ರಮದಲ್ಲಿಯೇ ಮಾರ್ಪಾಟಾಗಬೇಕು. ಹಳ್ಳಿಗಳ ಸನ್ನಿವೇಶಕ್ಕೆ ಹೊಂದಿಕೊಂಡಿರುವ ಕಸಬುಗಳಲ್ಲಿ ಮಕ್ಕಳಿಗೆ ತಿಳುವಳಿಕೆ

ಯುಂಟಾಗುವಂತೆ ಏರ್ಪಡಿಸಬೇಕು. ಇದಕ್ಕೆ "ವಾರ್ಧಾ ಶಿಕ್ಷಣ ಪದ್ಧತಿ" ಎಂದು ಹೇಳುವರು. ಇದರ ಮುಖ್ಯ ತತ್ವ (Education through the Craft) ಎಂದರೆ ಕೆಲಸದ ಮೂಲಕ ವಿದ್ಯಾಭ್ಯಾಸವೆಂದು. ವಾರ್ಧಾ ಶಿಕ್ಷಣ ಪದ್ಧತಿಯ ಸಾಧಕ ಬಾಧಕ ವಿಷಯಗಳಲ್ಲಿ ವಿದ್ವಾಂಸರಲ್ಲಿ ಚರ್ಚೆಗಳಾಗುತ್ತಿವೆ. ಅಂತೂ ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಬದಲಾವಣೆ ಆಗಬೇಕೆನ್ನುವುದು ನಿರ್ವಿವಾದ ವಿಷಯ. ಅಲ್ಲದೆ ಹಳ್ಳಿಗಳಲ್ಲಿ ಜ್ಞಾನಪ್ರಚಾರಕ್ಕೆ ನೆರವಾಗುವ ವರ್ತಮಾನ ಪತ್ರಿಕೆಗಳನ್ನೂ ಮತ್ತು ಸರ್ಕ್ಯುಲೇಟಿಂಗ್ ಲೈಬ್ರರಿ ಅಥವಾ ಪುಸ್ತಕ ಭಂಡಾರಗಳನ್ನೂ ಏರ್ಪಡಿಸಬೇಕು. ಅಲ್ಲದೆ ವಯಸ್ಸಾದವರಿಗೆ ಜ್ಞಾನಪ್ರಚಾರಮಾಡುವ "Adult Education" ಮತ್ತು "Literacy Drive" ಅಂದರೆ ಸಾಕ್ಷರತಾ ಪ್ರಚಾರವು ಬಹಳ ಬಿರುಸಾಗಿ ನಡೆಯಬೇಕು. ಇದರ ಜವಾಬ್ದಾರಿಯು ವಿದ್ಯಾವಂತರಾದ ಯುವಕರಮೇಲೆ ವಿಶೇಷವಾಗಿರುವುದು. ವಿದ್ಯಾವಂತರಾದ ಯುವಕರು ತಾವು ಸ್ಕೂಲು ಮತ್ತು ಕಾಲೇಜುಗಳಲ್ಲಿ ಕಲಿತ ವಿಷಯಗಳನ್ನು ಜನಗಳಲ್ಲಿ ಸುಲಭವಾದ ರೀತಿಯಲ್ಲಿ ಪ್ರಚುರಪಡಿಸಬೇಕು. ಅವರು ಶ್ರೀಯುತ ಸಿ. ರಾಜಗೋಪಾಲಾಚಾರ್ಯರು ಹೇಳಿದಂತೆ ಶ್ರದ್ಧಾಳುಗಳಾಗಿ ನಿಜವಾದ ಪ್ರೀತಿಯಿಂದ ಕೆಲಸಮಾಡಬೇಕು. ಕೇವಲ "ಚನ್ನಪಟ್ಟಣದ ಬಣ್ಣದ ಹಣ್ಣಿನಂತಿರಬಾರದು." ಹಳ್ಳಿ, ಹಳ್ಳಿಯ ಪಾಠಶಾಲೆ, ಹಳ್ಳಿಯ ಉಪಾಧ್ಯಾಯ—ಇವು ಮೂರು ನಮ್ಮ ಸಂಸ್ಕೃತಿಯ ಆಧಾರಸ್ತಂಭಗಳು. ಹಳ್ಳಿಯ ಉಪಾಧ್ಯಾಯರನ್ನು ಬ್ರೈಯಿನ್ ಎಂಬ ವಿದ್ವಾಂಸರು "Village Dynamo"—ಹಳ್ಳಿಯ ಶಕ್ತಿಯಂತ್ರ ಎಂದು ಹೇಳಿರುತ್ತಾರೆ. ಇದು ಸಹಜವಾದ

ಮಾತು. ಉಪಾಧ್ಯಾಯರು ಮಕ್ಕಳಿಗೆ ಬರೀ ಪಾಠ ಮತ್ತು ಲೆಖ್ಖಗಳನ್ನು ಹೇಳುವುದರಲ್ಲಿ ತೃಪ್ತರಾಗದೆ ಮಕ್ಕಳನ್ನು ಉತ್ತಮ ರೀತಿಯ ಪ್ರಜೆಗಳಾಗುವಂತೆ ತಿಳುವಳಿಕೆ ಹೇಳಬೇಕು. ಹಳ್ಳಿಯ ಮಕ್ಕಳಿಗೆ ಹಳ್ಳಿಯ ಜೀವನದಲ್ಲಿ ಆಸಕ್ತಿ ಹುಟ್ಟಿಸಬೇಕು. ಹಳ್ಳಿಯ ಆಟಗಳು, ಗಾನ ಮುಂತಾದವುಗಳಲ್ಲಿ ಮಕ್ಕಳಿಗೆ ಅಭಿರುಚಿ ಹೆಚ್ಚುವಂತೆ ಮಾಡಬೇಕು. ಹಳ್ಳಿಯ ಪಾಠಶಾಲೆ ಹಳ್ಳಿಗೆ ಆದರ್ಶವಾಗಿರಬೇಕು. ಆಧುನಿಕ ಕಾಲಕ್ಕೆ ಸರಿಹೊಂದುವಂತೆ ಮಕ್ಕಳಿಗೆ ಆರೋಗ್ಯ ಸಂಬಂಧವಾದ ವಿಷಯಗಳಲ್ಲಿ ತಿಳುವಳಿಕೆ ಹೇಳುವುದು, ಪ್ರಥಮ ಚಿಕಿತ್ಸೆ ("First Aid") ಮತ್ತು ಸ್ಕೌಟಿಂಗ್ ಮುಂತಾದ ವಿಷಯಗಳಲ್ಲಿ ತಿಳುವಳಿಕೆ ಮೂಡಬೇಕು. ಅಲ್ಲದೆ ಚಲನಚಿತ್ರಗಳು ಮತ್ತು ಮಾಯಾದೀಪಗಳಿಂದ ಮಕ್ಕಳಿಗೂ ಹಳ್ಳಿಯವರಿಗೂ ಕಷ್ಟವಾದ ವಿಷಯಗಳನ್ನು ಸುಲಭವಾಗಿ ಬೋಧಿಸಬಹುದು.

ಅಲ್ಲದೆ ಹೆಣ್ಣುಮಕ್ಕಳ ವಿದ್ಯಾಭ್ಯಾಸದಲ್ಲಿ ನಮ್ಮ ಜನರು ಹೆಚ್ಚು ಶ್ರದ್ಧೆವಹಿಸಬೇಕು. ವಿದ್ಯಾವಂತರಾದ ಪ್ರತಿಯೊಬ್ಬ ಹುಡುಗಿಯೂ ಭಾವೀ ಸಂತಾನದ ಅಭಿವೃದ್ಧಿಯಲ್ಲಿ ನೆರವಾಗುವಳೆಂಬುದನ್ನು ಮರೆಯಬಾರದು. ಮೇಲೆ ಹೇಳಿದ ಎಲ್ಲಾ ವಿದ್ಯಾ ಪ್ರಚಾರಕಾರ್ಯಗಳಲ್ಲಿ ಹೆಣ್ಣುಮಕ್ಕಳಿಗೆ ವಿಶೇಷವಾದ ಉತ್ತೇಜನ ಮತ್ತು ಅವಕಾಶಗಳಿರಬೇಕು. ಈ ಕೆಲಸಗಳಲ್ಲಿ ಹಳ್ಳಿಯ ಜನಗಳು ತಮ್ಮಲ್ಲಿರುವ ಉದಾಸೀನಭಾವವನ್ನು ಬಿಟ್ಟು ಹೆಚ್ಚಾಗಿ ಸಹಕರಿಸಬೇಕು.

ಇತ್ತೀಚೆಗೆ ಜನಗಳಲ್ಲಿ ಅನೇಕ ಕಾರಣಗಳಿಂದ ಉಂಟಾಗಿರುವ ಜಾಗೃತಿಯಿಂದ ನಮ್ಮ ದೇಶದಲ್ಲಿಯೂ ಜನಗಳು ಮುಂದರಿದ ದೇಶಗಳಲ್ಲಿರುವಂತೆ ಆಡಳಿತ ವಿಷಯದಲ್ಲಿ ಹೆಚ್ಚು

ಭಾಗವಹಿಸಲು ಕಾತುರರಾಗಿರುವುದು ಸ್ವಾಭಾವಿಕವಾಗಿದೆ. ನಮ್ಮ ಸಂಸ್ಥಾನದಲ್ಲಿ ಪ್ರಜಾಸರ್ಕಾರವು ಸ್ಥಾಪಿತವಾಗಿರುವುದು ಸಂತೋಷದ ವಿಷಯ. ಆದರೆ ಜವಾಬ್ದಾರಿ ಸರ್ಕಾರವನ್ನು ನಿರ್ವಹಿಸಬೇಕಾದರೆ ಜನಗಳಲ್ಲಿ ಹೆಚ್ಚಿನ ಯೋಗ್ಯತೆ ಬೇಕು. ಪ್ರಜಾಪ್ರಭುತ್ವ ದೇಶಗಳಾದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಜನರಲ್ಲಿ ವಿಶೇಷ ಜ್ಞಾನ ಪ್ರಚಾರವಾಗಿದೆ. ತಮ್ಮ ಪ್ರತಿನಿಧಿಗಳನ್ನು ಸರಿಯಾದ ರೀತಿಯಲ್ಲಿ ತಮ್ಮ ಮತಾಧಿಕಾರದಿಂದ (Voting) ಆರಿಸಿ ಆಡಳಿತ ನಿರ್ವಹಿಸಲು ಶಕ್ತರಾಗಿದ್ದಾರೆ. ಆ ತರಹ ಯೋಗ್ಯತೆಯು ನಮ್ಮ ಜನರಲ್ಲುಂಟಾಗಬೇಕಾದರೆ ಇನ್ನೂ ಬಹು ಕಾಲ ಬೇಕಾಗುವುದು. ಹಾಗೆಂದು ನಾವು ನಿರಾಶರಾಗಬೇಕಾದುದಿಲ್ಲ. ಪ್ರಜೆಗಳ ಅಭಿವೃದ್ಧಿಯಲ್ಲಿ ತುಂಬಾ ಆಸಕ್ತರಾಗಿರುವ ನಮ್ಮನ್ನಾಳುವ ಮಹಾಸ್ವಾಮಿಯವರು ಪ್ರಜೆಗಳ ಆಶಯಗಳನ್ನು ಪೂರ್ಣಗೊಳಿಸಲು ಮೈಸೂರಿನಲ್ಲಿ ಪ್ರಜಾಮಂತ್ರಿಮಂಡಲವನ್ನು ನೇಮಿಸಿರುವರು. ಪ್ರಜೆಗಳಿಗೆ ಆಡಳಿತದ ವಿಷಯದಲ್ಲಿ ಹೆಚ್ಚು ಸಾಮರ್ಥ್ಯವುಂಟಾಗುವಂತೆ ಅವಕಾಶ ಕಲ್ಪಿಸಲು ಸರ್ಕಾರದವರು ಬಹು ವರ್ಷಗಳಿಂದ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಪ್ರಜೆಗಳಿಗೆ ವಹಿಸಿಕೊಟ್ಟಿರುವರು. ಈ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಮುಖ್ಯವಾದದ್ದು ಗ್ರಾಮಪಂಚಾಯಿತಿಗಳು. ಮೈಸೂರಿನಲ್ಲಿ ೧೯೧೪ರಲ್ಲಿ ಜಾರಿಗೆ ಬಂದ ಗ್ರಾಮೋಜ್ಜೀವನ ಯೋಜನೆ ಮತ್ತು ಇತರ ಕಾನೂನುಗಳಲ್ಲಿ ಕ್ರೋಡೀಕರಿಸಿ ೧೯೨೬ರಲ್ಲಿ ಗ್ರಾಮಪಂಚಾಯಿತಿಗಳ ಕಾನೂನನ್ನು (Village Panchayat Regulation) ಜಾರಿಗೆತಂದರು.

ಇದರಿಂದ ಹಳ್ಳಿಗಳಲ್ಲಿ ನಡೆಯಬೇಕಾಗಿರುವ ಗ್ರಾಮಾಭಿವೃದ್ಧಿ

ಕಾರ್ಯಗಳನ್ನು ಹಳ್ಳಿಯವರೇ ಮಾಡಿಕೊಳ್ಳಲನುಕೂಲವಾಗು ವಂತೆ ಗ್ರಾಮಪಂಚಾಯಿತಿಗಳನ್ನು ಜಾರಿಗೆ ತಂದರು. ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಾಗಿದ್ದ ಸರ್ ಬ್ರಜೇಂದ್ರನಾಥ ಸೀಲ್‌ರವರು ಹೇಳಿರುವ ಮಾತುಗಳು ಗಮನಾರ್ಹವಾದುವುಗಳು. "ನೇಗಿಲನ್ನು ಹಿಡಿಯುವ ರೈತನನ್ನು ಸುಧಾರಿಸುವವರೆಗೂ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು ಮುಂದುವರಿಯವು. ನೂರಾರು ಕಾನ್‌ಫರೆನ್ಸುಗಳಾಗಬಹುದು. ಆದರೂ ರೈತರು ಹಳ್ಳಿಯ ಆಡಳಿತವನ್ನು ಸಮರ್ಪಕವಾಗಿ ನಡೆಸಬಲ್ಲರೆಂದು ದೃಢವಾಗುವ ವರೆಗೂ ಪ್ರಜಾಸತ್ತಾತ್ಮಕ ಸರ್ಕಾರವು ಬರಲಾರದೆಂಬುದನ್ನು ದೃಢವಾಗಿ ತಿಳಿಯಲಿ.''—ಈ ಪಂಚಾಯಿತಿಗಳನ್ನು ಪ್ರಜಾ ಸೇವೆಯ ದೇವಾಲಯಗಳೆಂದು ಧಾರಾಳವಾಗಿ ಹೇಳಬಹುದು. ಹೀಗಿದ್ದರೂ ನಮ್ಮ ದೇಶದಲ್ಲಿ ಗ್ರಾಮಪಂಚಾಯಿತಿಗಳು ಅಷ್ಟು ಸಮರ್ಪಕವಾಗಿ ನಡೆದಿಲ್ಲ. ಮೈಸೂರಿನಲ್ಲಿ ಈಗ ಸುಮಾರು ೧೧,೩೯೦ ಪಂಚಾಯಿತಿಗಳಿವೆ. ಇವುಗಳ ಒಟ್ಟು ಆದಾಯ ಸುಮಾರು ೭೫ ಲಕ್ಷ ರೂಪಾಯಿಗಳು. ಇವುಗಳ ಸಹಾಯದಿಂದ ಅನೇಕ ಕಡೆಗಳಲ್ಲಿ ಗ್ರಾಮಾಭಿವೃದ್ಧಿ ಕೆಲಸ ಗಳು ನಡೆದಿವೆ. ಆದರೆ ಜನಗಳ ದೃಷ್ಟಿಯೆಲ್ಲಾ ಕೇಂದ್ರ ಸರ್ಕಾರದ ಮೇಲೆ ಬಿದ್ದು, ಎಲ್ಲಾ ಕೆಲಸವನ್ನೂ ಸರ್ಕಾರದವರೇ ಮಾಡಲಿ ಎನ್ನುವ ತಪ್ಪುಭಾವನೆಯು ನಮ್ಮ ಜನರಲ್ಲಿ ಮೂಡಿದೆ. ಇದರ ಜೊತೆಗೆ ವಿದ್ಯಾವಂತರಾದ ಜನರಿಗೆ ನಮ್ಮ ಹಳ್ಳಿಗಳ ವಿಷಯದಲ್ಲಿ ಅನಾದಾರಣೆಯು ಹೆಚ್ಚಿ ಅವರು ಹಳ್ಳಿ ಗಳಿಂದ ಪಟ್ಟಣಗಳಿಗೆ ವಲಸೆಹೋಗುತ್ತಿರುವುದು ನಮ್ಮ ಗ್ರಾಮಗಳ ಹೀನಸ್ಥಿತಿಗೆ ಪ್ರಬಲವಾದ ಕಾರಣವಾಗಿದೆ. ನಮ್ಮ

ಜನಗಳಲ್ಲಿ ನಮ್ಮ ಊರು, ನಮ್ಮ ಗ್ರಾಮದ ಕೆಲಸ ಎಂಬ ಮಮತೆಯೇ ಮಾಯವಾಗಿ ಎಲ್ಲಾ ಕೆಲಸಗಳಿಗೂ ಸರ್ಕಾರದ ಕೈಕಾಯುತ್ತಿರುವ ನಿರ್ಬಲಸ್ಥಿತಿಯು ಬಂದೊದಗಿದೆ. ಅಲ್ಲದೆ ವಿದ್ಯಾವಂತರಾದ ಜನಗಳು ಹಳ್ಳಿಗಳನ್ನು ಬಿಡುವುದರಿಂದ ಹಳ್ಳಿಗಳಲ್ಲಿ ಯೋಗ್ಯರಾದ ನಾಯಕರಿಲ್ಲದೆ ವ್ಯಾಜ್ಯ ವ್ಯವಹಾರ ಗಳು ಹೆಚ್ಚಾಗಿ ಪಂಚಾಯಿತಿಗಳ ಕೆಲಸಕ್ಕೆ ತುಂಬಾ ಅಡಚಣೆ ಯಾಗಿದೆ. ಸ್ನೇಹ ಸೌಹಾರ್ದಗಳಿಗೆ ಬದಲಾಗಿ ದ್ವೇಷ ಅಸೂಯೆಗಳು ಮೂಡಿ, ಉರೊಟ್ಟಿನ ಕೆಲಸಗಳಲ್ಲಿ ಜನಗಳಿಗಿದ್ದ ಮಮತೆಯೇ ಹೋಗಿಬಿಟ್ಟಿದೆ. ನಮ್ಮ ಹಳ್ಳಿಯವರು ಹಿಂದೆ ಮಾಡುತ್ತಿದ್ದ ಸೋಮವಾರದ ಕೆಲಸವು ಕೇವಲ ನಾಮಾವಶೇಷ ವಾಗಿದೆ. ಇಂದು ನಿಜವಾಗಿಯೂ ದೇಶಾಭಿಮಾನಿಯಾಗಿ ರೈತರ ಮೇಲ್ಮೆಗೆ ದುಡಿಯಬೇಕೆಂದಿರುವ ಪ್ರತಿಯೊಬ್ಬ ಮನುಷ್ಯನೂ ಗ್ರಾಮಪಂಚಾಯಿತಿಗಳ ಕಡೆಗೆ ತನ್ನ ದೃಷ್ಟಿ ಯನ್ನು ತಿರುಗಿಸಿ, ಅವುಗಳನ್ನು ಉತ್ತಮಗೊಳಿಸಲು ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಬೇಕು. ಸಮರ್ಪಕವಾಗಿ ಕೆಲಸಮಾಡುವ ಪಂಚಾಯಿತಿಯ ಸಹಾಯದಿಂದ ಅನೇಕ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಇತರರ ಸಹಾಯವಿಲ್ಲದೆ ಗ್ರಾಮಸ್ಥರೇ ಮಾಡಿಕೊಳ್ಳಬಹುದು. ಅವುಗಳಿಗೆ ಬೇಕಾಗುವ ಸಹಾಯಸಂಪತ್ತಿಗಳನ್ನು ಸರ್ಕಾರದವರು ಒದಗಿಸಲು ಸಿದ್ಧರಾಗಿರುವರು.

ನಮ್ಮ ಹಳ್ಳಿಗಳ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ಘನವಾದ ಉದ್ದೇಶದಿಂದ, ನಮ್ಮ ಸರ್ಕಾರದವರು ಗ್ರಾಮಾಭಿ ವೃದ್ಧಿ ಕೆಲಸಗಳು ಹುರುಪಿನಿಂದಲೂ, ಶಿಸ್ತಿನಿಂದಲೂ ಕ್ರಮ ಬದ್ಧವಾಗಿಯೂ ನಡೆಯಬೇಕಾದರೆ ಒಂದು ನಿಯತವಾದ

ಯೋಜನೆಯು (Plan) ಆವಶ್ಯಕವೆಂದರಿತು ಗೌರ್ನಮೆಂಟು ಇಸವಿಯಲ್ಲಿ ಒಂದು ಪಾಂಚವಾರ್ಷಿಕ ಯೋಜನೆಯನ್ನು (Five-year Plan) ಆಚರಣೆಗೆ ತಂದಿರುತ್ತಾರೆ. ಇದರಲ್ಲಿ ಸಂಸ್ಥಾನದ ಪ್ರತಿ ತಾಲ್ಲೂಕಿನಲ್ಲಿಯೂ ವರ್ಷಕ್ಕೆ ಒಂದು ಹೋಬಳಿಯನ್ನು ಮಾದರಿಯಾಗಿ ಚುನಾಯಿಸಿ ಅದಕ್ಕೆ ಸೇರಿದ ೫೦–೬೦ ಹಳ್ಳಿಗಳಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳೂ ಸಹಕರಿಸಿ ಗ್ರಾಮಾಭಿವೃದ್ಧಿ ಕೆಲಸಗಳನ್ನು ಮುಂದುವರಿಸುವುವು. ಈ ಯೋಜನೆಯ ಪ್ರಕಾರ ಐದು ವರ್ಷಗಳ ಅವಧಿಯಲ್ಲಿ ಸಂಸ್ಥಾನದ ಎಲ್ಲಾ ಗ್ರಾಮಗಳಲ್ಲಿಯೂ ಗ್ರಾಮಾಭಿವೃದ್ಧಿ ಕೆಲಸಗಳು ಸಮರ್ಪಕವಾಗಿ ನಡೆಯಲು ಅವಕಾಶವಾಗುವುದು.

ಇದರ ಮೊದಲನೇ ಹಂತವಾಗಿ ಸರ್ಕಾರದವರು ಹೋಬಳಿ ಕೆಲಸಗಾರರೆಂಬ (Hobli Workers) ಅಧಿಕಾರಿಗಳನ್ನು ಹೋಬಳಿಗಳಲ್ಲೇ ವಾಸಿಸುವ, ವಿದ್ಯಾವಂತರಾದ ಜನಗಳ ವಿಶ್ವಾಸಪಾತ್ರರಾದ, ಹೋಬಳಿಯ ಏಳಿಗೆಯಲ್ಲಿ ಶ್ರದ್ಧಾಸಕ್ತಿಯುಳ್ಳ ಯುವಕರಿಂದ ಚುನಾಯಿಸಿ ಅವರಿಗೆ ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಸರಿಯಾದ ಶಿಕ್ಷಣ ದೊರಕುವಂತೆ ಏರ್ಪಾಡು ಮಾಡಿರುತ್ತಾರೆ. ಈಗಾಗಲೇ ಈ ಹೋಬಳಿ ಕೆಲಸಗಾರರು ಸಂಸ್ಥಾನದ ನಾನಾ ಭಾಗಗಳಲ್ಲಿ ತಮ್ಮ ಕೆಲಸಗಳನ್ನು ಉತ್ಸಾಹದಿಂದ ಪ್ರಾರಂಭಿಸಿರುತ್ತಾರೆ. ಇವರಿಗೆ ಸರಿಯಾದ ಮಾರ್ಗದರ್ಶಕರಾಗಿ ಆಗಿಂದಾಗ್ಯೆ ಆವಶ್ಯಕವಾದಾಗ ಸಲಹೆಗಳನ್ನು ಕೊಟ್ಟು, ಅವರ ಕೆಲಸಗಳನ್ನು ಪರಿಶೀಲಿಸಲು ಸಂಸ್ಥಾನದ ರೆವಿನ್ಯೂ ಕಮಿಷನರ ಪ್ರತಿನಿಧಿಯಾಗಿ, ಹಳ್ಳಿಗಳ ಏಳಿಗೆಯ ಕಾರ್ಯಗಳಲ್ಲಿ ಪರಿಶ್ರಮವುಳ್ಳ ಉನ್ನತಾಧಿಕಾರಿಯೊಬ್ಬರನ್ನು ಗ್ರಾಮಾಭಿವೃದ್ಧಿ ಕೆಲಸಗಳ ಅಧಿಕಾರಿಯಾಗಿ ನೇಮಿಸಿರುತ್ತಾರೆ.

ಸಂಸ್ಥಾನವನ್ನು ಹಲವು ಭಾಗಗಳಾಗಿ ವಿಂಗಡಿಸಿ ಈ ಇಲಾಖೆಗೆ ಬೇಕಾಗುವ ಸಿಬ್ಬಂದಿಯನ್ನು ಹೆಚ್ಚಿಸಿ ಗ್ರಾಮಾಭಿವೃದ್ಧಿ ಕೆಲಸಗಳನ್ನು ವಿಸ್ತರಿಸುವ ಯೋಜನೆಯು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಸಂಸ್ಥಾನದ ಒಂಬತ್ತು ಜಿಲ್ಲೆಗಳಲ್ಲಿಯೂ ನಡೆಯುವ ಗ್ರಾಮಾಭಿವೃದ್ಧಿ ಕೆಲಸಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಆ ಜಿಲ್ಲೆಗಳ ಮುಖ್ಯಾಧಿಕಾರಿಗಳ ಸಹಾಯಕರಾಗಿ ಗ್ರಾಮಾಭಿವೃದ್ಧಿ ಅಧಿಕಾರಿಗಳನ್ನು ನೇಮಿಸಿರುತ್ತಾರೆ. ಪ್ರಜಾ ಮಂತ್ರಿಮಂಡಲವು ಅಧಿಕಾರಕ್ಕೆ ಬಂದಮೇಲೆ ಗ್ರಾಮಾಭಿವೃದ್ಧಿಯ ಇಲಾಖೆಯಲ್ಲಿ ಅನೇಕ ಬದಲಾವಣೆಗಳಾಗಿವೆ. ಸರ್ಕಾರದವರು ನಡೆಸುವ ನಾನಾ ಅಭಿವೃದ್ಧಿ ಕೆಲಸಗಳಲ್ಲಿ ಸಾರ್ವಜನಿಕ ಸಹಕಾರವನ್ನು ಹೆಚ್ಚಾಗಿ ಪಡೆಯುವ ಉದ್ದೇಶದಿಂದ ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳೆಂಬ ಸಂಸ್ಥೆಗಳನ್ನು ಏರ್ಪಡಿಸಿರುತ್ತಾರೆ. ಈ ಸಂಸ್ಥೆಗಳಿಗೆ ಆಯಾ ತಾಲ್ಲೂಕಿನ ಅಥವಾ ಜಿಲ್ಲೆಯ ಪ್ರಜಾ ಮುಂದಾಳುಗಳೊಬ್ಬರನ್ನು ಖಾಸಗಿ ಅಧ್ಯಕ್ಷರಾಗಿ ನೇಮಿಸಿರುತ್ತಾರೆ. ಈ ಗ್ರಾಮಾಭಿವೃದ್ಧಿ ಕೆಲಸಗಳ ಜೊತೆಗೆ ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನೂ ಸಹ ಈ ಆಡಳಿತ ವರ್ಗದವರಿಗೆ ವಹಿಸಿರುತ್ತಾರೆ. ಈ ಹೊಸ ಯೋಜನೆಯಿಂದ ಗ್ರಾಮಾಭಿವೃದ್ಧಿ ಕೆಲಸಗಳು ಹೇಗೆ ಸುಗಮವಾಗಿ ನಡೆದು ದೇಶದ ಮೇಲ್ಮೆ ಸಾಧನೆಯಾಗುವುದೆಂದು ಕಾದು ನೋಡಬೇಕಾಗಿದೆ.

ಆದರೆ ಎಲ್ಲಾ ಕೆಲಸವನ್ನೂ ಸರ್ಕಾರದವರೇ ಮಾಡಲಿ ಎಂಬ ಭಾವನೆಯು ಅಸಾಧುವಾದುದು. ಯಾವ ಸರ್ಕಾರವೂ

ಆ ತರಹ ಕೆಲಸಮಾಡಲಾರರು. ಪ್ರಜೆಗಳು ತಮ್ಮ ಜವಾಬ್ದಾರಿಯನ್ನು ಅರಿತ ಹೊರತು ಜವಾಬ್ದಾರಿ ಸರ್ಕಾರವನ್ನು ನಿರ್ವಹಿಸಲಾರರೆಂಬುದು ಎಲ್ಲರೂ ನೆನಪಿನಲ್ಲಿಡಬೇಕಾದ ಅಂಶ. ಮುಖ್ಯವಾಗಿ ಒಂದು ದೇಶವು ಏಳಿಗೆಗೆ ಬರಬೇಕಾದರೆ ಜನಗಳು ತಮ್ಮ ಅಭಿವೃದ್ಧಿಗೆ ತಾವೇ ದುಡಿಯಬೇಕು. ಆತ್ಮಾವಲಂಬಿಗಳಾಗಿ ತಮ್ಮ ಕೆಲಸಗಳನ್ನು ಇತರರ ಸಹಾಯವಿಲ್ಲದೆ ಮಾಡಿಕೊಳ್ಳುವವರಾಗಬೇಕು. ತಮ್ಮ ಏಳು ಬೀಳುಗಳು ತಮ್ಮ ಕೈಯಲ್ಲಿರುವುವೆಂಬುದನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಗ್ರಾಮಸ್ಥರ ಸಹಾಯ, ಪ್ರಯತ್ನಗಳಿಲ್ಲದೆ ಗ್ರಾಮಗಳು ಎಂದಿಗೂ ಏಳಿಗೆಗೆ ಬರಲಾರವು. ಸರ್ಕಾರದವರು ಕೇವಲ ದಾರಿ ತೋರಿಸಬಲ್ಲರು (Guide), ಕೆಲಸಮಾಡುವುದು ಜನಗಳ ಕರ್ತವ್ಯ; ಈ ಭಾವನೆಗಳನ್ನು ಜನರಲ್ಲಿ ಪ್ರಚಾರಮಾಡುವುದು ಪ್ರತಿಯೊಬ್ಬ ವಿದ್ಯಾವಂತನ ಕೆಲಸ. ಈ ತರಹ ತಿಳುವಳಿಕೆ ನಮ್ಮ ಜನಗಳಲ್ಲಿ ಹರಡಿ, ಗ್ರಾಮಗಳಲ್ಲಿ ಶಾಂತಿ ಸಮಾಧಾನಗಳೇರ್ಪಟ್ಟು, ಜನರು ಸೋಮಾರಿತನವನ್ನು ಬಿಟ್ಟು, ಕಷ್ಟಪಟ್ಟು ದುಡಿದು, ಗ್ರಾಮಗಳ ಮೇಲ್ಮೈಗೆ ತನ್ಮೂಲಕ ದೇಶದ ಏಳಿಗೆಗೆ ಕೆಲಸಮಾಡುತ್ತಾರೆಂದು ಆಶಿಸೋಣ.

wo 1189—MUPM—3000—24-9-62

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ

೧ ಖಗೋಳಶಾಸ್ತ್ರ ಪ್ರವೇಶ
—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೨ ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್
೩ ತೆರಿಗೆ—ಬಿ. ಆರ್. ಸುಬ್ಬರಾವ್
೪ ನವರತ್ನಗಳು—ಎಚ್. ಸುಬ್ಬಾಜೋಯಿಸ್
೫ ನಮ್ಮ ಹಳ್ಳಿಗಳು—ಜಿ. ಎಸ್. ಕೃಷ್ಣಮೂರ್ತಿ
೬ ಕುಮಾರವ್ಯಾಸ—ಎಸ್. ವಿ. ರಂಗಣ್ಣ
೭ ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೮ ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೯ ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್
೧೦ ಪಂಪ—ತೀ. ನಂ. ಶ್ರೀಕಂಠಯ್ಯ
೧೧ ಪ್ರಾಣಿಜೀವನ—ಎ. ನಾರಾಯಣರಾವ್
೧೨ ಕನಸುಗಳು—ಡಾ॥ ಎನ್. ಎಸ್. ನಾರಾಯಣಶಾಸ್ತ್ರೀ
೧೩ ಮದುವೆ—ನಾ. ಕಸ್ತೂರಿ
೧೪ ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ
೧೫ ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್
೧೬ ಬೆಳಕು—ಟಿ. ಎಸ್. ಸುಬ್ಬರಾಯ
೧೭ ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ
೧೮ ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೧೯ ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್
೨೦ ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ
೨೧ ಸಾರ್ವಜನಿಕ ವೆಚ್ಚ—ಡಾ॥ ಎಂ. ಎಚ್. ಗೋಪಾಲ್
೨೨ ಶಿಶುವಿಹಾರಗಳು—ಸಿ. ರಂಗಾಚಾರ್
೨೩ ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ
೨೪ ವಿಡಂಬನ—ಎಸ್. ವಿ. ರಂಗಣ್ಣ
೨೫ ಎಲ್ಲೋರ ಮತ್ತು ಅಜಂತ—ಡಾ॥ ಎಂ. ಎಚ್. ಕೃಷ್ಣ

೨೬ ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್

೨೭ ಭಾಸ—ಡಾ॥ ಎಚ್. ಎಲ್. ಹರಿಯಪ್ಪ

೨೮ ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ

೨೯ ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ

೩೦ ರಕ್ತ—ಡಿ. ಶಾಮಣ್ಣ

೩೧ ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್

೩೨ ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ

೩೩ ಗಣಿತಶಾಸ್ತ್ರದ ಸ್ವರೂಪ

—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್

೩೪ ಋಗ್ವೇದ—ಎಂ. ಎ. ಕೃಷ್ಣಸ್ವಾಮಿ

೩೫ ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ

೩೬ ಆಳ್ವಾರುಗಳು—ಎಂ. ಯಾಮುನಾಚಾರ್ಯ

೩೭ ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು

—ವಿ. ರಾಘವೇಂದ್ರರಾವ್

೩೮ ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ

೩೯ ಮಕ್ಕಳ ಭಾವಜೀವನ—ಡಾ॥ ಬಿ. ಕುಪ್ಪುಸ್ವಾಮಿನಾಯಿಡು

೪೦ ಸಹಕಾರ—ಎಸ್. ಗೋಪಾಲಸ್ವಾಮಿ

೪೧ ನಯಸೇನ—ಜಿ. ವೆಂಕಟಸುಬ್ಬಯ್ಯ

೪೨ ಕೌಟಿಲ್ಯ—ಡಾ॥ ಎಂ. ವಿ. ಕೃಷ್ಣರಾವ್

೪೩ ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ

೪೪ ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್

೪೫ ಲಕ್ಷ್ಮೀಶ—ಎನ್. ಅನಂತರಂಗಾಚಾರ್

೪೬ ರುಚಿ—ಎಸ್. ವಿ. ರಂಗಣ್ಣ

೪೭ ಕೀಟಗಳು—ಡಿ. ಎಸ್. ವೀರಯ್ಯ

೪೮ ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್

೪೯ ಮುದ್ರಣ—ಟಿ. ಎಸ್. ಶಾಮರಾವ್

೫೦ ಐವರು ಭೌತ ವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್

೫೧ ಕೃತಕರೇಷ್ಮೆ—ಎಂ. ಷಡಕ್ಷರಸ್ವಾಮಿ

೫೨ ಚೀನರ ಇತಿಹಾಸ ಮತ್ತು ನಾಗರಿಕತೆ

—ಎಸ್. ವೆಂಕಟದೇಶಿಕಾಚಾರ್

೫೩ ಯುದ್ಧಕಾಲದ ಆರ್ಥಿಕ ಸಮಸ್ಯೆಗಳು
—ಎಸ್. ಲಕ್ಷ್ಮೀನರಸಿಂಹನ್

೫೪ ಆಹಾರ—ಜೆ. ಆರ್. ಲಕ್ಷ್ಮಣರಾವ್.

೫೫ ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್

೫೬ ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ

೫೭ ಪ್ರಜಾಭಿಪ್ರಾಯ—ಟಿ.ಎಸ್. ರಾಜಗೋಪಾಲ ಅಯ್ಯಂಗಾರ್

೫೮ ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್

೫೯ ಜನಪದಮುಕ್ತಕಗಳು ಎಚ್.ಎಂ. ಶಂಕರನಾರಾಯಣರಾವ್

೬೦ ಹಾಲು—ಕೆ. ಎಸ್. ಲಕ್ಷ್ಮಣರಾವ್

೬೧ ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ

೬೨ ಭಾರತದಲ್ಲಿ ಪ್ರಜಾಪ್ರಭುತ್ವ
—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್

೬೩ ಆರೋಗ್ಯಸಾಧನೆ—ಮೊಟಗಾನಹಳ್ಳಿ ಮಹದೇವಶಾಸ್ತ್ರೀ

೬೪-೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್
ಮತ್ತು ಚಂದ್ರಭಾಗಾದೇವಿ

ಸಾದಾ ಪ್ರತಿ ೫೦ ಸ. ಪೈಸೆ ; ಉತ್ತಮ ಪ್ರತಿ ೭೫ ಸ. ಪೈಸೆ

೬೬ ಚುನಾವಣೆಗಳು—ಗ. ಸ. ಹಾಲಪ್ಪ

೬೭ ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜ ಸರ್ಕಾರ್

೬೮ ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ

೬೯ ಶಿಲ್ಪಿಯ ಪಾತ್ರ—ಬಿ. ಎಲ್. ಸಿ. ರಾಜನ್

೭೦ ಪರತಂತ್ರ ಜೀವಿಗಳು ಮತ್ತು ಪರತಂತ್ರ ಜೀವನ
—ಎಚ್. ಬಿ. ದೇವರಾಜ ಸರ್ಕಾರ್

೭೧ ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ

೭೨ ವಿನೋದ ಗಣಿತ—ವಿ. ಕೆ. ದೊರೆಸ್ವಾಮಿ

೭೩ ಸಾಬೂನು—ಕೆ. ಎಸ್. ಲಕ್ಷ್ಮಣರಾವ್

೭೪ ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ

೭೫ ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ

೭೬ ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ

೭೭ ಜೇನು—ಡಿ. ಎಸ್. ಮುರಿಗಪ್ಪ ಶ್ರೇಷ್ಠಿ

೭೮ ಮಾನವಶಾಸ್ತ್ರ—ಡಾ॥ ಕೆ. ಎಸ್. ವೆಂಕಟರಾಯಪ್ಪ

೭೯ ಅಥರ್ವವೇದ—ಸಿ. ಜಿ. ಪುರುಷೋತ್ತಮ
೮೦ ನೇಮಿಚಂದ್ರ—ಎನ್. ಅನಂತರಂಗಾಚಾರ್
೮೧-೮೨ ಹಾಸ್ಯ—ಎಸ್. ವಿ. ರಂಗಣ್ಣ
೮೩ ಶ್ರೀನಾಥ—ಕೆ. ವೆಂಕಟರಾಮಪ್ಪ
೮೪ ಷಡಕ್ಷರದೇವ—ದೇ. ಜವರೇಗೌಡ
೮೫ ಚಿತ್ರಾಂಗದಾ—ಯು. ಕೆ. ಸುಬ್ಬರಾಯಾಚಾರ್
೮೬ ಸಂಚಿಯ ಹೊನ್ನಮ್ಮ
—ಎಚ್. ಎಂ. ಶಂಕರನಾರಾಯಣರಾವ್
೮೭ ವಾಲ್ಮೀಕಿ ರಾಮಾಯಣ—ಯು. ಕೆ. ಸುಬ್ಬರಾಯಾಚಾರ್
೮೮ ಜಪಾನರ ಇತಿಹಾಸ ಮತ್ತು ನಾಗರಿಕತೆ—ಕೆ. ಪದ್ಮಾವತಮ್ಮ
೮೯ ಕ್ರಿಶ್ಚಿಯನ್ ಕ್ಯಾಲೆಂಡರ್—ಬಿ. ಸೀತಾರಾಮಶಾಸ್ತ್ರೀ
೯೦ ಆಲ್‌ಫ್ರೆಡ್ ನೊಬೆಲ್—ಎಸ್. ಸುಬ್ರಹ್ಮಣ್ಯಂ
೯೧ ಗೃಹರಚನಾವಿಧಿ—ಕೆ. ಎಸ್. ಸದಾನಂದ
೯೨ ಹಿಂದೂಧರ್ಮಸಾರ—ಸ್ವಾಮಿ ಸೋಮನಾಥಾನಂದ
೯೩ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು
—ಟಿ. ಎಸ್. ರಾಜಗೋಪಾಲ್ ಅಯ್ಯಂಗಾರ್
೯೪ ದಾರಿತಪ್ಪಿದ ಮಕ್ಕಳು—ಎನ್. ಎಸ್. ಶಾಂತಮ್ಮ
೯೫ ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೯೬ ಪ್ರೇರಣೆ—ಕೆ. ನಾಗರಾಜಶಾಸ್ತ್ರಿ
೯೭ ಪ್ರಾಣಿಗಳ ರಚನಾ ಕೌಶಲ
—ಎಚ್. ಬಿ. ದೇವರಾಜ ಸರ್ಕಾರ್
೯೮ ಭಾರತೀಯ ರಾಷ್ಟ್ರೀಯತೆಯ ವಿಕಾಸ
—ಎ. ಎಸ್. ನಂಜುಂಡಸ್ವಾಮಿ
೯೯ ಶ್ರೀಹರ್ಷ—ಸಿ. ಅನಂತಾಚಾರ್
೧೦೦ ಪ್ರಸಾರಾಂಗ—ಡಾ॥ ಕೆ. ವಿ. ಪುಟ್ಟಪ್ಪ
೧೦೧ ಷಟ್ಸ್ಥಲ ಸಿದ್ಧಾಂತ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೧೦೨ ಶಕ್ತಿವಿಶಿಷ್ಟಾದ್ವೈತವೇದಾಂತ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೧೦೩ ಉಪನಿಷತ್ ಪರಿಚಯ—ಸ್ವಾಮಿ ಸೋಮನಾಥಾನಂದ
೧೦೪ ತುಲಸೀದಾಸ—ಡಾ॥ ಹಿರಣ್ಮಯ
೧೦೫ ಸಿಹಿಮೂತ್ರರೋಗ—ಡಾ॥ ಎ. ನಾರಾಯಣಪ್ಪ

೧೦೬ ಭಾರತದಲ್ಲಿ ವಿಮೆ—ಕೆ. ಗೋಪಾಲ್

೧೦೭ ಸಕ್ಕರೆ—ಕೆ. ಎಸ್. ಲಕ್ಷ್ಮಣರಾವ್

೧೦೮ ಕಲಾಯ್ಡ್ ವಿಜ್ಞಾನ—ಕೆ. ಎಸ್. ಲಕ್ಷ್ಮಣರಾವ್

೧೦೯ ಎಕ್ಸ್-ಕಿರಣಗಳು—ಕೆ. ಶೇಷಾದ್ರಿ ಅಯ್ಯಂಗಾರ್

೧೧೦ ವೇಮನ—ಕೆ. ವೆಂಕಟರಾಮಪ್ಪ

೧೧೧ ವಾಯುಮಂಡಲ—ಕೆ. ಎಸ್. ಲಕ್ಷ್ಮಣರಾವ್

೧೧೨ ಅಂತರಿಕ್ಷಯಾನ—ವೈ. ವಿ. ಇಂದಿರಾಬಾಯಿ

೧೧೩ ಹತ್ತಿ—ಕೆ. ಎಸ್. ಲಕ್ಷ್ಮಣರಾವ್

೧೧೪ ಕನ್ನಡದಲ್ಲಿ ಅನುಭಾವ ಸಾಹಿತ್ಯ
—ಡಾ॥ ಹೆಚ್. ತಿಪ್ಪೇರುದ್ರಸ್ವಾಮಿ

೧೧೫ ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ

೧೧೬ ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ

ಸಾದಾ ಪ್ರತಿ ೨೫ ನ. ಪೈಸೆ ; ಉತ್ತಮ ಪ್ರತಿ ೩೭ ನ. ಪೈಸೆ